ತ್ರೈಮಾಸಿಕ

ಬೃಂದಾವನ ವಾಣಿ

ಸಂಚಿಕೆ 55

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಏಪ್ರಿಲ್, ೨೦೨೬



KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

ಪರಿವಿಡಿ

- ಸಂಪಾದಕೀಯ.....3
- ಸಂಪಾದಕೀಯ ತಂಡ.....4
- ಅಧ್ಯಕ್ಷರ ನುಡಿ.....5
- ಜ್ಞಾನ ದೀವಿಗೆ.....6
- ಸಂಕಲ್ಪ ರಿಟ್ರೀಟ್.....7
- ವಸಂತೋತ್ಸವ.....11
- ಸಂಕಲ್ಪ ಸಹಾಯ ಹಸ್ತ.....14
- ಪಾಜಕ ದರ್ಶನ.....16
- ಮಕರ ಸಂಕ್ರಾಂತಿ.....19
- ಪ್ರವಾಸ ಕಥನ.....21
- ಹೊಲಿಕೆ 22
- ಪ್ರವೃತ್ತಿ 23
- ವ್ಯಕ್ತಿ ವಿಶೇಷ 24

ಕಥಾ ಸಂಕಲನ

- ವೃತ್ತ.....28

ಕವನ ಸಂಕಲನ

- ಇರುಳು ಮುಗಿಯುವಾಗ.....33
- ಮೌನದ ರಾಗ.....34
- ಭರವಸೆ 35
- ಸಾಹಿತ್ಯ ವೆಂದರೆ.....36

- ಕರಕುಶಲ.....37

ಅಡಿಗೆ ಅರಮನೆ

- ಗರಿಬಡೆ 39
- ಆಲೂ ಬೆಂಡಿ.....40

- ಚಿಣ್ಣರ ಲೋಕ.....41
- ಕ್ಯಾಮರಾ ಕಣ್ಣಲ್ಲಿ.....45

ಸಂಪಾದಕೀಯ



ಪ್ರೀತಿಯ ಓದುಗರಿಗೆ ನಮಸ್ಕಾರಗಳು,

" ಕನ್ನಡಭಿಮಾನಿಗಳಿಗೆ ಮತ್ತೊಮ್ಮೆ ಬೃಂದಾವನ ವಾಣಿಯ ೫೫ನೆಯ ಸಂಚಿಕೆಯನ್ನು ಓದಲು ಸ್ವಾಗತ ". ಕಳೆದ ಸಂಚಿಕೆಯನ್ನು ಓದಿ ಮೆಚ್ಚುಗೆ ವ್ಯಕ್ತಪಡಿಸಿದ್ದಕ್ಕೆ ನಿಮ್ಮೆಲ್ಲರಿಗೂ ಸಂಪಾದಕ ತಂಡದಿಂದ ಧನ್ಯವಾದಗಳು.

ಕಳೆದ ವರ್ಷಕ್ಕಿಂತ ಈ ವರ್ಷದ ಭಾರಿ ಹಿಮಪಾತ, ಛಳಿ-ಗಾಳಿ ನಡುವೆಯೂ ಶಿವರಾತ್ರಿಯನ್ನು ಸಂಭ್ರಮದಿಂದ ಆಚರಿಸಿ ವಸಂತವನ್ನು ಸ್ವಾಗತಿಸಲು ನ್ಯೂಜೆರ್ಸಿಯ ಕನ್ನಡ ಜನ ಅಣಿಯಾಗಿದ್ದಾರೆ. ಪ್ರತಿ ವರ್ಷಕಿಂತ ಹೆಚ್ಚು ಹಿಮದ ಸುರಿಮಳೆಯ ದೆಸೆಯಿಂದ ಹಿಮ ಬಿದ್ದ ದಿನಗಳಲ್ಲಿ ಶಾಲೆಗಳನ್ನು ಮುಚ್ಚಲಾಯಿತು, ಅದರ ಪರಿಣಾಮ, ಮಕ್ಕಳ ವಸಂತಾಗಮನದಲ್ಲಿ ಕೊಡುವ ರಜೆಗಳಿಗೆ ಕತ್ತರಿ ಬಿದ್ದಿದೆ ಎಂದು ಮಕ್ಕಳಿಗೆ ದುಃಖ ಒಂದು ಕಡೆಯಾದರೆ, ಬೃಂದಾವನದಲ್ಲಿ ನಡೆದ ವಸಂತೋತ್ಸವದ ಸಡಗರ ಮತ್ತೊಂದು ಕಡೆ. ಶಿಶಿರದಲ್ಲಿ ಮರ ಗಿಡಗಳು ಕಳೆದುಕೊಂಡ ಎಲೆಗಳನ್ನು ವಸಂತಾಗಮನದಲ್ಲಿ (ಮಾರ್ಚ್ -ಏಪ್ರಿಲ್) ಮತ್ತೆ ಚಿಗುರಿ ಹಳೆ ಬೇರಲ್ಲಿ ಹೊಸ ಚಿಗುರುಗಳು ನಳನಳಿಸುವುದನ್ನು ನೋಡುವುದೇ ಕಣ್ಣಿಗೊಂದು ಹಬ್ಬ(ಯುಗದ ಆದಿ).

ಅಮೇರಿಕಾ, ಇಸ್ರೇಲ್ -ಇರಾನ್ ಯುದ್ಧವು, ಪ್ರಪಂಚದ-ಕಿನೇ ಯುದ್ದಕ್ಕೆ ಅಣಿ ಆಗುತ್ತಿರುವುದೇನೋ ಅನ್ನುವ ರೀತಿಯಲ್ಲಿ ಮುನ್ನುಗ್ಗುತ್ತಿದೆ. ಲೋಕ ಕಲ್ಯಾಣಕ್ಕಾಗಿ ಸಮುದ್ರ ಮಂಥನದ ವಿಷ ಕುಡಿದು ಪ್ರಪಂಚವನ್ನು ಕಾಪಾಡಿದ ನಂಜುಂಡನ ಹಾಗೆ, ಕಲಿಯುಗದ ಶಿವ ಬಂದು, ಈ ಯುದ್ಧ ಬೇಗ ನಿಲ್ಲುವಂತಾಗಲಿ, ಸಾವಿರಾರು ಅಮಾಯಕರು ಜೀವ ಕಳೆದುಕೊಳ್ಳುವುದನ್ನು ತಪ್ಪಿಸು ಭಗವಂತ ಎಂದು ಪ್ರಾರ್ಥನೆ ಮಾಡೋಣ.

ಮಹಾಶಿವರಾತ್ರಿ ನಂತರ ಬರುವ ಪ್ರಮುಖ ಹಬ್ಬವೇ ಯುಗಾದಿ (ಉಗಾದಿ), "ಹೊಸ ಯುಗದ ಆರಂಭ" ಎಂಬ ಅರ್ಥ. ಹಿಂದೂ ಪಂಚಾಂಗದ ಪ್ರಕಾರ ಇದು ಚೈತ್ರ ಮಾಸದ ಮೊದಲ ದಿನ. "ಪರಾಭವ ನಾಮ ಸಂವತ್ಸರ, ಪರಾಭವ ಅಂದರೆ ವ್ಯಕ್ತಿ ಸೋಲಲ್ಲ; ನಮ್ಮಲ್ಲಿರುವ ಅಹಂಕಾರದ ಸೋಲು ಎಂದು ಅರ್ಥ. ಎಲ್ಲರಿಗೂ ಆರೋಗ್ಯ, ಆಯಸ್ಸು, ಶಾಂತಿ ಸೌಭಾಗ್ಯ ಕೊಟ್ಟು, ಆಶೀರ್ವದಿಸಲಿ ಎಂದು ಬೃಂದಾವನ ವಾಣಿ ಸಂಪಾದಕ ತಂಡದ ಪರವಾಗಿ ದೇವರಲ್ಲಿ ಮೊರೆ ಇಡುತ್ತೇನೆ. ಚಂದ್ರಮಾನ ಯುಗಾದಿ ಮುಗಿದ ಬೆನ್ನಲ್ಲೇ ಸೌರಮಾನ ಯುಗಾದಿ, ಎಲ್ಲರಿಗೂ ಯುಗಾದಿಯ ಶುಭಾಶಯಗಳು.

"ಸರ್ವೇ ಜನಾಃ ಸುಖಿನೋ ಭವಂತು, ಸಮಸ್ತ ಸನ್ಮಂಗಳಾನಿ ಭವಂತು"

ಧನ್ಯವಾದಗಳು.

ಪಲ್ಲವಿ ಮಂಜುನಾಥ್,
ಸಾಹಿತ್ಯ ಬೃಂದಾವನ
'ಸಂಕಲ್ಪ' ತಂಡ
ಬೃಂದಾವನ ಕನ್ನಡ ಕೂಟ

ಸಂಪಾದಕೀಯ ತಂಡ



ಶ್ರೀವಿದ್ಯಾ ಪ್ರಶಾಂತ್
ಪ್ರಧಾನ ಸಂಪಾದಕರು



ರೋಹಿಣಿ ಮಹೇಶ್
ಸಂಚಿಕೆ ವಿನ್ಯಾಸ



ರಾಗಿಣಿ ದರ್ಶನ್
ವಿಷಯ ನಿರ್ವಹಣೆ



ಪಲ್ಲವಿ ಮಂಜುನಾಥ್
ವಿಷಯ ನಿರ್ವಹಣೆ



ವಾಣಿ ಗಿರೀಶ್
ವಿಷಯ ನಿರ್ವಹಣೆ



ಸೌಮ್ಯ ರವಿ
ವಿಷಯ ನಿರ್ವಹಣೆ

ಅಧ್ಯಕ್ಷರ ನುಡಿ



ನಮಸ್ಕಾರಗಳು,
ಮತ್ತೆ ಬಂದಿದೆ ವಸಂತ! ವಸಂತೋತ್ಸವ! ಬೃಂದಾವನ ಬಳಗದವರೆಲ್ಲರಿಗೂ ಪರಾಭವ ನಾಮ ಸಂವತ್ಸರದ ಯುಗಾದಿಯ ಶುಭಾಶಯಗಳು! ಹೊಸ ವರ್ಷ, ಹೊಸ ಚಿಂತನೆಗಳು ನಮ್ಮಲ್ಲಿ ಮೂಡಲಿ.
ಈ ಬಾರಿಯ ಚಳಿಗಾಲ ಇನ್ನು ಮುಗಿದಿದೆ ಎಂದೇ ಅನಿಸುವುದಿಲ್ಲ. ಹಲವಾರು ಕಡೆ ಕಳೆದ ಬಾರಿಯ ಹಿಮಪಾತ ಕರಗಿದರೂ, ಚಳಿಯ ಕೊರೆತ ಇನ್ನೂ ನಮ್ಮ ಅನುಭವಕ್ಕೆ ಬರುತ್ತಿದೆ.

ಹೃದಯಪೂರ್ಣತೆ (Heartfulness) ಆಧ್ಯಾತ್ಮಿಕ ಶಿಬಿರ
ನಮ್ಮ ಮೊದಲ ಕಾರ್ಯಕ್ರಮ – ಸಂಕಲ್ಪ ತಂಡದ ಪದಾಧಿಕಾರಿಗಳೊಡನೆ Monroe ನಲ್ಲಿ "Heartfulness" ಆಯೋಜಿಸಿದ್ದ ಆಧ್ಯಾತ್ಮಿಕ ಶಿಬಿರ. ಕಳೆದ ವರ್ಷ ನಮ್ಮ ತಂಡದಿಂದ ನಡೆದ ಕಾರ್ಯಕ್ರಮಗಳು, ನಮ್ಮ ನಡುವೆ ನಡೆದ ವಿಚಾರ ವಿನಿಮಯಗಳು – ಇವೆಲ್ಲದರ ಒಂದು ಅವಲೋಕನ ಈ ಶಿಬಿರದಲ್ಲಿ ನಡೆಯಿತು. Heartfulness ತಂಡದ ಜಗದೀಶ್, ರೂಪ, ಮತ್ತು ಬೃಂದಾವನದ ಮಾಜಿ ಅಧ್ಯಕ್ಷರಾದ ಪದ್ಮಿನಿ ಹೇಮಂತ್ ಅವರು ಆಯೋಜಿಸಿದ ಈ ಕಾರ್ಯಕ್ರಮಕ್ಕೆ ಸಂಕಲ್ಪ ತಂಡದ ಪರವಾಗಿ ತುಂಬು ಹೃದಯದ ಧನ್ಯವಾದಗಳು.

"Art of Public Speaking – 101" ಕಾರ್ಯಾಗಾರ
ಬೃಂದಾವನ ತಂಡದ ಶಾಲೆಯ ಶೈಕ್ಷಣಿಕ ಶಿಬಿರದ ಮೂಲಕ ಆಯೋಜಿಸಿದ್ದ "Art of Public Speaking – 101" – ಸುನಿಲ್ ರಾಬರ್ಟ್ ವುಪ್ಪುಲ ಅವರ ನೇತೃತ್ವದಲ್ಲಿ – ನಮ್ಮ ಬೃಂದಾವನ ಶಾಲೆಯ ಮಕ್ಕಳಿಗಾಗಿ ಆಯೋಜಿಸಲಾಗಿತ್ತು. ಸಾರ್ವಜನಿಕವಾಗಿ ಧೈರ್ಯವಾಗಿ ಭಾಷಣ ಮಾಡುವ ಈ ಕಾರ್ಯಾಗಾರದಲ್ಲಿ ಮಕ್ಕಳೆಲ್ಲರೂ ಬಹಳ ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮವನ್ನು ಮೆಚ್ಚಿದರು.

ವಸಂತೋತ್ಸವ – ಯುಗಾದಿ ಆಚರಣೆ
ವಸಂತೋತ್ಸವ ಕಾರ್ಯಕ್ರಮ ಬೃಂದಾವನದ ಮೊದಲ ವಿಶೇಷ ಕಾರ್ಯಕ್ರಮ. ಈ ಬಾರಿಯ ಯುಗಾದಿಯನ್ನು East Windsor ಶಾಲೆಯಲ್ಲಿ ಆಚರಿಸಿದೆವು. ಸುಮಾರು 350 ಕ್ಕೂ ಹೆಚ್ಚು ಬೃಂದಾವನ ಬಳಗ ಸೇರಿ ಸಂತೋಷದಿಂದ ಸಂಭ್ರಮಿಸಿದರು. ಹಬ್ಬದ ಊಟದೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಯುಗಾದಿ ಹಬ್ಬದ ಸಾಂಪ್ರದಾಯಿಕ ಬೇವು-ಬೆಲ್ಲ ಹಂಚಿಕೆ ಮತ್ತು ಪಂಚಾಂಗ ಶ್ರವಣವನ್ನು ಶ್ರೀ ಆಚಾರ್ಯ ವಿರಾಜ್ ಅವರು ನಿರ್ವಹಿಸಿದರು. ಸಾಹಿತ್ಯ ವಾಚನ ,ಮಕ್ಕಳ ನಾಟಕ, ಸಂಕೇತ ಗೀತೆ, ಪದಾಧಿಕಾರಿಗಳ ಹಾಸ್ಯ ನಾಟಕ, ಮತ್ತು ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ Grammy-nominated ವಾರಿಜಾಶ್ರೀ ವೇಣುಗೋಪಾಲ್ ಅವರ ಸುಮಧುರ ವಾದ್ಯಗೋಷ್ಠಿ – ಎಲ್ಲರ ಮನಸ್ಸನ್ನು ಗೆದ್ದಿತು.

ಬುಕ್ ಕ್ಲಬ್ – ಓದುಗರ ಚಾವಡಿ
ನಮ್ಮ ಬುಕ್ ಕ್ಲಬ್ "ಓದುಗರ ಚಾವಡಿ"ಯಲ್ಲಿ ನಡೆದ ಶ್ರೀ ವಸುಧೇಂದ್ರ ಅವರ "ತೇಜೋ-ತುಂಗಭದ್ರಾ" ಕಾದಂಬರಿಯ ಸಂವಾದ ಕಾರ್ಯಕ್ರಮವನ್ನು ಹಲವಾರು ಸಾಹಿತ್ಯಾಸಕ್ತರು ಬಹಳವಾಗಿ ಮೆಚ್ಚಿಕೊಂಡರು. ಸುಮಾರು ಮೂರು ಗಂಟೆಗಳ ಕಾಲ ನಡೆದ ಈ ವಿಚಾರ ವಿನಿಮಯದಲ್ಲಿ ಸಾಹಿತ್ಯದ ಆಳವಾದ ಅಧ್ಯಯನ, ಬರವಣಿಗೆಯ ಶೈಲಿ, ಮತ್ತು ಮನಮುಟ್ಟುವ ವಿಷಯಗಳನ್ನು ಎಲ್ಲರೊಡನೆ ಹಂಚಿಕೊಳ್ಳಲಾಯಿತು.
ಮತ್ತೊಮ್ಮೆ ಮುಂದಿನ ಸಂಚಿಕೆಯಲ್ಲಿ ಭೇಟಿಯಾಗೋಣ..

ನಿಮ್ಮ,

ಸುನೇಲ್ ಹುಲಿಕೆರೆ,
ಅಧ್ಯಕ್ಷರು,
"ಸಂಕಲ್ಪ ತಂಡ",
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ.



ಶ್ರೀ ಯೋಗೀಂದ್ರ ಭಟ್ ಉಳಿ
ಶ್ರೀ ಕೃಷ್ಣ ವೃಂದಾವನ, ನ್ಯೂ ಜೆರ್ಸಿ

ಜೀವನೋತ್ಸಾಹ

ಮನಸ್ಸಿಗೆ ಬೇಸರ ತರುವ ಪ್ರಸಂಗಗಳು ನಮ್ಮ ಬದುಕಿನಲ್ಲಿ ಆಗಾಗ ಸೃಷ್ಟಿಯಾಗುತ್ತಲೇ ಇರುತ್ತವೆ. ಒಂದಷ್ಟುಕಾಲ ನಮ್ಮನ್ನು ವಿಚಲಿತರನ್ನಾಗಿಸುತ್ತವೆ. ಸಂತೋಷದ ಸಂದರ್ಭಗಳೂ ಹಾಗೆಯೇ. ಆಹ್ಲಾದಕರವಾಗಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಲೇ ಇರುತ್ತವೆ, ಹಿಂದಿನ ದುಃಖಗಳನ್ನೆಲ್ಲ ಮರೆಸುತ್ತವೆ. ಹೀಗೆ ಒಂದಾದಮೇಲೊಂದರಂತೆ ಬಂದು ಅಪ್ಪಳಿಸುತ್ತಲೇ ಇರುವ ಈ ಸುಖದುಃಖ ಪ್ರಸಂಗಗಳೆಂಬುದು ಎಂದೂ ನಿಲ್ಲದ ಸಮುದ್ರದ ಅಲೆಗಳಂತೆ. ನಿತ್ಯ ನಿರಂತರ.

ಎಲ್ಲ ಗಾತ್ರದ ಅಲೆಗಳನ್ನೂ ಎದುರಿಸಿ ಸ್ಥಿರವಾಗಿ ನಿಲ್ಲುವ ಕಲ್ಲಿನಂತೆ ನಮ್ಮ ಜೀವನೋತ್ಸಾಹವಿರಬೇಕು. ಅಲೆಗಳ ನಿರಂತರ ಪ್ರಹಾರ ತೀರದಲ್ಲಿರುವ ಕಲ್ಲನ್ನು ಸವೆಸಿ, ಸುಂದರ ಆಕೃತಿಯನ್ನು ಕೊಡುವಂತೆ ಸುಖದುಃಖಾತ್ಮಕವಾದ ಜೀವನಾನುಭವಗಳೇ ನಮ್ಮ ಬದುಕನ್ನು ರೂಪಿಸಬೇಕು. ಇದು ಪ್ರಕೃತಿ ನಿಯಮ. ಇದು ಯಾರನ್ನೂ ಬಿಡದು.

ಸುಂದರ ಕನಸಿನ ಜೊತೆಯ ಸಿಹಿನಿದ್ದೆಯನ್ನು ಸವಿಯುತ್ತಾ ಮೈಮರೆತ ನಮಗೆ ಬೆಳಗಾಯಿತೆಂದರೆ ಎಚ್ಚರವಾಗಲೇಬೇಕು. ಆದರೆ ಎದ್ದಕೂಡಲೇ ನೆನಪಾಗುವ ಸವಾಲುಗಳು ನಮ್ಮನ್ನು ಎದೆಗುಂದಿಸಬಾರದು. ಇಂದು ಬಂದದ್ದು ಬರಲಿ, ಎದುರಿಸಿ ಗೆದ್ದೇ ಗೆಲ್ಲುತ್ತೇನೆ ಎಂಬ ಜೀವನೋತ್ಸಾಹ ನಮ್ಮ ಮನಸ್ಸಿನೊಳಗೆ ಕಲ್ಲುಬಂಡೆಯಂತೆ ಗಟ್ಟಿಯಾಗಿ ನಿಂತರೆ ಅಂದು ನಾವು ಗೆದ್ದಂತೆಯೇ. ಎಷ್ಟು ದೊಡ್ಡ ಗಾತ್ರದ ಅಲೆಯೇ ಬಂದು ಅಪ್ಪಳಿಸಿದರೂ ಗಟ್ಟಿಯಾಗಿ ನಿಂತ ಬಂಡೆಗಲ್ಲನ್ನು ಒಂದುಕ್ಷಣವಷ್ಟೇ ಮುಳುಗಿಸಿಬಿಡಬಹುದು ಹೊರತು, ಆ ಸೋಲು ಶಾಶ್ವತವಲ್ಲ. ಮೈಮೇಲೆ ಏರಿ ಬಂದ ಆ ಅಲೆಯು ಕೆಳಜಾರಲೇಬೇಕು. ಬಂಡೆಯು ಮತ್ತೆ ತಲೆಯೆತ್ತಿ ನಿಲ್ಲಲೇಬೇಕು.

ನಮ್ಮ ಏಳಿಗೆಯನ್ನು ಸಹಿಸದ ಕೆಲವರು ಏನೇನೋ ಕಿರುಕುಳಗಳನ್ನು ಉಂಟು ಮಾಡಬಹುದು, ತೊಂದರೆ ಕೊಡಬಹುದು, ನಮಗೆ ಅಪಮಾನವಾಗುವಂತೆಯೂ ನಡೆದುಕೊಳ್ಳಬಹುದು. ಅದೊಂದುರೀತಿ ಎತ್ತರಕ್ಕೆ ಬೆಳೆದುನಿಂತ ಮರವನ್ನು ಬಿರುಗಾಳಿಯು ಬಲವಾಗಿ ತಳ್ಳುವಂತೆ. ಬುಡದ ಮಣ್ಣುಗಟ್ಟಿಯಾಗಿದ್ದರೆ, ಬೇರು ಬಲಿಷ್ಠವಾಗಿದ್ದರೆ ಮರಕ್ಕೇನೂ ಆಗುವುದಿಲ್ಲ. ಹಾಗೆಯೇ ನಮ್ಮ ಸಾಧನೆಯೆಂಬುವುದು ನ್ಯಾಯ, ಧರ್ಮಗಳೆಂಬ ಗಟ್ಟಿನೆಲೆಯಲ್ಲಿ ಮತ್ತು ಪ್ರಾಮಾಣಿಕತೆ ಹಾಗೂ ಕಠಿಣ ಪರಿಶ್ರಮವೆಂಬ ಬಲವಾದ ಬೇರಿನಿಂದ ಬದ್ಧವಾಗಿದ್ದರೆ ದುರುಳರ ಯಾವ ದುಷ್ಟಾಟೋಪಗಳೂ ನಮ್ಮನ್ನು ಬಾಧಿಸಲು ಸಾಧ್ಯವಿಲ್ಲ, ಮತ್ತು ನಮ್ಮ ಉತ್ಸಾಹದ ಅದಮ್ಯತೆಗೆ ಯಾವತ್ತಿಗೂ ಭಂಗವೆನ್ನುವುದಿಲ್ಲ.

ಕೆಲವೊಮ್ಮೆ ನಮ್ಮ ಮನಸ್ಸಿನಲ್ಲಿ ಮೂಡುವ ಏನೇನೋ ಕಲ್ಪನೆ, ಭಯ, ಆತಂಕಗಳೇ ನಮ್ಮ ಉತ್ಸಾಹಕ್ಕೆ ತಣ್ಣೀರೆರಚುವುದುಂಟು. ಅದನ್ನು ಮಾತ್ರ ನಾವೇ ಸ್ವತಃ ನಿಯಂತ್ರಿಸಿಕೊಳ್ಳಬೇಕು. ಹೆಚ್ಚಿನ ಸಂದರ್ಭಗಳಲ್ಲಿ ಹಿಂದಿನ ಕೆಟ್ಟ ಅನುಭವಗಳೇ ಸ್ಮರಣೆಗೆ ಬಂದು ನಮ್ಮನ್ನು ಹೆದರಿಸುವುದು. ಅವುಗಳನ್ನು ನಿರ್ಲಕ್ಷಿಸಬೇಕು. ಹಾಗೆ ನೋಡಿದರೆ ನಮ್ಮ ಜೀವನದಲ್ಲಿ ಹಿಂದೆ ನಡೆದ ಒಳ್ಳೆಯ ಘಟನೆಗಳೂ ಬೇಕಾದಷ್ಟಿರುತ್ತವೆ. ಅವುಗಳನ್ನು ನಾವೇ ನೆನಪಿಸಿಕೊಳ್ಳಬೇಕು. ನಮ್ಮ ಪ್ರಾಮಾಣಿಕ ಪ್ರಯತ್ನಕ್ಕೆ ದೇವರಸಹಾಯ ಇದ್ದೇ ಇರುತ್ತದೆ, ನಮಗೆ ಒಳ್ಳೆಯದೇ ಆಗುತ್ತದೆ ಎಂಬ ಆಶಾಭಾವವು ಮಾತ್ರ ನಮ್ಮ ಜೀವನೋತ್ಸಾಹವನ್ನು ಹಸಿರಾಗಿಡಲು ಸಾಧ್ಯ.

ಎಷ್ಟು ಸಾವು ನೋವುಗಳು ಸಂಭವಿಸಿದರೂ ಇರುವೆಯ ಸಾಲು ತನ್ನ ಗುರಿ ತಲುಪುವ ತನಕ ವಿರಮಿಸುವುದಿಲ್ಲ. ಗಾಳಿ, ಮಳೆ ಇತ್ಯಾದಿ ಎಷ್ಟು ವಿಘ್ನಗಳು ಎದುರಾದರೂ ಹಕ್ಕಿಯು ಗೂಡನ್ನು ಕಟ್ಟಿಕೊಳ್ಳದೆ ಎಲ್ಲೆಲ್ಲೋ ತನ್ನ ಮೊಟ್ಟೆಗಳನ್ನಿಡುವುದಿಲ್ಲ. ಹಾಗೆಯೇ ಎಂತಹ ಸಾವಲು, ಸಮಸ್ಯೆಗಳು ಬಂದರೂ ನಮ್ಮ ಜೀವನೋತ್ಸಾಹವೆಂದಿಗೂ ಕುಗ್ಗಬಾರದು. ಎಷ್ಟು ಸಲ ಕತ್ತರಿಸಿದರೂ ಮತ್ತೆ ತಲೆಯೆತ್ತಿ ಹಚ್ಚಹಸಿರಾಗಿ ನಿಲ್ಲುವ ಹುಲ್ಲುಗಾವಲಿನಂತೆ ನಮ್ಮ ಜೀವನದ ಹುರುಪು ಕೂಡ ಯಾವತ್ತಿಗೂ ಹಸನಾಗಿರಬೇಕು. ಹೊಸದಾಗಿರಬೇಕು.



ರಮೇಶ್ ಭಟ್
ನ್ಯೂ ಜೆರ್ಸಿ

ಬೃಂದಾವನ BOD–BOT ರಿಟ್ರೀಟ್: ಮನಸ್ಸಿಗೆ ಮುದ ನೀಡಿದ ಹೃದಯಸ್ಪರ್ಶಿ ಅನುಭವ

ಡಿಸೆಂಬರ್ 25ರಂದು, ನಮ್ಮ ಅಧ್ಯಕ್ಷರಾದ ಸುನಿಲ್ ಅವರಿಂದ ಜನವರಿ 17, 2026ರಂದು "ರಿಟ್ರೀಟ್" ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂಬ ಸಂದೇಶವನ್ನು ಎಲ್ಲಾ BOD ಸದಸ್ಯರು ಸ್ವೀಕರಿಸಿದರು. ಮೊದಲಿಗೆ ಇದು ಸಾಮಾನ್ಯವಾಗಿ ಒಂದಿಷ್ಟು ಮಾತುಕತೆ, ಊಟ ಮತ್ತು ಹರಟೆ ಎಂಬ ಭಾವನೆ ಎಲ್ಲರಲ್ಲೂ ಇತ್ತು. ಆದರೆ ಕಾರ್ಯಕ್ರಮದ ಒಂದು ವಾರ ಮೊದಲು, ಇದು ಹಾರ್ಟ್‌ಫುಲ್‌ನೆಸ್ ತಂಡದಿಂದ ನಾಲ್ಕು ಗಂಟೆಗಳ ವಿಶೇಷ ಸೆಷನ್ ಹಾಗೂ ಮಧ್ಯಾಹ್ನದ ಊಟವಿರುವ ಕಾರ್ಯಕ್ರಮ ಎಂದು ತಿಳಿದು ಎಲ್ಲರಲ್ಲೂ ಕುತೂಹಲ ಹೆಚ್ಚಿತು.

ಕಾರ್ಯಕ್ರಮದ ದಿನ ಬೆಳಿಗ್ಗೆ ಭಾರೀ ಹಿಮಪಾತ. ಕೆಲವರು ಕಾರ್ಯಕ್ರಮ ರದ್ದಾಗುತ್ತದೆಯೇ ಎಂದು ಪ್ರಶ್ನಿಸಿದರೂ, ಯೋಜನೆಯಂತೆ ಕಾರ್ಯಕ್ರಮ ರದ್ದಾಗದೆ ನಡೆಯಿತು. ಬೆಳಿಗ್ಗೆ 10 ಗಂಟೆಗೆ ಸ್ಥಳಕ್ಕೆ ತಲುಪಿದಾಗ, ಧ್ಯಾನಕ್ಕೆ ತಕ್ಕಂತಹ ಅದ್ಭುತ ವಾತಾವರಣ ಎಲ್ಲರನ್ನು ಆಕರ್ಷಿಸಿತು. ಕಾಫಿ ಮತ್ತು ಸ್ನ್ಯಾಕ್ಸ್‌ಗಳೊಂದಿಗೆ ಆತ್ಮೀಯ ಸ್ವಾಗತ ದೊರೆಯಿತು. ರಾಗಿಣಿ ಅವರು ಮಕರ ಸಂಕ್ರಾಂತಿಯ ಪ್ರಯುಕ್ತ "ಸಂಕ್ರಾಂತಿ ಕಾಳು"ಗಳನ್ನು ಎಲ್ಲರಿಗೂ ತಂದಿದ್ದು ವಿಶೇಷ.

ಒಟ್ಟು 16 ಮಂದಿ BOD ಮತ್ತು BOT ಸದಸ್ಯರು ಈ ವಿಶೇಷವಾಗಿ ಆಯೋಜಿಸಿದ ರಿಟ್ರೀಟ್‌ನಲ್ಲಿ ಭಾಗವಹಿಸಿದರು. ಬೃಂದಾವನ ಲೋಗೋ ಮತ್ತು ಸ್ವಾಗತ ಸಂದೇಶ ಎಲ್ಲರ ಮನ ಗೆದ್ದವು.

ಸೆಷನ್‌ಗಳ ಹೈಲೈಟ್ಸ್

• ಪರಸ್ಪರ ಪ್ರಶಂಸೆಯೊಂದಿಗೆ ಆರಂಭ: ಪರಸ್ಪರ ಪ್ರಶಂಸೆಯೊಂದಿಗೆ ಆರಂಭವಾದ ನಮ್ಮ ಸಂಭ್ರಮ: ಕಳೆದ ಒಂದು ವರ್ಷದಲ್ಲಿ ಕಾರ್ಯಕ್ರಮಗಳು, ಯೋಜನೆಗಳು, ಕಾರ್ಯಗತಗೊಳಿಸುವಿಕೆ–ಇವುಗಳ ಬಗ್ಗೆ ಮಾತ್ರ ಮಾತನಾಡುತ್ತಿದ್ದ ನಾವು, ಮೊದಲ ಬಾರಿಗೆ ಪರಸ್ಪರ ನೀಡಿದ ಹೃದಯಸ್ಪರ್ಶಿ ಪ್ರಶಂಸೆಗಳು ಎಲ್ಲರ ಮುಖಗಳಿಗೂ ನಿಜವಾದ ಮಿನುಗು ತಂದವು.

ನಮ್ಮದೇ BOD ಮತ್ತು BOT ಸದಸ್ಯರು ಪರಸ್ಪರರ ಕೆಲಸವನ್ನು ಮೆಚ್ಚಿ, ಅವರ ಶ್ರಮ, ಸಮರ್ಪಣೆ ಮತ್ತು ಬೃಂದಾವನ ಬೆಳವಣಿಗೆಗೆ ನೀಡಿದ ಕೊಡುಗೆಗಳನ್ನು ಹೃದಯಪೂರ್ವಕವಾಗಿ ಗುರುತಿಸಿದ ಕ್ಷಣಗಳು ವಿಶೇಷವಾಗಿದ್ದವು.

ಈ ಮಾತುಗಳನ್ನು ಕೇಳಿದ ಪ್ರತಿಯೊಬ್ಬರೂ ಸಂತೋಷಗೊಂಡರು; ತಮ್ಮ ಪರಿಶ್ರಮಕ್ಕೆ ದೊರೆತ ಮಾನ್ಯತೆ ಅವರಿಗೆ ತೃಪ್ತಿಯನ್ನೂ, ಮತ್ತಷ್ಟು ಉತ್ಸಾಹವನ್ನೂ ನೀಡಿತು. ಪರಸ್ಪರರ ಬಗ್ಗೆ ಕೇಳಿದ ಈ ಅದ್ಭುತ ಮಾತುಗಳು ನಮ್ಮ ತಂಡದ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸಿದವು ಮತ್ತು "ನಾವು ಒಟ್ಟಾಗಿ ಮಾಡುತ್ತಿರುವುದು ನಿಜವಾಗಿಯೂ ಅರ್ಥಪೂರ್ಣ" ಎಂಬ ಭಾವನೆ ಎಲ್ಲರಲ್ಲೂ ಮೂಡಿತು.

. ಉದಯ್ ಕುಮಾರ್ ಅವರ ಹಾರ್ಟ್‌ಫುಲ್‌ನೆಸ್ ಧ್ಯಾನ – ಮನಸ್ಸಿನ ಶುದ್ಧೀಕರಣ: ಉದಯ್ ಕುಮಾರ್ ಅವರ ಹಾರ್ಟ್‌ಫುಲ್‌ನೆಸ್ ಧ್ಯಾನ – ಮನಸ್ಸಿನ ಶುದ್ಧೀಕರಣ: ಮನಸ್ಸನ್ನು ಹೇಗೆ ಶುದ್ಧಗೊಳಿಸಬೇಕು, ಅಂತರಂಗವನ್ನು ಹೇಗೆ ಹಗುರಗೊಳಿಸಬೇಕು ಎಂಬ ವಿಷಯವನ್ನು ಅವರು ಅತ್ಯಂತ ಸುಂದರವಾಗಿ, ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ವಿವರಿಸಿದರು. ಸುಮಾರು 20 ನಿಮಿಷಗಳ ಪ್ರಾಯೋಗಿಕ ಧ್ಯಾನಾಭ್ಯಾಸ ಎಲ್ಲರಿಗೂ ಹೊಸದೊಂದು ಶಾಂತಿಯ ಅನುಭವ ನೀಡಿತು. ದಿನನಿತ್ಯದ ಜೀವನದಲ್ಲಿ ಅನುಸರಿಸಬಹುದಾದ ಸರಳ ವಿಧಾನಗಳನ್ನು ಕಲಿಯುವ ಅವಕಾಶ ದೊರಕಿತು.

ಅವರು ವಿಶೇಷವಾಗಿ "ಹೃದಯದ ಶುದ್ಧತೆ" ಬಗ್ಗೆ ಮಾತನಾಡಿದ ರೀತಿಯೇ ಎಲ್ಲರ ಮನಸ್ಸನ್ನು ಗೆದ್ದಿತು. ಹೃದಯವನ್ನು ಶುದ್ಧಗೊಳಿಸುವುದು ಎಂದರೆ ಕೇವಲ ಒತ್ತಡವನ್ನು ಕಡಿಮೆ ಮಾಡುವುದು ಮಾತ್ರವಲ್ಲ, ನಮ್ಮೊಳಗಿನ ನಕಾರಾತ್ಮಕ ಭಾವನೆಗಳು –ಅಸಹನೆ, ಅಸೂಯೆ, ಕೋಪ, ಆತಂಕ–ಇವುಗಳನ್ನು ನಿಧಾನವಾಗಿ ಕರಗಿಸುವ ಪ್ರಕ್ರಿಯೆ ಎಂದು ಅವರು ವಿವರಿಸಿದರು.

ಹೃದಯ ಶುದ್ಧವಾದಾಗ ದೊರೆಯುವ ಲಾಭಗಳನ್ನು ಅವರು ಅತ್ಯಂತ ಸ್ಪಷ್ಟವಾಗಿ ತಿಳಿಸಿದರು:

- ಮನಸ್ಸು ಹಗುರವಾಗುತ್ತದೆ, ನಿರ್ಧಾರಗಳು ಸ್ಪಷ್ಟವಾಗುತ್ತವೆ.
- ಸಂಬಂಧಗಳು ಸುಧಾರಿಸುತ್ತವೆ, ಏಕೆಂದರೆ ಹೃದಯದಲ್ಲಿ ಜಾಗ ಹೆಚ್ಚಾದಾಗ ಸ್ವೀಕಾರಶೀಲತೆ ಹೆಚ್ಚುತ್ತದೆ.
- ಒತ್ತಡ ಮತ್ತು ಆತಂಕ ಕಡಿಮೆಯಾಗುತ್ತದೆ, ದೈನಂದಿನ ಜೀವನದಲ್ಲಿ ಸಮತೋಲನ ಹೆಚ್ಚುತ್ತದೆ.
- ಸೃಜನಶೀಲತೆ ಮತ್ತು ಒಳನೋಟಗಳು ಹೆಚ್ಚಾಗುತ್ತವೆ, ಏಕೆಂದರೆ ಮನಸ್ಸು ಅಡ್ಡಿಗಳಿಂದ ಮುಕ್ತವಾಗುತ್ತದೆ.
- ಸ್ವತಃ ಸಂಪರ್ಕ ಗಾಢವಾಗುತ್ತದೆ, ಇದು ಆಧ್ಯಾತ್ಮಿಕ ಬೆಳವಣಿಗೆಗೆ ದಾರಿ ಮಾಡಿಕೊಡುತ್ತದೆ.

ಅವರ ಮಾತುಗಳು ಮತ್ತು ಅಭ್ಯಾಸದ ಅನುಭವವು ಎಲ್ಲರಲ್ಲೂ ಒಂದು ನಿಶ್ಶಬ್ದ ಶಾಂತಿಯನ್ನು ಮೂಡಿಸಿತು. "ಹೃದಯವನ್ನು ಶುದ್ಧಗೊಳಿಸುವುದು ಒಂದು ಅಭ್ಯಾಸ, ಆದರೆ ಅದರಿಂದ ಬರುವ ಫಲಗಳು ಜೀವನವನ್ನೇ ಪರಿವರ್ತಿಸುತ್ತವೆ" ಎಂಬ ಸಂದೇಶ ಎಲ್ಲರ ಮನದಲ್ಲೂ ಆಳವಾಗಿ ಉಳಿಯಿತು.

• ಮನೆಯ ಊಟ – ಪ್ರಭಾ ಅವರ ಕೈಚಳಕ: ಮೋಸರನ್ನ, ಪೊಂಗಲ್, ಸಿಹಿ, ಚಿಪ್ಸ್—ಪ್ರಭಾ ಅವರ ಕೈಚಳಕದಲ್ಲಿ ಸಿದ್ಧವಾದ ಪ್ರತಿಯೊಂದು ಪದಾರ್ಥವೂ ಮನೆಯ ಸುವಾಸನೆ ತುಂಬಿಕೊಂಡಿತ್ತು. ಹಾರ್ಟ್‌ಫುಲ್‌ನೆಸ್ ತಂಡದಿಂದ ಅತ್ಯಂತ ಸುಂದರವಾಗಿ ವ್ಯವಸ್ಥೆ ಮಾಡಲಾದ ಈ ಮಧ್ಯಾಹ್ನದ ಊಟ ಎಲ್ಲರಿಗೂ ಹೃದಯ ತುಂಬುವ ಅನುಭವ ನೀಡಿತು. ಊಟದ ಸುವಾಸನೆ, ಸೌಹಾರ್ದತೆಯ ವಾತಾವರಣ ಮತ್ತು ಆತಿಥ್ಯದ ಮಧುರತೆ—ಇವುಗಳೆಲ್ಲ ಸೇರಿ ಊಟವನ್ನು ನಿಜವಾದ ಅರ್ಥದಲ್ಲಿ "ಮನದ ಹಬ್ಬ"ವನ್ನಾಗಿ ಮಾಡಿತು.

ಊಟದ ಮಧ್ಯೆ ಸದಸ್ಯರು ಕನ್ನಡ ಬಿಗ್‌ಬಾಸ್ ಬಗ್ಗೆ ನಡೆಸಿದ ಚುಟುಕು ಚರ್ಚೆಗಳು, ನಗು-ನಲಿವು, ಹಾಸ್ಯ—ಇವುಗಳೆಲ್ಲಾ ವಾತಾವರಣಕ್ಕೆ ಮತ್ತೊಂದು ಮಜಾ ಸೇರಿಸಿದವು. ಕೆಲವರು ತಮ್ಮ ಫೇವರಿಟ್ ಸ್ಪರ್ಧಿಗಳ ಬಗ್ಗೆ ಜೋರಾಗಿ ಅಭಿಪ್ರಾಯ ಹಂಚಿಕೊಂಡರೆ, ಕೆಲವರು ಹಾಸ್ಯಭರಿತ ಟೀಕೆಗಳ ಮೂಲಕ ಎಲ್ಲರನ್ನೂ ನಗಿಸಿದರು. ಊಟದ ರುಚಿ ಮತ್ತು ಮಾತುಕತೆಯ ಮಜಾ—ಇವೆರಡೂ ಸೇರಿ ಮಧ್ಯಾಹ್ನವನ್ನು ಇನ್ನಷ್ಟು ಸ್ಮರಣೀಯವಾಗಿಸಿತು.

ಮಧ್ಯಾಹ್ನದ ಗುಂಪು ಚಟುವಟಿಕೆ: ಸ್ಟ್ರಾ ಬಳಸಿ ಮೌನದಲ್ಲಿ ಮಾದರಿ ನಿರ್ಮಿಸುವ ಈ ಚಟುವಟಿಕೆ ಎಲ್ಲರಲ್ಲೂ ಸೃಜನಶೀಲತೆಯನ್ನು ಮಾತ್ರವಲ್ಲ, ಪರಸ್ಪರರ ಭಾವನೆಗಳನ್ನು ಓದುವ ಸಾಮರ್ಥ್ಯವನ್ನೂ ಉತ್ತೇಜಿಸಿತು. ಮಾತಿಲ್ಲದೆ ತಂಡವಾಗಿ ಕೆಲಸ ಮಾಡುವ ಅನುಭವವು ಎಲ್ಲರಿಗೂ ಹೊಸದೊಂದು ಒಳನೋಟ ನೀಡಿತು—ಸಂವಹನ ಎಂದರೆ ಕೇವಲ ಮಾತುಗಳಲ್ಲ, ಕಣ್ಣು, ಸೂಚನೆ, ಸಹಕಾರ ಮತ್ತು ಪರಸ್ಪರ ನಂಬಿಕೆಯೂ ಆಗಿದೆ ಎಂಬುದನ್ನು ಎಲ್ಲರೂ ಅನುಭವಿಸಿದರು.

ಈ ಚಟುವಟಿಕೆಯಿಂದ ಕೆಲವು ಸದಸ್ಯರಿಗೆ ವಿಶೇಷ ಲಾಭವಾಯಿತು. ನಮ್ಮ ತಂಡದಲ್ಲಿರುವ ಅನುಭವಿಗಳೂ, ಶಿಕ್ಷಕರೂ ತಮ್ಮ ದಿನನಿತ್ಯದ ಬೋಧನೆಯಲ್ಲಿ ಬಳಸುವ ವಿಧಾನಗಳನ್ನು ಇಲ್ಲಿ ಸಹಜವಾಗಿ ಅನ್ವಯಿಸಿದರು. ಅವರ ಅನುಭವದಿಂದ ಇತರ ಸದಸ್ಯರು ಸಹ ಕಲಿಯುವ ಅವಕಾಶ ದೊರಕಿತು. ಶಿಕ್ಷಕರು ಮತ್ತು ಅನುಭವಿಗಳು ನೀಡಿದ ಸಣ್ಣ ಸೂಚನೆಗಳು, ಅವರ ಕೆಲಸ ಮಾಡುವ ಶೈಲಿ, ಮತ್ತು ತಂಡವನ್ನು ಒಗ್ಗೂಡಿಸುವ ವಿಧಾನಗಳು ಚಟುವಟಿಕೆಗೆ ಮತ್ತೊಂದು ಮೌಲ್ಯವನ್ನು ಸೇರಿಸಿದವು.

ಈ ಚಟುವಟಿಕೆ ಕೇವಲ ಮನರಂಜನೆ ಮಾತ್ರವಲ್ಲ, ನಮ್ಮ ತಂಡದೊಳಗಿನ ಸಾಮರ್ಥ್ಯಗಳನ್ನು ಗುರುತಿಸುವ ಮತ್ತು ಪರಸ್ಪರ ಕಲಿಯುವ ಸುಂದರ ವೇದಿಕೆಯಾಯಿತು.

ಜಗದೀಶ್ ಕಾಂತರಾಜ್ ಅವರ ಸಂವಹನ ಕೌಶಲ್ಯ ಸೆಷನ್: ಗುಂಪಿನಲ್ಲಿ ಯಾರನ್ನೂ ನೋಯಿಸದೇ, ಸ್ಪಷ್ಟವಾಗಿ ಮತ್ತು ಪರಿಣಾಮಕಾರಿಯಾಗಿ ಸಂವಹನ ಮಾಡುವ ಕಲೆ ಬಗ್ಗೆ ಜಗದೀಶ್ ಅವರು ನೀಡಿದ ಮಾರ್ಗದರ್ಶನ ಎಲ್ಲರಿಗೂ ಬಹಳ ಉಪಯುಕ್ತವಾಯಿತು. ಅವರು ವಿಶೇಷವಾಗಿ ಒತ್ತಿ ಹೇಳಿದ ವಿಷಯಗಳು—

- ಮಾತಿನ ಹಿಂದೆ ಇರುವ ಉದ್ದೇಶದ ಶುದ್ಧತೆ,
- ಕೇಳುವ ಕೌಶಲ್ಯದ ಮಹತ್ವ,
- ಭಾವನೆಗಳನ್ನು ನಿಯಂತ್ರಿಸಿ ಮಾತನಾಡುವ ಸಾಮರ್ಥ್ಯ,
- ಮತ್ತು ತಂಡದಲ್ಲಿ ಪರಸ್ಪರ ಗೌರವವನ್ನು ಕಾಪಾಡಿಕೊಳ್ಳುವ ವಿಧಾನ— ಇವೆಲ್ಲವೂ ಸದಸ್ಯರಿಗೆ ಹೊಸದೊಂದು ದೃಷ್ಟಿಕೋನ ನೀಡಿದವು.

ಅವರ ಉದಾಹರಣೆಗಳು, ನೈಜ ಜೀವನದ ಘಟನೆಗಳು ಮತ್ತು ಸರಳವಾಗಿ ಅರ್ಥವಾಗುವ ವಿವರಣೆಗಳು ಸೆಷನ್ ಅನ್ನು ಇನ್ನಷ್ಟು ಜೀವಂತಗೊಳಿಸಿದವು. "ಸಂವಹನ ಸರಿಯಾದಾಗ, ಸಂಬಂಧಗಳು ಸ್ವಯಂ ಸುಧಾರಿಸುತ್ತವೆ" ಎಂಬ ಅವರ ಸಂದೇಶ ಎಲ್ಲರ ಮನದಲ್ಲೂ ಆಳವಾಗಿ ಉಳಿಯಿತು.

ಕಾರ್ಯಕ್ರಮದ ಸಮಾಪ್ತಿ: ದಿನದ ಅಂತ್ಯದಲ್ಲಿ ಚಹಾ ಮತ್ತು ಸ್ನ್ಯಾಕ್ಸ್‌ಗಳೊಂದಿಗೆ ಎಲ್ಲರೂ ತಮ್ಮ ಅನುಭವಗಳನ್ನು ಹಂಚಿಕೊಂಡರು. ಬೆಳಿಗ್ಗೆಯಿಂದ ಸಂಜೆವರೆಗೆ ನಡೆದ ಪ್ರತಿಯೊಂದು ಚಟುವಟಿಕೆಯೂ ಸದಸ್ಯರ ಮನಸ್ಸಿನಲ್ಲಿ ಒಂದು ವಿಶೇಷ ಗುರುತು ಬಿಟ್ಟಿತ್ತು.

ಎಲ್ಲಾ 16 ಮಂದಿ ಸದಸ್ಯರೂ ಈ ರಿಟ್ರೀಟ್ ಅನ್ನು ಕೇವಲ ಒಂದು ಕಾರ್ಯಕ್ರಮವಲ್ಲ, ಮನಸ್ಸಿಗೆ ಹತ್ತಿರವಾದ, ಆತ್ಮೀಯತೆ ತುಂಬಿದ, ಪರಸ್ಪರರನ್ನು ಇನ್ನಷ್ಟು ಹತ್ತಿರಕ್ಕೆ ತಂದ ಅನುಭವ ಎಂದು ಅಭಿಪ್ರಾಯಪಟ್ಟರು. ತಂಡದೊಳಗಿನ ಬಾಂಧವ್ಯ ಗಟ್ಟಿಯಾಗಿದ್ದು, "ನಾವು ಒಟ್ಟಾಗಿ ಇದ್ದಾಗ ಏನು ಸಾಧಿಸಬಹುದು" ಎಂಬ ವಿಶ್ವಾಸ ಮತ್ತಷ್ಟು ಬಲವಾಯಿತು.

ಈ ದಿನವು ಬೃಂದಾವನ ಕುಟುಂಬಕ್ಕೆ ನಿಜವಾದ ಅರ್ಥದಲ್ಲಿ ಒಂದು ಸ್ಮರಣೀಯ ಅಧ್ಯಾಯವಾಯಿತು.

ವಿಶೇಷ ಧನ್ಯವಾದಗಳು

ಈ ದಿನಪೂರ್ತಿ ನಡೆದ ಕಾರ್ಯಾಗಾರವನ್ನು ಸಮನ್ವಯಗೊಳಿಸಿ, ಪ್ರತಿಯೊಂದು ಸೆಷನ್ ಅನ್ನು ಸರಾಗವಾಗಿ, ಆತ್ಮೀಯವಾಗಿ ಮತ್ತು ಅರ್ಥಪೂರ್ಣವಾಗಿ ನಡೆಸಲು ಕಾರಣರಾದ ಹಾರ್ಟ್‌ಫುಲ್‌ನೆಸ್ ಅಭ್ಯಾಸಿ ಹಾಗೂ KCOB BOD ಸದಸ್ಯರಾದ ರೂಪಾ ಸಂಜಯ್ ಅವರಿಗೆ ಹೃತ್ಪೂರ್ವಕ ಧನ್ಯವಾದಗಳು. ಅವರ ಶ್ರಮ, ಯೋಜನೆ ಮತ್ತು ನಿಷ್ಠೆ ಈ ರಿಟ್ರೀಟ್‌ನ ಯಶಸ್ಸಿನ ಮೂಲಶಕ್ತಿ.

ಅದೇ ರೀತಿ, ದಿನದ ವಿವಿಧ ಸೆಷನ್‌ಗಳನ್ನು ನಡೆಸಿ ತಮ್ಮ ಜ್ಞಾನ, ಅನುಭವ ಮತ್ತು ಒಳನೋಟಗಳನ್ನು ಹಂಚಿಕೊಂಡ ಉದಯ್ ಕುಮಾರ್, ಜಗದೀಶ್ ಕಂಠರಾಜ್, ಮತ್ತು ಇತರ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ವಿಶೇಷ ಕೃತಜ್ಞತೆಗಳು. ಅವರ ಮಾರ್ಗದರ್ಶನದಿಂದ ಪ್ರತಿಯೊಬ್ಬ ಸದಸ್ಯರೂ ಹೊಸದೊಂದು ಕಲಿಕೆ, ಹೊಸದೊಂದು ಚಿಂತನೆ ಮತ್ತು ಹೊಸದೊಂದು ಶಾಂತಿಯ ಅನುಭವವನ್ನು ಪಡೆದರು.

ನಮ್ಮದೇ BOD ಮತ್ತು BOT ಸದಸ್ಯರು ಸಕ್ರಿಯವಾಗಿ ಭಾಗವಹಿಸಿ, ತಮ್ಮ ಅಭಿಪ್ರಾಯ, ಅನುಭವ ಮತ್ತು ಬೆಂಬಲದ ಮೂಲಕ ಕಾರ್ಯಕ್ರಮಕ್ಕೆ ಮತ್ತೊಂದು ಮೌಲ್ಯವನ್ನು ಸೇರಿಸಿದರು. ಅವರ ಹಾಜರಾತಿ ಮತ್ತು ತೊಡಗಿಸಿಕೊಂಡಿಕೆ ತಂಡದ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸಿತು.

ಈ ರಿಟ್ರೀಟ್ ಯಶಸ್ವಿಯಾಗಲು ಕಾರಣರಾದ ಪ್ರತಿಯೊಬ್ಬರಿಗೂ—ಸಂಘಟಕರು, ಸೆಷನ್ ನಡೆಸಿದವರು, ಭಾಗವಹಿಸಿದವರು—ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು. ನಮ್ಮ 16 ಸದಸ್ಯರ ಒಗ್ಗಟ್ಟಿನಿಂದ, ನಗು-ನಲಿವಿನಿಂದ ಮತ್ತು ಕಲಿಕೆಯ ಮನೋಭಾವದಿಂದ ಈ ದಿನ ನಿಜವಾದ ಅರ್ಥದಲ್ಲಿ ಸ್ಮರಣೀಯವಾಗಿತು.






heartfulness







ಶಶಿ ಚಂದ್ರ
ನ್ಯೂ ಜೆರ್ಸಿ

ವಸಂತೋತ್ಸವ ಸೊಗಸು

ನ್ಯೂಜೆರ್ಸಿ ಬೃಂದಾವನ ಕನ್ನಡ ಸಂಘ ವಸಂತೋತ್ಸವ ಸಂಭ್ರಮ ಆಚರಣೆಯ ಒಂದು ನೋಟ
ಕಳೆದ ಭಾನುವಾರ ಮಾರ್ಚ್ 22 ರಂದು ಬೆಳಗೆ 11:00 ರಿಂದ ಸಂಜೆ 7:00 ರವರೆಗೆ ಈಸ್ಟ್ ವಿಂಡ್ಸರ್ ಮೇಲ್ವಿನ. ಹೆಚ್. ಮಿಡ್ಲ್ ಸ್ಕೂಲ್ ಆಡಿಟೋರಿಮ್ನಲಿ ನಡೆದ ವಸಂತೋತ್ಸವ ಆಚರಣೆ ನ್ಯೂಜೆರ್ಸಿ ಕನ್ನಡಿಗರಿಗೆ ನಿಜಕ್ಕೂ ಒಂದು ಅವಿಸ್ಮರಣೀಯ ಅನುಭವದ ದಿನ. ನಮ್ಮಕನ್ನಡ ಸಾಹಿತ್ಯ ಮತ್ತು ಕಲೆಯ ಅನಾವರಣಕ್ಕೆ ಈ ಕಾರ್ಯಕ್ರಮವು ಅತ್ಯುತ್ತಮ ವೇದಿಕೆಯಾಯಿತು ಹಾಗು ಸಂಭ್ರಮಿಸಲು ವಸಂತ ಋತುವಿನ ಆಗಮನ.
ಕಾರ್ಯಕ್ರಮದ ಮುಖ್ಯಾಂಶಗಳು:
ಆಗಮನ ಮತ್ತು ನೊಂದಣಿ ಮತ್ತು ಭೋಜನ:
ಕಾರ್ಯಕ್ರಮಕ್ಕೆ ಆಗಮಿಸಿದ (ಅಂದಾಜು 200) ಅತಿಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಪ್ರವೇಶದ್ವಾರದಲ್ಲಿ ಸುಸಜ್ಜಿತವಾದ ನೋಂದಣಿ ವ್ಯವಸ್ಥೆಯ ಮೂಲಕ ಭಾಗವಹಿಸುವವರು ತಮ್ಮ ವಿವರಗಳನ್ನು ಪರಿಶೀಲಿಸಿ, ಗುರುತಿನ ಚೀಟಿಗಳನ್ನು ಪಡೆದುಕೊಂಡರು. ಸ್ವಯಂಸೇವಕರು ಎಲ್ಲರಿಗೂ ಸಹಾಯ ಮಾಡಿ, ಭೋಜನಶಾಲೆಗೆ ಮಾರ್ಗದರ್ಶನ ನೀಡಿದರು. ಇಲ್ಲಿ ಬಡಿಸಿದರಲ್ಲ ಯುಗಾದಿ ಹಬ್ಬದ ಊಟ ಬಿಸಿ ಬಿಸಿ ರುಚಿ ರುಚಿಯಾದ ಚಪಾತಿ ಕೂರ್ಮ ವಡೆ ಚಿತ್ರಾನ್ನ ಕೊಸುಂಬರಿ ಉಪ್ಪಿನಕಾಯಿ ಸಂಡಿಗೆ ಅನ್ನ ಹೋಳಿಗೆ ಸಾರು ಮೊಸರು ಒಬಿಟ್ಟಿನ ಹೂರಣದ ಸಿಹಿ ಇದೆಲ್ಲದರ ಮೃಷ್ಟನ್ನದ ಭೋಜನ ಉದ್ಘಾಟನೆ ಮತ್ತು ವಾತಾವರಣ: ಕಾರ್ಯಕ್ರಮವು ಹಿರಿಯರಾದ ಶ್ರೀ ಬಸವರಾಜ್ ಹಿರೇಮಠ್ರವರ ಗಣಪತಿ ಪೂಜೆ ಹಾಗು ಸಂಘದ ಅಧ್ಯಕ್ಷರು ಶ್ರೀ ಪ್ರಸನ್ನರವರು ಮತ್ತು ಕಾರ್ಯಕರ್ತರಿಂದ ದೀಪ ಬೆಳಗಿಸುವ ಮೂಲಕ ಸಾಂಪ್ರದಾಯಿಕವಾಗಿ ಆರಂಭವಾಯಿತು. ನಂತರ ಶ್ರೀ ಕೃಷ್ಣ ಮಠದ ಶ್ರೀಗಳು ಯುಗಾದಿಯ ವಿಶೇಷವನ್ನು ಎಲ್ಲರಿಗೂ ಚೆನ್ನಾಗಿ ವಿವರಿಸಿದರು. ವೇದಿಕೆಯಲ್ಲಿ ಕನ್ನಡದ ಫಲಕಗಳು ಮತ್ತು ಸಾಂಪ್ರದಾಯಿಕ ಅಲಂಕಾರಗಳು ಪ್ರೇಕ್ಷಕರಲ್ಲಿ ಕನ್ನಡಾಭಿಮಾನ ಮೂಡಿಸುವಂತಿತ್ತು.
ಸಾಂಸ್ಕೃತಿಕ ಕಾರ್ಯಕ್ರಮಗಳು: ಕಾರ್ಯಕ್ರಮ ನಿರೂಪಕಿ/ನಿರೂಪಕ ಕಾರ್ಯಕ್ರಮವನ್ನು ನಡೆಸಿಕೊಟ್ಟ ರೀತಿ ಬಹು ಶ್ಲಾಘನೀಯ. ಕಾರ್ಯಕ್ರಮದ ಪ್ರಮುಖ ಆಕರ್ಷಣೆಯೆಂದರೆ, ಮಕ್ಕಳ ನೃತ್ಯ ನಾಟಕ, ಕವಿ ಗೋಷ್ಠಿ, ದೊಡ್ಡವರ ನಾಟಕ ನೃತ್ಯ ಎಲ್ಲವು ನೋಡಲು ಅದ್ಭುತವಾಗಿದ್ದವು. ವಿಶೇಷವಾಗಿ ಮಕ್ಕಳ ನೃತ್ಯ ನಾಟಕದ ಪ್ರದರ್ಶನವು ಪ್ರೇಕ್ಷಕರ ಮನ ಗೆದ್ದಿತು. ಇದ ನಂತರ ಕಾಫಿ ವಿರಾಮದಲ್ಲಿ, ಬಾಯಲ್ಲಿ ನಿರೂರಿಸುವ ಉಪಿಟ್ಟು ಕೇಸರಿಭಾತು ಕಾಫಿ,ಟೀ ಕೂಡ ಇತ್ತು ಹಾಗು ಕೊನೇಯದಾಗಿ ಆಯೋಜಕರು ಬಿಂಗೋ ಆಟವನ್ನೂ ಹಮ್ಮಿಕೊಂಡಿದ್ದರು.
ಸಾಹಿತ್ಯ ಮತ್ತು ಗಾಯನ: ಕನ್ನಡ ಗೀತೆಗಳ ಗಾಯನ ಸಂಜೆಯ ಸೊಗಡನ್ನು ಹೆಚ್ಚಿಸಿತು. ಶ್ರೀ ವಾರಿಜಶ್ರೀ ವೇಣುಗೋಪಾಲ್ ಖ್ಯಾತ ಗ್ಯಾಮಿ ನಾಮನಿರ್ದೇಶಿತ ಭಾರತೀಯ ಗಾಯಕಿ, ಕೊಳಲು ವಾದಕರು, ಸಂಗೀತ ಸಂಯೋಜಕರು ಅವರ ಕಂಠದಲ್ಲಿ ಮೂಡಿಬಂದ ಫ್ಯೂಷನ್ ಸಂಗೀತ ಸಂಯೋಜನೆ ಹಾಗು ಕನ್ನಡ ಅನುವಾದಿತ One Note Samba ಬ್ರೆಝಿಲಿನ ಗೀತೆ ಹಾಗು ಕನ್ನಡದ ಪ್ರಖ್ಯಾತ ಗೀತೆಗಳು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದವು. ಕೊನೆಯಲ್ಲಿ ಪ್ರೇಕ್ಷಕರು ಇವರ ಕನ್ನಡ ಚಲನಚಿತ್ರ ಗೀತೆ ಗಳಿಗೆ ಕುಣಿದಾಡಿದರು. ಇವರ ವಾದ್ಯ ಗೋಷ್ಠಿ ತಂಡದವರು ಎಲ್ಲರ ಮೆಚ್ಚುಗೆಗೆ ಪಾತ್ರರಾದರೂ
ನನ್ನ ಅಭಿಪ್ರಾಯ:
ಒಟ್ಟಾರೆಯಾಗಿ ಹೇಳುವುದಾದರೆ, ಈ ವಸಂತೋತ್ಸವವು ಕೇವಲ ಮನರಂಜನೆಯಾಗಿರದೆ, ನಮ್ಮ ಸಂಸ್ಕೃತಿಯನ್ನು ಯುವ ಪೀಳಿಗೆಗೆ ಪರಿಚಯಿಸುವ ಉತ್ತಮ ಪ್ರಯತ್ನವಾಗಿತ್ತು. ಕಾರ್ಯಕ್ರಮದ ಆಯೋಜನೆ, ಸಮಯ ಪಾಲನೆ ಮತ್ತು ಕಾರ್ಯಕ್ರಮ ಹಾಗು ಕಲಾವಿದರ ಆಯ್ಕೆ ತುಂಬಾ ಶ್ಲಾಘನೀಯವಾಗಿತ್ತು. ಆಶಿಸುವೆವು ಇಂತಹ ಕಾರ್ಯಕ್ರಮಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು.

ದೋಷಗಳು/ಸುಧಾರಣೆಗಳು:
ಧ್ವನಿವರ್ಧಕಗಳು ಭಾಷಣ ಮಾತುಕತೆಗೆ ಚೆನ್ನಾಗಿತ್ತು ಆದರೆ ಸಂಗೀತ ಕಾರ್ಯಕ್ರಮಕೆ ಇನ್ನು ಸ್ವಲ್ಪ ಉತ್ತಮ ಧ್ವನಿವರ್ಧಕವಿರಬೇಕಿತ್ತು
ತೀರ್ಪು (Verdict):
ಕಾರ್ಯಕ್ರಮಕೆ ಶ್ರಮಿಸಿದವರ ಹೆಸರು ಹೇಳ್ಕುತ್ತಾ ಹೋದರೆ ಆಗುವುದು ದೂಡ್ಡ ಲಿಷ್ಟು
ಹೇಳುವೆವು ಸಿಂಪಲ್ ವರ್ಡ್ನಲಿ ಧನ್ಯವಾದಗಳು ಎಂದು ಎಲ್ಲರಿಗೂ ಈಗ ಜಷ್ಟು
ದಯವಿಟ್ಟು ಸ್ವೀಕರಿಸಿ ನೀವೆಲ್ಲರೂ ಕನ್ನಡದ ರಾಯಭಾರಿಗಳು ನೀವು ಬೆಸ್ಟು
ಹೇಳಬೇಕೆಂದರೆ ಈ ವಸಂತೋತ್ಸವ ನಮ್ಮ ಕನ್ನಡ ಸಂಸ್ಕೃತಿಯನ್ನು ಹತ್ತಿರದಿಂದ ನೋಡಲು ಬಯಸುವ ಪ್ರತಿಯೊಬ್ಬರಿಗೂ ಈ ಹಬ್ಬ ಒಂದು ಸುಂದರ ಅನುಭವ. ಚೆನ್ನಾಗಿದೆ ಎನ್ನುವುದಕ್ಕಿಂತ ಇನ್ನು ಉತ್ತಮ ಪದವಿದ್ದರೆ ಹೇಳಬೇಕು ಈ ಕಾರ್ಯಕ್ರಮಕ್ಕೆ.
ರೇಟಿಂಗ್: 9.5/10





ವಸಂತೋತ್ಸವ







ಸಂಕಲ್ಪ ಸಹಾಯ ಹಸ್ತ




ಸಂಧ್ಯಾ ಮಲ್ಲಿಕ್
ನ್ಯೂ ಜೆರ್ಸಿ

ಬೃಂದಾವನ ಸಂಕಲ್ಪ ತಂಡದಲ್ಲಿ ಚಾರಿಟಿ ಡೈರೆಕ್ಟರ್ ಆಗಿ ಸೇವೆ ಸಲ್ಲಿಸುವ ಸದವಕಾಶ ನನಗೆ ಈ ಬಾರಿ ದೊರೆಯಿತು. ಬೃಂದಾವನ ಸದಸ್ಯರ ಸಹಕಾರದಿಂದ ಶಾಶ್ವತವಾದ ಸಹಾಯವನ್ನು ಮಾಡಬೇಕೆಂಬ ಆಶಯವಿತ್ತು.ನಮಗೆಲ್ಲ ತಿಳಿದಂತೆ ಹಳ್ಳಿಗಳಲ್ಲಿರುವ ಹಲವಾರು ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಕೊರತೆಗಳಿವೆ.ಈ ನಿಟ್ಟಿನಲ್ಲಿ ಮಲಕುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪುನರುತ್ಥಾನ ಗೊಳಿಸಲು ಈ ಶಾಲೆಯನ್ನು ಪರಿಗಣಿಸಿದೆವು.ಈ ಶಾಲೆಯಲ್ಲಿ ಮಕ್ಕಳಿಗೆ ಕೂರಲು ಬೆಂಚುಗಳು ಇರಲಿಲ್ಲ ಹಾಗೇ ಶಾಲೆಯಲ್ಲಿ ಪುಸ್ತಕಗಳನ್ನು ಇಡಲು ಕಪಾಟುಗಳು ಇರಲಿಲ್ಲ,ಉಪಾಧ್ಯಾಯರುಗಳಿಗೆ ಕುಳಿತು ಕೊಳ್ಳಲು ಸರಿಯಾದ ಕುರ್ಚಿಗಳಿರಲಿಲ್ಲ, ಹೀಗೆ ಹಲವಾರು ಮೂಲಭೂತ ಸೌಕರ್ಯಗಳ ಕೊರತೆಗಳಿದ್ದವು.ಮಳೆಗಾಲದಲ್ಲಿ ಮಳೆಯ ನೀರು ತರಗತಿಯೊಳಗೆ ಕಿಟಕಿಗಳಿಂದ ಎರಚುತಿತ್ತು ಮಕ್ಕಳು ನೆಲದಮೇಲೆ ಕುಳಿತುಕೊಳ್ಳುತ್ತಿದ್ದರಿಂದ ಮಕ್ಕಳ ಬಟ್ಟೆಗಳು ಒದ್ದೆಯಾಗುತ್ತಿದ್ದವು.ಮಕ್ಕಳು ಗೋಣಿಚೀಲವನ್ನು ನೆಲಗಳ ಮೇಲೆ ಹಾಸಿ ಕುಳಿತು ತಮ್ಮ ವಿದ್ಯಾಭ್ಯಾಸ ಮುಂದುವರೆಸುತ್ತಿದ್ದರು.ಈ ಮಕ್ಕಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ನಮಗಾದ ಸಹಾಯ ಮಾಡಲು ಸಂಕಲ್ಪ ತಂಡ ನಿರ್ಧರಿಸಿ ಬೃಂದಾವನ ಸದಸ್ಯರಿಗೆ ಸಹಾಯ ಹಸ್ತ ಚಾಚಲು ಮನವಿ ಮಾಡಿದೆವು.ನಿಮ್ಮೆಲ್ಲರ ಉದಾರವಾದ ದಾನದಿಂದ ಎಲ್ಲಾ ಕೊಠಡಿಗಳಲ್ಲೂ ಮಕ್ಕಳಿಗೆ ಬೆಂಚು ಮತ್ತು ಮೇಜುಗಳನ್ನ ಒದಗಿಸಿಕೊಡಲಾಯಿತು ಇದರೊಂದಿಗೆ ಪುಸ್ತಕಗಳನ್ನು ಇಡಲು ಕಪಾಟುಗಳು ಮತ್ತು ಉಪಾಧ್ಯಾಯರು ಗಳಿಗೆ ಕುರ್ಚಿಗಳನ್ನು ಒದಗಿಸಿಕೊಡಲಾಗಿತ್ತು.ಶಾಲೆಯ ಮಕ್ಕಳೂ ಮತ್ತು ಉಪಾಧ್ಯಾಯರು ಬಹಳ ಸಂತೋಷ ಹಾಗೂ ಸಂಭ್ರಮದೊಂದಿಗೆ ತಮ್ಮ ಕೃತಜ್ಞತೆ ಹಾಗೂ ಧನ್ಯವಾದಗಳನ್ನು ತಿಳಿಸಿದ್ದಾರೆ.ಆ ಮಕ್ಕಳ ಸಂತೋಷ ಹಾಗೂ ನಗುವಿಗೆ ನಿಮ್ಮೆಲ್ಲರ ಸಹಕಾರ,ಔದಾರ್ಯ ಕಾರಣವಾಗಿದೆ.ಈ ಶಾಶ್ವತವಾದ ಕೆಲಸವನ್ನು ನೆರವೇರಿಸಲು ನಮಗೆ ಸಹಾಯ ಹಸ್ತ ನೀಡಿದ ನಿಮಗೆಲ್ಲ ಹೃತ್ಪೂರ್ವಕ ಧನ್ಯವಾದಗಳು.





ಸಂಕಲ್ಪ ಸಹಾಯ ಹಸ್ತ













ಸತ್ಯನಾರಾಯಣ್ ಕೃಷ್ಣಮೂರ್ತಿ
ನ್ಯೂ ಜೆರ್ಸಿ

ಪಾಜಕ ದರ್ಶನ – ಅಮೇರಿಕಾದ ಮಣ್ಣಿನಲ್ಲಿ ಅರಳಿದ ಮಧ್ವತತ್ವದ ದಿವ್ಯ ನಾಟಕ

ವಂದೇ ವಾದರತಂ ವಂದೇ ವೇದಾಂತಾರ್ಥಪ್ರಕಾಶಕಮ್ ।
ವಂದೇ ವಿಷ್ಣುಪದಾಂಭೋಜಭಕ್ತಂ ಮಧ್ವಮುನಿಂ ಪ್ರಭುಮ್ ॥

ಜನವರಿ 31, 2026, ಈ ಸುದಿನ, ಮೈ-ಕೊರೆಯುವ ಚಳಿಗಾಲದ ಮಧ್ಯೆ, ಅಮೇರಿಕಾದ ಆಕಾಶದಡಿ, ನ್ಯೂ ಜೆರ್ಸಿಯ ಎಡಿಸನ್ ನಗರದ ಶ್ರೀಕೃಷ್ಣ ವೃಂದಾವನದ ಆನಂದ ತೀರ್ಥ ಮಂಟಪದ ಭವ್ಯ ವೇದಿಕೆಯಲ್ಲಿ, ಒಂದು ಅಪರೂಪದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಬೆಳಕು ಪ್ರಜ್ವಲಿಸಿತು.
ಶ್ರೀಮಧ್ವನವಮಿ ಆಚರಣೆಯ ಈ ಪವಿತ್ರ ದಿನ, ಮಧ್ವತತ್ವದ ಜ್ಯೋತಿಯು ಮತ್ತೊಮ್ಮೆ ದೇದೀಪ್ಯಮಾನವಾಗಿ ಪ್ರಕಾಶಿಸಿ, ನಮ್ಮ ಹೃದಯಗಳಲ್ಲಿ ಪಾಜಕದ ಮಣ್ಣಿನ ಪರಿಮಳ ಪಸರಿಸಿತು.
ತುಳುನಾಡಿನ ಪವಿತ್ರ ಪಾಜಕ ಕ್ಷೇತ್ರದಲ್ಲಿ ಜನಿಸಿದ ಶ್ರೀಮಧ್ವಾಚಾರ್ಯರು, ಬಾಲ್ಯದಲ್ಲೇ ದೈವಿಕ ಬಲ, ಅಸಾಮಾನ್ಯ ಜ್ಞಾನ, ಮತ್ತು ಅಚಲ ಭಕ್ತಿಯನ್ನು ನಿದರ್ಶಿಸಿದ ಪ್ರತಿರೂಪ. ಅವರ ಜೀವನದ ಪ್ರತಿಯೊಂದು ಅಧ್ಯಾಯವೂ – ತಪಸ್ಸಿನ ಗಾಢತೆಯ, ಜ್ಞಾನದ ತೇಜಸ್ಸಿನ, ಮತ್ತು ವಿಷ್ಣುಭಕ್ತಿಯ ಪರಮೋನ್ನತ ಶಿಖರ ಹಾಗೂ ಪ್ರತಿಬಿಂಬ.
ಇಂದಿನ ನಾಟಕ "ಪಾಜಕ ದರ್ಶನ", ಈ ಮಹಾನ್ ಯೋಗೀಶ್ವರನ ಬಾಲ್ಯದಿಂದ ಯೋಗೀಶ್ವರತ್ವದವರೆಗೆ ಸಾಗುವ ಪಯಣವನ್ನು, ಅಮೇರಿಕಾದ ಮಣ್ಣಿನಲ್ಲೇ ಜೀವಂತಗೊಳಿಸಿದ ಅದ್ಭುತ ಕಲಾಕೃತಿ.
ಅಮೇರಿಕಾದಲ್ಲಿ ಹುಟ್ಟಿ ಬೆಳೆದ ಮಕ್ಕಳಿಂದ ಪುರಾತನ ಕನ್ನಡದ ನಾಟಕ—ಅದ್ಭುತದಾಚೆಯ ಅದ್ಭುತ ಈ ನಾಟಕದ ಅತ್ಯಂತ ವಿಶಿಷ್ಟ, ಅತ್ಯಂತ ಮನಮುಟ್ಟುವ ಅಂಶವೆಂದರೆ ಇದನ್ನು ಪ್ರದರ್ಶಿಸಿದ ಮಕ್ಕಳು. ಇವರೆಲ್ಲರೂ ಅಮೇರಿಕಾದಲ್ಲಿ ಹುಟ್ಟಿ ಬೆಳೆದವರು. ಕನ್ನಡದ ಪರಿಚಯವೂ ಅಲ್ಪ. ಆದರೆ ನಾಟಕದ ಪಠ್ಯ "ಶಾಸ್ತ್ರೀಯ, ಪುರಾತನ, ಗಾಢ ತತ್ತ್ವಭರಿತ, ಮಧ್ವತತ್ವದ ಮರ್ಮವನ್ನು ಹೊತ್ತ ಕನ್ನಡ"!! ಅಂತಹ ಪಠ್ಯವನ್ನು ಅರ್ಥಮಾಡಿಕೊಳ್ಳುವುದು, ಉಚ್ಚರಿಸುವುದು, ಭಾವಭರಿತವಾಗಿ ವೇದಿಕೆಯ ಮೇಲೆ ಜೀವಂತಗೊಳಿಸುವುದು, ಇದು ಮಕ್ಕಳಿಗೆ ಕೇವಲ ಸವಾಲಲ್ಲ!! ಅದು ಹಿಮಾಲಯ ಪರ್ವತಾರೋಹಣದ ಹಾದಿಯಲ್ಲಿ ಮೊದಲ ಹೆಜ್ಜೆ ಇಡುವ ಧೈರ್ಯ. ಆದರೆ ಅವರು ತೋರಿಸಿದ ಶ್ರದ್ಧೆ - ಅದು ಕೇವಲ ಕಲಿಕೆಯ ಶ್ರದ್ಧೆಯಲ್ಲ. ಅದು ಸಂಸ್ಕೃತಿಯ ಮೇಲಿನ ಗೌರವ, ಪರಂಪರೆಯ ಮೇಲಿನ ಪ್ರೀತಿ, ಮಧ್ವತತ್ವದ ಮೇಲಿನ ನಿಷ್ಠೆಯಾಗಿತ್ತು. ಈ ಮಕ್ಕಳು ವಿದೇಶೀ ಸಂಸ್ಕೃತಿಯ ಮಧ್ಯೆ ಅರಳುತ್ತಿದ್ದರೂ, ನಮ್ಮ ಸನಾತನ ಧರ್ಮದ, ದ್ವೈತಾದ್ವೈತ ಪರಂಪರೆಯ ಪರಮ ತಿರುಳುಗಳನ್ನು ಪ್ರತಿನಿತ್ಯ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ದ್ಯೋತಕ. ಪ್ರತಿ ಸಂಭಾಷಣೆಯಲ್ಲೂ, ಪ್ರತಿ ದೃಶ್ಯದಲ್ಲೂ ಅವರ ಕಣ್ಣುಗಳಲ್ಲಿ ಹೊಳೆಯುತ್ತಿದ್ದ ಬೆಳಕು ಕೇವಲ ಅಭಿನಯದ ಬೆಳಕು ಅಲ್ಲ. ಅದು ಮಧ್ವತತ್ವದ ದಿವ್ಯಕಾಂತಿ.

ಹುಣಸೂರು ಶ್ರೀ ಪ್ರಸಾದ್—ವಿನಯದ ಮೂರ್ತಿ, ಕಲೆಯ ನಿಜವಾದ ಸಾಧಕ
ನಾಟಕದ ನಿರ್ದೇಶಕರು—ಹುಣಸೂರು ಶ್ರೀ ಪ್ರಸಾದ್. ಅವರು ಕನ್ನಡ ಚಲನಚಿತ್ರ ಲೋಕದ ದಿಗ್ಗಜ ನಿರ್ದೇಶಕ ಹುಣಸೂರು ಕೃಷ್ಣಮೂರ್ತಿಯವರ ಸುಪುತ್ರ. ಅವರ ತಂದೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ, ಕರ್ನಾಟಕ ರತ್ನ ಡಾ. ರಾಜ್ ಕುಮಾರ್ ಅವರೊಂದಿಗೆ ಅನೇಕ ಅಮರ ಚಿತ್ರಗಳನ್ನು ಕೊಟ್ಟ ಮಹಾನ್ ದಿಗ್ದರ್ಶಕ. ಯಾರಿಗೆ ತಾನೇ ಇವರ ಬಗ್ಗೆ, ಇವರ ಚಲನಚಿತ್ರಗಳ ಬಗ್ಗೆ ತಿಳಿಯದು? ಆದರೆ ಶ್ರೀ ಪ್ರಸಾದ್ ಅವರಲ್ಲಿ ವಂಶಪಾರಂಪರ್ಯದ ಗರ್ವದ ಗುರುತು ಕೂಡ ಇಲ್ಲ. ಅವರು ಮಕ್ಕಳೊಂದಿಗೆ ಕೆಲಸ ಮಾಡಿದ ರೀತಿಯೇ ಅದಕ್ಕೆ ಸಾಕ್ಷಿ. ಸಹನೆಯಿಂದ,

ಪ್ರೀತಿಯಿಂದ, ಪ್ರೋತ್ಸಾಹದಿಂದ ಪ್ರತಿ ಮಗುವಿನಲ್ಲಿ ಸುಪ್ತವಾಗಿದ್ದ ಪ್ರತಿಭೆಯನ್ನು ಹೊರತೆಗೆದರು. ಅಮೇರಿಕಾದಲ್ಲಿ ಬೆಳೆದ, ಕನ್ನಡಕ್ಕೆ ಹೊಸಬರಾದ ಮಕ್ಕಳಿಂದ ಇಷ್ಟು ಅದ್ಭುತ ಪ್ರದರ್ಶನವನ್ನು ತೆಗೆಯುವುದು, ಇದು ಕೇವಲ ನಿರ್ದೇಶನ ಕೌಶಲವಲ್ಲ! ಇದು ಕಲೆಯ ಮೇಲಿನ ಭಕ್ತಿ, ಸಂಸ್ಕೃತಿಯ ಮೇಲಿನ ಗೌರವ, ಮಕ್ಕಳ ಮೇಲಿನ ಅಪಾರ ಪ್ರೀತಿ. ಅವರ ದೃಷ್ಟಿ, ಅವರ ನೇರವೇರಿಕೆ, ಅವರ ನಾಟಕದ ತತ್ತ್ವ ಇವೆಲ್ಲವೂ ಇಂದು ವೇದಿಕೆಯಲ್ಲಿ ದೀಪ್ತವಾಗಿ ಪ್ರಖರಿಸಿತು.

ಶ್ರೀ ಪ್ರಸಾದ್ ಅವರು ಮಧ್ವ ಸಂಸ್ಕೃತಿಯ ಅನೇಕ ಮಹತ್ತರ ಗ್ರಂಥಗಳ ಕ್ಷೀರ ಸಾಗರ ಮಂಥನಮಾಡಿ, ಆ ಪಾಲ್ಗಡಲಿನಿಂದ ಶ್ರೀ ಮಧ್ವಾಚಾರ್ಯರ ಪೂರ್ವಾಶ್ರಮದ ಮುಖ್ಯ ಘಟನೆಗಳ ಸಾರವನ್ನು, ಅನರ್ಘ್ಯ ರತ್ನಭರಿತ ಬೆಣ್ಣೆಯಂತೆ ಹೊರತೆಗೆದು, ಅವುಗಳಿಗೆ ಭಾಷ್ಯವೆಂಬಂತೆ ಸಂಭಾಷಣೆಯನ್ನು ವಿರಚಿಸಿ, ಕೇವಲ 2-3 ವಾರಗಳಲ್ಲೇ ಮಕ್ಕಳನ್ನು ತಮ್ಮ ತರಬೇತಿಯಿಂದ ಸಿದ್ಧಪಡಿಸಿ, ಅವರಿಂದ ಮನೋಜ್ಞ ಅಭಿನಯದ "ಪಾಜಕ ದರ್ಶನ" ನಾಟಕದ ಆಜ್ಯಾಭಿಷೇಕವನ್ನು, ಜಗನ್ನಾಟಕ ಸೂತ್ರಧಾರಿಯಾದ ಶ್ರೀ ಕೃಷ್ಣ ಪರಮಾತ್ಮನಿಗೆ ಅರ್ಪಿಸಿದಂತಿತ್ತು ಎಂದರೆ ಅತಿಶಯೋಕ್ತಿಯಲ್ಲ.

ಮಕ್ಕಳ ಅದ್ಭುತ ಅಭಿನಯ—ಪ್ರತಿ ಪಾತ್ರವೂ ಜೀವಂತ, ಪ್ರತಿ ದೃಶ್ಯವೂ ಮಧ್ವತತ್ವದ ಪ್ರತಿಧ್ವನಿ :

ನಾಟಕದ ಪ್ರತಿಯೊಂದು ದೃಶ್ಯದಲ್ಲೂ ಮಕ್ಕಳು ತೋರಿಸಿದ ಜವಾಬ್ದಾರಿತನ, ಭಾವನಾತ್ಮಕತೆ, ವೇದಿಕೆ ಶಿಸ್ತು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿತು. ಮಧ್ವಾಚಾರ್ಯರ ಬಾಲ್ಯ, ಅವರ ಅಸಾಮಾನ್ಯ ಬಲ, ಅವರ ಜ್ಞಾನ, ಅವರ ದೈವಿಕ ಅನುಭವಗಳು, ಇವೆಲ್ಲವನ್ನು ಮಕ್ಕಳು ಅದ್ಭುತ ನೈಜತೆಯಿಂದ ಪ್ರದರ್ಶಿಸಿದರು. ಇದರ ಮಧ್ಯೆ ಕೆಲವು ಪ್ರಮುಖ ಪಾತ್ರಗಳನ್ನು ಮಾಡುತ್ತಿದ್ದ ಮಕ್ಕಳು ಭಾರತದಲ್ಲಿನ ತುರ್ತು ಕುಟುಂಬ ಪರಿಸ್ಥಿತಿಗಳ ಕಾರಣ ಮಧ್ಯದಲ್ಲಿ ನಾಟಕದಿಂದ ಹೊರಬರಬೇಕಾಯಿತು. ಆದರೂ ಕೊನೆಯ ಕ್ಷಣದಲ್ಲಿ ಪಾತ್ರಗಳನ್ನು ಸ್ವೀಕರಿಸಿದ ಮಕ್ಕಳು ಅವರು ತೋರಿಸಿದ ಅಭಿನಯ, ಧೈರ್ಯ, ವೇಗದ ಕಲಿಕೆ, ಪಾತ್ರದೊಳಗೆ ಲೀನವಾಗುವ ಸಾಮರ್ಥ್ಯ ಇವು ನಿಜಕ್ಕೂ ಪ್ರಶಂಸನೀಯ.

ದೃಶ್ಯ 1 ರಲ್ಲಿ, ವೈಕುಂಠ ಲೋಕಕ್ಕೆ ದೇವತೆಗಳ ದಂಡು, ಅಧರ್ಮ ಭರಿತ ಭೂಲೋಕದಲ್ಲಿ ಧರ್ಮ ಪುನಃಸ್ಥಾಪನೆ, ಪುನರುಜ್ಜೀವನಕ್ಕೆ ಶ್ರೀ ಲಕ್ಷ್ಮೀ ಸಹಿತನಾದ ಮಹಾವಿಷ್ಣುವಿಗೆ ಬ್ರಹ್ಮ ಮತ್ತು ಈಶ್ವರರ ಮೊರೆ. ಮಹಾವಿಷ್ಣುವಿನಿಂದ ವಾಯುದೇವನಿಗೆ ಭೂಲೋಕದಲ್ಲಿ ಮಧ್ವಾಚಾರ್ಯರಾಗಿ ಅವತರಿಸಲು ಆದೇಶ. ದೃಶ್ಯ 2 ರಲ್ಲಿ, ಅನಂತಾಸನನ ದೇವಸ್ಥಾನದ ಅರ್ಚಕರಿಂದ, ಮಧ್ಯಗೇಹ ಭಟ್ಟ ಮತ್ತು ವೇದಾವತಿ ಮಾತಾ ದಂಪತಿಗಳಿಗೆ ದಿವ್ಯಾತ್ಮನ ಜನನದ ಬಗ್ಗೆ ಮುನ್ಸೂಚನೆ. ದೃಶ್ಯ 3 ರಲ್ಲಿ, ಶ್ರೀ ಮಧ್ವಾಚಾರ್ಯರ ಪೂರ್ವಾಶ್ರಮದಲ್ಲಿ ವಾಸುದೇವನಾಗಿ ಅವತರಿಸಿರುವ ಶಿಶುವಿನಿಂದ, ಘನಘೋರವಾದ ಅರಣ್ಯದ ಮಧ್ಯೆ ಪಿಶಾಚಿಗಳಿಂದ, ಮಧ್ಯಗೇಹ ದಂಪತಿ ಮತ್ತು ಅವರ ಶಿಷ್ಯಗಣದ ರಕ್ಷಣೆಯ ಪವಾಡ. ದೃಶ್ಯ 4 ರಲ್ಲಿ, ಕಬ್ಬಿಣದಂತಿರುವ ಹುರುಳಿ ತಿಂದರೂ, ಏನೂ ತೊಂದರೆಗೊಳಗಾಗದೇ ತನ್ನ ಪವಾಡವನ್ನು ತಂದೆ-ತಾಯಿಗಳಿಗೆ ತೋರಿಸಿ, ತನ್ನ ಮಹತ್ವವನ್ನು ಸಾರುವ ಎಳೆಯ ಮಗು ವಾಸುದೇವ, ಈ ನಾಟಕದ ಕಡೆಯ ದೃಶ್ಯ 5 ರಲ್ಲಿ, ತನ್ನ ತಂದೆ ಮಾಡಿದ ಸಾಲವನ್ನು ತನ್ನ ಪಿತೃಭಕ್ತಿಯಿಂದ ತೀರಿಸಿ ಋಣಮುಕ್ತರನ್ನಾಗಿ ಮಾಡುವ ಬಾಲಕ ವಾಸುದೇವ!

ಈ ದೃಶ್ಯಗಳಲ್ಲಿ ಮನಸೂರೆಗೊಳ್ಳುವಂತೆ ಅಭಿನಯಿಸಿದ್ದು ಕ್ರಮೇಣವಾಗಿ, ವಿಷ್ಣುವಾಗಿ ಅನಿರುದ್ಧ, ಲಕ್ಷ್ಮಿಯಾಗಿ ವಿದಿಶಾ, ಬ್ರಹ್ಮದೇವನಾಗಿ ನಿಹಾಲ್, ಈಶ್ವರನಾಗಿ ಸ್ಮರಣ್, ವಾಯುದೇವನಾಗಿ ನಿಶ್ಚಲ್, ಮಧ್ಯಗೇಹ ಭಟ್ಟನಾಗಿ ಕೌಸ್ತುಭ್ ಸತ್ಯನಾರಾಯಣ್, ವೇದಾವತಿ (ಮಾತಾ) ಯಾಗಿ ಅನಘ, ಪುಟ್ಟಕ್ಕನಾಗಿ ಸಾನ್ವಿ, ಮಧ್ಯಗೇಹ ಭಟ್ಟರ ಶಿಷ್ಯರಾಗಿ ಸಾರ್ಥಕ್, ಸಮೀರ್ ಮತ್ತು ಆರ್ಣವ್, ಅರ್ಚಕನಾಗಿ ಅಕ್ಷೋಭ್ಯ, ಧನಿಕನಾಗಿ ಧೀರೇನ್, ವಾಸುದೇವನಾಗಿ ಪ್ರಶಸ್ತ್ ಮತ್ತು ರಾಮಣ್ಣನ ಪಾತ್ರದಲ್ಲಿ ಪುನರಾಭಿನಯಿಸಿದ್ದು ವಿದಿಶಾ ಈ ಮಕ್ಕಳ ಪ್ರಭುದ್ಧತೆಯನ್ನು ಎಷ್ಟು ಹೊಗಳಿದರೂ ಸಾಲದು.

ಪಾಜಕ ದರ್ಶನ

ದೀಪ್ತಿ ಮತ್ತು ವಿನೋದ—ನಾಟಕದ ಅಪ್ರತಿಮ ಶಕ್ತಿಗಳು
ನಿರ್ದೇಶಕರೊಂದಿಗೆ ಹೆಜ್ಜೆಹಾಕಿದ ದೀಪ್ತಿ ಮತ್ತು ವಿನೋದ. ಅವರ ದಿನನಿತ್ಯದ ಬಿಡುವಿಲ್ಲದ ಜಂಜಾಟಗಳ ನಡುವೆಯೂ ಮಕ್ಕಳ ವೇಳಾಪಟ್ಟಿ, ಅಭ್ಯಾಸ, ಸಂಯೋಜನೆ, ವೇಷಭೂಷಣ, ವೇದಿಕೆ ನಿರ್ವಹಣೆ. ಎಲ್ಲವನ್ನೂ ಅದ್ಭುತವಾಗಿ ಕೈಜೋಡಿಸಿದರು. ಇಂದಿನ ಯಶಸ್ಸಿನ ಹಿನ್ನಲೆಗೆ ಅವರ ಕೊಡುಗೆಯೂ ಪ್ರಮುಖ. ಅವರ ಶಾಂತ ಸಂಘಟನೆ, ನಿಖರ ನಿರ್ವಹಣೆ, ಮತ್ತು ಮಕ್ಕಳ ಮೇಲಿನ ಕಾಳಜಿ, ಇವು ನಾಟಕದ ಪ್ರತಿಯೊಂದು ದೃಶ್ಯದಲ್ಲೂ ಸ್ಪಷ್ಟವಾಗಿ ಗೋಚರಿಸಿತು.



ಪ್ರೇಕ್ಷಕರ ಕರತಾಡನ—ನಾಟಕದ ನಿಜವಾದ ಪ್ರಶಸ್ತಿ
ಪ್ರತಿ ದೃಶ್ಯಕ್ಕೂ ಆ ಕಿಕ್ಕಿರಿದ ಸಭಾಂಗಣದಲ್ಲಿ ಭೋರ್ಗರೆಯುತ್ತಿದ್ದ ಕರತಾಡನ, ಮಕ್ಕಳ ಪರಿಶ್ರಮಕ್ಕೆ, ನಿರ್ದೇಶಕರ ದೃಷ್ಟಿಗೆ, ಮತ್ತು ತಂಡದ ಒಗ್ಗಟ್ಟಿಗೆ ದೊರೆತ ಅತ್ಯುನ್ನತ ಗೌರವ.
"ಕೃಷ್ಣಂ ವಂದೇ ಜಗದ್ಗುರುಮ್" ಶ್ರೀಕೃಷ್ಣನ ಕೃಪೆಯಿಲ್ಲದೆ ಇಂತಹ ಅದ್ಭುತ ಪ್ರದರ್ಶನ ಸಾಧ್ಯವೇ ಇಲ್ಲ. ಇಂದಿನ ನಾಟಕ ನೆರೆದಿದ್ದ ಪ್ರೇಕ್ಷಕರ ಮನದಲ್ಲಿ ದೀರ್ಘಕಾಲ ಉಳಿಯುವ ಅಮೂಲ್ಯ ಸ್ಮರಣೆ.
"ಪಾಜಕ ದರ್ಶನ" ಕೇವಲ ನಾಟಕವಲ್ಲ ಅದು ಭಕ್ತಿ, ನಮ್ಮ ಸನಾತನ ಸಂಸ್ಕೃತಿ, ಕನ್ನಡ, ಮಧ್ವತತ್ವ, ಮತ್ತು ಮಕ್ಕಳ ಪ್ರತಿಭೆಗಳ ಸಮ್ಮಿಲನ. ಅಮೇರಿಕಾದ ಮಣ್ಣಿನಲ್ಲಿ ಕನ್ನಡದ ಪರಿಮಳವನ್ನು ಹರಡಿದ ಈ ಮಕ್ಕಳು ನಮ್ಮ ಸಂಸ್ಕೃತಿಯ ಭವಿಷ್ಯತ್ತಿಗೆ ಬೆಳಕಿನ ಕಿರಣ. ಈ ನಾಟಕ, ಕಲೆಯ, ಸಂಸ್ಕೃತಿಯ, ಮತ್ತು ಭಕ್ತಿ ಪರಾಕಾಷ್ಠೆಯ ಅಮರ ಸಂಭ್ರಮ.
ಇದರ ಜೊತೆಗೆ ನೆರವೇರಿದ ಇತರೆ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಲೇಬೇಕು. ಶ್ರೀಮಧ್ವನವಮಿಯ ಈ ಸುದಿನ ಆಧ್ಯಾತ್ಮಿಕ ಚೈತನ್ಯದ ಹೊನಲನ್ನೇ ಹರಿಸಿತು. ಗಂಡಕೀ ನದೀತೀರದಲ್ಲಿ ದೊರೆತ ಪುಣ್ಯಶಿಲೆ, ಸಾಲಿಗ್ರಾಮದಲ್ಲಿ ಆವಿರ್ಭವಿಸಿರುವ ಶ್ರೀಕೃಷ್ಣನ ದಿವ್ಯ ಸನ್ನಿಧಾನದಲ್ಲಿ, ಭಕ್ತಿಭಾವದ 'ಶ್ರೀ ವಾಯುಸ್ತುತಿ'ಯ ಪಠಣದೊಂದಿಗೆ ಈ ದಿನವು ಮಂಗಳಮಯವಾಗಿ ಆರಂಭವಾಯಿತು. ಮಧ್ವವಿಜಯದ ಸರ್ಗಗಳು ಹಾಗೂ ದ್ವಾದಶ ಸ್ತೋತ್ರಗಳ ಗಾಯನವು ಪರಿಸರದಲ್ಲಿ ಸದಾಚಾರದ ಕಂಪನ್ನು ಹರಡಿತು. ವಿಶೇಷವಾಗಿ, ಇಂದಿನ ಪೀಳಿಗೆಗೆ ದಶಾವತಾರದ ಮಹಿಮೆಯನ್ನು ಮನದಟ್ಟು ಮಾಡುವಂತಹ ಸರಳ ಹಾಗೂ ಸುಂದರ ನೃತ್ಯ ರೂಪಕಗಳು, ವಿವಿಧ ಕಲಾತಂಡಗಳ ನೃತ್ಯ ಸೇವೆ, ಜ್ಞಾನದೀವಿಗೆಯಂತಿದ್ದ ರಸಪ್ರಶ್ನೆ ಹಾಗೂ ನಾದಮಯ ಸಂಗೀತ ಸೇವೆಗಳು ಭಗವಂತನಿಗೆ ಸಮರ್ಪಿತವಾದವು.
ಈ ಸಮಸ್ತ ಸೇವೆಗಳ ಮೂಲಕ ಮಧ್ವತತ್ವದ ಜ್ಯೋತಿಯು ಮತ್ತೊಮ್ಮೆ ದೇದೀಪ್ಯಮಾನವಾಗಿ ಬೆಳಗಿ, ನಮ್ಮೆಲ್ಲರ ಹೃದಯಗಳಲ್ಲಿ ಪಾಜಕದ ಪವಿತ್ರ ಮಣ್ಣಿನ ಪರಿಮಳವನ್ನು ಮರುಕಳಿಸುವಂತೆ ಮಾಡಿತು. ಪರಮಾತ್ಮನ ಮಂಗಳ ನೀರಾಜನವನ್ನು ಕಣ್ಣಿಗೊತ್ತಿಕೊಂಡು ಪುಳಕಿತರಾದ ಭಕ್ತಸಮೂಹವು, ತೀರ್ಥ ಪ್ರಸಾದ ಭಕ್ಷಣೆಯೊಂದಿಗೆ ಧನ್ಯತಾ ಭಾವವನ್ನು ಅನುಭವಿಸಿ ಪುನೀತರಾದರು.



ಉಷಾರಾಣಿ ನಾಗೇಶ್ ಜಾಧವ್
ನ್ಯೂ ಜೆರ್ಸಿ

ಮಕರ ಸಂಕ್ರಾಂತಿ
ಊರಿನಿಂದ ದೂರ, ಸಂಸ್ಕೃತಿಗೆ ಹತ್ತಿರ

ಸೂರ್ಯನು ಮಕರ ರಾಶಿಗೆ ಪ್ರವೇಶಿಸುವ ದಿನ ಆಚರಿಸುವ ಮಕರ ಸಂಕ್ರಾಂತಿ, ಭಾರತೀಯ ಸಂಸ್ಕೃತಿಯಲ್ಲಿನ ಪ್ರಮುಖ ಹಬ್ಬಗಳಲ್ಲಿ ಒಂದು. ವರ್ಷದ ಮೊದಲ ಹಬ್ಬ. ಉತ್ತರಾಯಣದ ಆರಂಭದ ಸಂಕೇತವಾಗಿರುವ ಈ ಹಬ್ಬ, ಪ್ರಕೃತಿಯ ಚಕ್ರ, ಕೃಷಿ ಜೀವನ ಮತ್ತು ಮಾನವೀಯ ಸಂಬಂಧಗಳೊಂದಿಗೆ ನಿಕಟವಾಗಿ ಬೆಸೆದುಕೊಂಡಿದೆ.

ಮಕರ ಸಂಕ್ರಾಂತಿ ಧಾರ್ಮಿಕ ಆಚರಣೆ ಮಾತ್ರವಲ್ಲ; ಇದು ಪ್ರಕೃತಿಗೆ ಕೃತಜ್ಞತೆ ಸಲ್ಲಿಸುವ ಕೃಷಿ ಹಬ್ಬವೂ ಹೌದು. ಶೀತ ಋತುವಿನ ಅಂತ್ಯ ಮತ್ತು ಉಷ್ಣತೆಯ ಆರಂಭವನ್ನು ಸೂಚಿಸುವ ಈ ದಿನ, ಹೊಸ ಬೆಳಕು ಮತ್ತು ಹೊಸ ಆಶೆಗಳ ಸಂಕೇತವಾಗಿ ಪರಿಗಣಿಸಲಾಗಿದೆ. "ಎಳ್ಳು ಬೆಲ್ಲ ತಿನ್ನಿ, ಒಳ್ಳೆ ಮಾತಾಡಿ" ಎಂಬ ಮಾತು, ಈ ಹಬ್ಬದ ಮೂಲ ತತ್ತ್ವವಾದ ಸೌಹಾರ್ದತೆ ಮತ್ತು ಮಧುರ ಸಂಬಂಧಗಳನ್ನು ಪ್ರತಿಬಿಂಬಿಸುತ್ತದೆ. ಭಾರತದ ವಿವಿಧ ರಾಜ್ಯಗಳಲ್ಲಿ ಮಕರ ಸಂಕ್ರಾಂತಿಯನ್ನು ವಿಭಿನ್ನ ಹೆಸರುಗಳು ಮತ್ತು ಪದ್ಧತಿಗಳೊಂದಿಗೆ ಆಚರಿಸಲಾಗುತ್ತದೆ.

ನನ್ನೂರಿನ ಮೆಲಕು:

ಇನ್ನು ನೆನಪಿದೆ, ನಮ್ಮೂರಿನ ಹಬ್ಬ... 2 ದಿನಗಳ ಸಂಭ್ರಮ,ಹಿಂದಿನ ದಿನ ಆಚರಿಸುವ ಭೋಗಿ ಹಬ್ಬ .. ಗ್ರಾಮೀಣ ಪ್ರದೇಶಗಳಲ್ಲಿ ಆಚರಿಸುವ ಒಂದು ಸಾಂಪ್ರದಾಯಿಕ ಕೃಷಿ ಹಬ್ಬ, ಗಡದ್ದಾಗಿ ಊಟ ಸವಿಯುವ ಹಬ್ಬ ಎಂದರೆ ತಪ್ಪಾಗಲಾರದು. ಸಜ್ಜೆ ಮತ್ತು ಜೋಳದ ಕಡಕಲು ರೊಟ್ಟಿಯೊಂದಿಗೆ ಗರಗಟ್ಟದ ಗಟ್ಟಿ ಪಲ್ಯ ಅಂದರೆ 5 ರೀತಿಯ ಕಾಳು-ಬೇಳೆಗಳು, ತರಕಾರಿ ಮತ್ತು ಸೊಪ್ಪುಗಳಿಂದ ತಯಾರಾದದ್ದು, ಹಾಗೆಯೇ ಮತ್ತೊಂದೆರಡು ಪಲ್ಯಗಳು, ಚಟ್ನಿ ಪುಡಿ ...ಆಹಾ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದನಾ....

ಮತ್ತೆ ಮರುದಿನ ಸಂಕ್ರಾಂತಿ... ಊಟ ಕಟ್ಟಿಕೊಂಡು ನದಿ ಅಥವಾ ಸಮುದ್ರದ ತಟಕ್ಕೆ ಹೋಗಿ ಎಳ್ಳಿನಿಂದ ತಯಾರಿಸಲಾದ ಪುಡಿಯನ್ನು ಮೈಗೆಲ್ಲಾ ಹಚ್ಚಿಕೊಂಡು ಅಭ್ಯಂಜನ ಸ್ನಾನ ಅಂದರೆ ನಮ್ಮ ಕರ್ಮಗಳ ಶುದ್ಧೀಕರಣ ಮತ್ತು ಚರ್ಮರೋಗ ನಿವಾರಣೆಯ ಸಂಕೇತವೆಂಬುದು ಹಿರಿಯರ ನಂಬಿಕೆ. ಅಂದು ಹಬ್ಬದ ಎಲ್ಲ ಭಕ್ಷ್ಯಗಳಲ್ಲೂ ಎಳ್ಳಿಗೆ ಸರ್ವಪ್ರಥಮ ಸ್ಥಾನ.

ಸಂಜೆಗೆ ತುದಿಗಾಲಿನಲ್ಲಿ ಕಾಯುವ ಸಮಯ.. ಹೊಸ ಬಟ್ಟೆ ಧರಿಸಿ ಕೈಯಲ್ಲಿ ಎಳ್ಳು-ಬೆಲ್ಲದ ಡಬ್ಬ ಹಿಡಿದು ಯಾವ ಭೇದವಿಲ್ಲದೆ ಎಲ್ಲರ ಮನೆಗೆ ಹೋಗಿ "ಎಳ್ಳು-ಬೆಲ್ಲ ತಿಂದು ಒಳ್ಳೊಳ್ಳೆ ಮಾತಾಡಿ " ಎನ್ನುವ ವಾಕ್ಯದೊಂದಿಗೆ ಎಳ್ಳು-ಬೆಲ್ಲ ಕೊಟ್ಟು, ನಮಗಿಂತ ಹಿರಿಯರಾದರೆ ಅವರ ಕಾಲಿಗೆ ನಮಸ್ಕಾರ ಮಾಡಿ ಆಶೀರ್ವಾದ ಪಡೆಯುವುದು. ಇದನ್ನು ಸಂಸ್ಕಾರದ ಪರಮಾವಧಿ ಎಂದರೆ ತಪ್ಪಾಗಲಾರದು.

ಪ್ರಸ್ತುತ ನೆಲೆಗೆಯ ಮೆರಗು:

ಇಲ್ಲಿ ನಾವೋ ಅನಿವಾಸಿಗಳು ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಹಬ್ಬವಾಗಿ, ಮಕ್ಕಳಿಗೆ ತಿಳಿ ಹೇಳುವ ನಿಟ್ಟಿನಲ್ಲಿ ಮಕರ ಸಂಕ್ರಾಂತಿಯನ್ನು ಆಚರಿಸುತ್ತೇವೆ. ಆದರೆ ಇಲ್ಲಿನ ಜೀವನಶೈಲಿ, ಉದ್ಯೋಗದ ಒತ್ತಡ ಮತ್ತು ಹವಾಮಾನ ಪರಿಸ್ಥಿತಿಗಳಿಂದಾಗಿ, ಆಚರಣೆಗಳು ಹೆಚ್ಚು ಸರಳ ಮತ್ತು ಕುಟುಂಬಮಟ್ಟಕ್ಕೆ ಸೀಮಿತವಾಗಿರುತ್ತವೆ. ದೇವಾಲಯಗಳು ಹಾಗೂ ಭಾರತೀಯ ಸಂಘಟನೆಗಳು ವೀಕೆಂಡ್ ದಿನಗಳಲ್ಲಿ ವಿಶೇಷ ಪೂಜೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಹಬ್ಬದ ಮಹತ್ವವನ್ನು ಮುಂದಿನ ತಲೆಮಾರಿಗೆ ಪರಿಚಯಿಸುತ್ತವೆ.

ಈ ವರ್ಷ ನ್ಯೂಜರ್ಸಿಯಲ್ಲಿ ಮಕರ ಸಂಕ್ರಾಂತಿ ತೀವ್ರ ಚಳಿಗಾಲದ ನಡುವೆ ಆಚರಿಸಲಾಯಿತು. ಬಿಟ್ಟೇವಾ, ಎಂಬಂತೆ ಹಿಮಪಾತ ಮತ್ತು ತಣ್ಣನೆಯ ವಾತಾವರಣ ಇದ್ದರೂ, ಭಾರತೀಯ ಮನೆಗಳಲ್ಲಿ ಹಬ್ಬದ ಸಂಭ್ರಮವೇನು ಕಡಿಮೆಯಾಗಿರಲಿಲ್ಲ.

ಮಕರ ಸಂಕ್ರಾಂತಿ

ಮನೆಗಳೊಳಗೆ ಸಣ್ಣ ಪೂಜೆಗಳು, ಮನೆಯಲ್ಲೇ ತಯಾರಿಸಿದ ಎಳ್ಳು-ಬೆಲ್ಲ, ಪೊಂಗಲ್ ಮತ್ತು ಸಿಹಿತಿನಿಸುಗಳು ಸಂಕ್ರಾಂತಿಯ ಸುವಾಸನೆ ತಂದವು. ಹಸು ಪೂಜೆ ಸಾಧ್ಯವಾಗದ ಕಾರಣ, ಗೋಮಾತೆಯ ಚಿತ್ರಕ್ಕೆ ಪೂಜೆ ಸಲ್ಲಿಸುವುದು ಸಾಮಾನ್ಯವಾಗಿತ್ತು. ಮಕ್ಕಳು ಭಾರತೀಯ ಉಡುಪು ಧರಿಸಿ, ಸಂಕ್ರಾಂತಿಯ ಅರ್ಥ ಮತ್ತು ಪರಂಪರೆಯನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿದರು. ಕೆಲವರು ಸ್ನೇಹಿತರು ಮತ್ತು ಬಂಧುಗಳೊಂದಿಗೆ ಆನ್‌ಲೈನ್ ಮೂಲಕ ಹಬ್ಬದ ಸಂಭ್ರಮ ಹಂಚಿಕೊಂಡರು.

ಭಾರತದಲ್ಲಿನ ತೆರೆದ ಬಿಸಿಲು, ಹಸಿರು ಹೊಲಗಳು ಮತ್ತು ಊರಿನ ಸಂಭ್ರಮ ಇಲ್ಲದಿದ್ದರೂ, ವಿದೇಶದಲ್ಲಿನ ಸಂಕ್ರಾಂತಿ ಭಾರತೀಯರಿಗೆ ತಮ್ಮ ಮೂಲಗಳನ್ನು ನೆನಪಿಸುವ ಹಬ್ಬವಾಗಿದೆ. ಇದು ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಸಂಕೇತವಾಗಿದ್ದು, ಹೊಸ ತಲೆಮಾರಿಗೆ ಭಾರತೀಯ ಪರಂಪರೆಯ ಮೌಲ್ಯಗಳನ್ನು ಪರಿಚಯಿಸುವ ಸೇತುವೆಯಾಗಿದೆ.

ಮಕರ ಸಂಕ್ರಾಂತಿ ಎಲ್ಲೆಡೆ ಒಂದೇ ಸಂದೇಶ ನೀಡುತ್ತದೆ. ಹೊಸ ಆರಂಭ, ಒಗ್ಗಟ್ಟು ಮತ್ತು ಸೌಹಾರ್ದತೆ ದೇಶ ಬದಲಾದರೂ , ಹವಾಮಾನ ಬದಲಾದರೂ , ಈ ಹಬ್ಬದ ಅಂತರಂಗ ಒಂದೇ. ಎಳ್ಳು-ಬೆಲ್ಲದ ಸಿಹಿತನದಂತೆ, ಮಾನವೀಯ ಸಂಬಂಧಗಳು ಸದಾ ಸಿಹಿಯಾಗಿರಲಿ ಎಂಬ ಆಶಯವೇ ಮಕರ ಸಂಕ್ರಾಂತಿಯ ನಿಜವಾದ ಅರ್ಥ.







ಶಾಂತ -ಶಶಿಧರ
ನ್ಯೂ ಜೆರ್ಸಿ.

ಅಂಟಾರ್ಟಿಕ್ ಪ್ರವಾಸ

ತಮ್ಮ ಅಂಕಿತವನ್ನು ಅಂಟಾರ್ಟಿಕದಲ್ಲಿ ಸಂಕೇತಿಸಿ ಸವಿ ನೆನಪುಗಳನ್ನು ತಂದಿದ್ದಾರೆ.
ಕಳೆದ ಶೀತಕಾಲದಲ್ಲಿ ಅಮೇರಿಕಾದ ನ್ಯೂ ಜರ್ಸಿಯ, ನ್ಯೂ ಪ್ರಾವಿಡೆನ್ಸ್ ಎಂಬ ಊರಲ್ಲಿ ಬೆಂಗಳೂರಿನ ಶಶಿಧರ್ ಮತ್ತು ಅವರ ಧರ್ಮಪತ್ನಿ ಶಾಂತ ಶಶಿಧರ್ ಅವರು ಸ್ವತಂತ್ರ ಭಾರತದ ಶ್ರೀಧ್ವಜದೊಡನೆ ದಕ್ಷಿಣಧ್ರುವದಬಳಿ ಇರುವ ಅಂಟಾರ್ಟಿಕ್ ಉಪಖಂಡಕ್ಕೆ ಪ್ರವಾಸ ಮತ್ತು ಶೋಧನೆಗಾಗಿ ಪ್ರಯಾಣಮಾಡಿದರು.
ಅವರ ಪ್ರಯಾಣವು, ಭೂಮಂಡಲದ ದಕ್ಷಿಣ ಅಂತ್ಯ ಭಾಗದಲ್ಲಿರುವ ದಕ್ಷಿಣ ಅಮೆರಿಕಾದ ಉಶ್ಯಾಯ (Ushaia) ಎಂಬ ದ್ವೀಪದಿಂದ ಆರಂಭವಾಯಿತು. ನಂತರ ಗ್ರೇಯ್ಟ್-ವಿಕನ್ (Grytviken) ಡಿಸೆಪ್ಸೆನ್ (Deception island) ದ್ವೀಪ, ಅರ್ಧಚಂದ್ರ ದ್ವೀಪ Half-Moon Island ಮತ್ತು ಇತರ ದ್ವೀಪಗಳನ್ನು ನೋಡಿ ಅವರು ಅಂಟಾರ್ಟಿಕ್ ಪರ್ಯಾಯವನ್ನು ತಲುಪಿದರು. ಅಲ್ಲಿ ಅವರು ವಿವಿಧ ವರ್ಣ ಮತ್ತು ಗಾತ್ರಗಳ ಪೆಂಗ್ವಿನ್, (Penguins) ಸೀಲ್ ಗಳನ್ನು, (Seals) ಮತ್ತು ಅನೇಕ ಬಣ್ಣಗಳ ಪಕ್ಷಿಗಳನ್ನೂ ವಿಸ್ತಾರ ಪ್ರದೆಶ ಪರ್ಯಂತ ವಿಕ್ಷಿಸಿದರು. ಪೆಂಗ್ವಿನ್ ಗಳನ್ನು ತಿನ್ನುವ ಅಲ್ಬಾಟ್ರೋಸ್ ಬರ್ಡ್ಸ್(albatross - 5 feet long birds) ಸ್ಥಿತಿ ನೋಡಲು ಬಹಳ ಚಿಂತಾಜನಕವಾಗಿರುವಂತೆ ಅವರಿಗೆ ತೋರಿತು.
ಇದಲ್ಲದೆ ಅವರಿಗೆ ಅನೇಕ ರಾಷ್ಟ್ರಗಳ ಅಂಟಾರ್ಟಿಕ್ ಸಂಶೋಧನಾಲಯಗಳ ಶೋಧನೆ ಬಗ್ಗೆ ಅಲ್ಲಿನ ಅಪೂರ್ವ ಅಧಿಕಾರಿಗಳೊಡನೆ ಸಂಶೋಧನೆ ಮತ್ತು ಪ್ರದರ್ಶನ ವಸ್ತುಗಳ ಬಗ್ಗೆ ಚರ್ಚಿಸಿ, ಮಾಹಿತಿ ಪಡೆದು ಕೊಳ್ಳುವ ಅವಕಾಶ ಸಿಕ್ಕಿತು. ಅವರೊಂದಿಗೆ ಭಾರತದಲ್ಲಿನ ಸಾಗರ ಸಂಶೋಧನೆಯ ಬಗ್ಗೆ ವಿವರಿಸಿ ಮೆಚ್ಚುಗೆ ಪಡೆದುಕೊಂಡರು. ನಂತರ ಪ್ರವಾಸಿ ಪ್ರಶಂಶಾ ಪುಸ್ತಕದಲ್ಲಿ ತಮ್ಮ ಅಂಕಿತವನ್ನು ಸವಿ ಸಂಕೇತ ನೆನಪಾಗಿರಿಸಿ ಪ್ರಯಾಣ ಮುಂದುವರಿಸಿದರು. .
ಅವರ ಮುಂದಿನ ಪ್ರಯಾಣ, ಡ್ರೇಕ್ ಎಂಬ ಜಲಪಥ (drake's passage). ಈ ಪ್ರದೇಶ ಅಟ್ಲಾಂಟಿಕ್ ಮತ್ತು ಪೆಸಿಫ಼ಿಕ್ ಮಾಹಾಸಾಗರಗಳ (Southern Ocean) ಅಸಾಧ್ಯವಾದ ಅಲೆಗಳ ಉಬ್ಬರ, ಏರಿಳಿತಗಳಿರುವ ಸಂಗಮ ಪ್ರದೇಶ. ಈ ಪ್ರದೇಶದಲ್ಲಿ ಅವರು ಮೂವತ್ತು ಅಡಿಗಳಿಗೂ ಮೀರಿ ಅಪ್ಪಳಿಸುವ ಅಲೆಗಳೂ ಮತ್ತು ತೀವ್ರ ಬಿರುಗಾಳಿಯ ಪ್ರಭಾವನ್ನು ಸಹಿಸಿ ಕೊಳ್ಳಬೇಕಾಗಿ ಬಂದಿತು. ನಂತರ ಮುಂದೆ ಹೋದಂತೆ ಹವಮಾನದ ಅಬ್ಬರ ಶಾಂತವಾಗುತ್ತ ಬಂತು, ಪರಿಸರದ ಸೌಂದರ್ಯವೂ ಆಹ್ಲಾದಕರವಾಯಿತು. ಆ ಸಮುದ್ರದಲ್ಲಿ ಅನೇಕ ವರ್ಗದ ತಿಮಿಂಗಲಗಳನ್ನು (killer whales), ಭಾರೀ ತೂಕವಿರುವ ಮೊಸಳೆಗಳು (crocodiles) ಹತ್ತಿರ ದಿಂದಲೇ ನೋಡುವ ಭಾಗ್ಯ ಅವರಿಗೆ ಸಿಕ್ಕಿತು. ಈ ಪ್ರಕಾರ ತಮ್ಮ ಅಂಕಿತವನ್ನು ಅಂಟಾರ್ಟಿಕದಲ್ಲಿ ಪ್ರಯಾಣ ಮಾಡಿ ಶಶಿಧರ ದಂಪತಿಗಳು ತಮ್ಮ ಸವಿನೆನಪುಗಳನ್ನು ನಿಮ್ಮ ಮುಂದೆ ಇಡುತ್ತಿದ್ದಾರೆ.







ಯಶಸ್ವಿನಿ ರಾಮಚಂದ್ರ
ನ್ಯೂ ಜೆರ್ಸಿ

ಹೋಲಿಕೆ

ಹೋಲಿಕೆಯೆಂಬುದು ನಮಗರಿವಿಲ್ಲದೆಯೇ ಬಾಲ್ಯದಿಂದಲೇ ಉಂಟಾಗುವ ಪ್ರಕ್ರಿಯೆ.ಹೌದು ,ನಮ್ಮ ಸ್ನೇಹಿತರು ಹೆಚ್ಚಿನ ಅಂಕ ಗಳಿಸಿ ,ಪಠ್ಯೇತರ ಚಟುವಟಿಕೆಗಳಲ್ಲಿ ಮುಂದಿದ್ದರೆ ನಮಗರಿವಿಲ್ಲದೆಯೇ ಅಸೂಯೆಯ ಎಳೆಯೊಂದು ಮೂಡುತ್ತದೆ.ಇದಕ್ಕೆ ಪೂರಕವೆಂಬಂತೆ ಕೆಲವು ತಂದೆತಾಯಿಯರು ತಮ್ಮ ಮಕ್ಕಳನ್ನು ಅವರ ಒಡಹುಟ್ಟಿದವರಿಗೆ ಅಥವಾ ಸ್ನೇಹಿತರಿಗೆ ಹೋಲಿಸಿ" ನೀನು ಅವರನ್ನು ನೋಡಿ ಕಲಿ" ಎಂಬ ಮೂದಲಿಸಿ ಅಸೂಯೆ ಭಾವ ಮನಸ್ಸಿನಲ್ಲಿ ಮೂಡಲು ಕಾರಣವಾಗುತ್ತಾರೆ.
ಹಾಗಾದರೆ ನಿಜವಾಗಲೂ ಹೋಲಿಕೆ ಮಾಡುವುದರಿಂಗ ಸ್ಫೂರ್ತಿ ಬರುತ್ತದೆಯೇ? ಖಂಡಿತಾ ಇಲ್ಲ.ಹೋಲಿಕೆಯಿಂದ ತನಗಿಂತ ಯಾರೂ ಮೇಲಿಲ್ಲ ಎಂಬ ಅಹಂಭಾವ ಅಥವಾ ತಾನು ಎಲ್ಲರಿಗಿಂತ ಕೆಳಮಟ್ಟದಲ್ಲಿದ್ದೇನೆ ಎಂಬ ಕೀಳರಿಮೆ ಉಂಟಾಗುತ್ತದೆ.
ಕಳೆದ ವರ್ಷ ನಮ್ಮ ಹೈಸ್ಕೂಲ್ ಬ್ಯಾಚ್ ನವರು ಸೇರಿ ಗೆಟ್ ಟುಗೆದರ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.ಅಲ್ಲಿ ನಡೆದಿದ್ದ ಸಂಭಾಷಣೆಗಳು ಹೀಗಿತ್ತು" ಸೈಟ್ ತಗೊಂಡಿದ್ದೀರಾ ,ಮನೆ ಖರೀದಿಸಿದ್ದೀರಾ ? ಹೀಗೆ ಸಾಗಿತ್ತು ಮಾತುಕಥೆ."ಇವರೆಲ್ಲರೂ ಯೋಗಕ್ಷೇಮ ವಿಚಾರಿಸುತ್ತಿದ್ದಾರೆಯೇ? ಅಥವಾ ಸ್ಪರ್ಧೆಗಿಳಿದಿದ್ದಾರೆಯೇ ಎಂಬ ಸಂದೇಹ ಉಂಟಾಯಿತು. ಅಮೆರಿಕದ ಖ್ಯಾತ ಲೇಖಕರಾದ ಥಿಯೊಡೋರ್ ರೂಸ್ವೆಲ್ಟ್ (Theodore Roosevelt) ಅವರು "Comparison is a thief of joy " ಎಂದು ಹೇಳಿದ್ದಾರೆ.
ನಮ್ಮ ಹಿಂದಿನ ದಿನವನ್ನು ಇಂದಿನ ದಿನದೊಂದಿಗೆ ಹೋಲಿಸಿಕೊಳ್ಳಬೇಕು,ಇತರರೊಂದಿಗಿನ ಸ್ಪರ್ಧೆಗಿಂತ ನಮ್ಮೊಂದಿಗೆ ನಾವು ಸ್ಪರ್ಧಿಸಬೇಕು .ಮಕ್ಕಳನ್ನು ಯಾವಾಗಲೂ ಇತರ ಮಕ್ಕಳೊಂದಿಗೆ ಹೋಲಿಸುತ್ತಿದ್ದರೆ ಅವರಲ್ಲಿ ಖಿನ್ನತೆಯಂತಹ ಗಂಭೀರ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.ಹಾಗೂ ಅವರ ಸ್ವಗೌರವ ,ಆತ್ಮವಿಶ್ವಾಸವನ್ನು ನಾವೇ ಕುಗ್ಗಿಸಿದಂತಾಗುತ್ತದೆ.ಹೋಲಿಕೆಯು ಮಕ್ಕಳ ದೇಹಾರೋಗ್ಯದ ಮೇಲೂ ಸಹ ಪರಿಣಾಮ ಬೀರುತ್ತದೆ ಎಂಬುದು ಅಚ್ಚರಿಯ ಸಂಗತಿ .
ಮಕ್ಕಳು ಪ್ರೋತ್ಸಾಹದಿಂದ ಮಾತ್ರವೇ ಪ್ರೇರಿತರಾಗುತ್ತರೆಯೇ ಹೊರತು ಹೋಲಿಕೆಯಿಂದಲ್ಲ.
ಅವರಿಗೆ ಅಪ್ರತಿಮ ಸಾಧಕರ ಕಥೆಗಳನ್ನು ಆಗಾಗ್ಗೆ ಹೇಳುತ್ತಿದ್ದರೆ ಸ್ಫೂರ್ತಿಯು ತಾನಾಗಿಯೇ ಬರುತ್ತದೆ.
ಹೋಲಿಕೆಗೆ ಕೊನೆಯೇ ಇಲ್ಲ ಎಂಬುದನ್ನು ಮೊದಲು ಅರಿತುಕೊಳ್ಳಬೇಕು .ನಾವು ಎಷ್ಟೇ ಶ್ರೀಮಂತರಾದರೂ ,ಬುದ್ಧಿವಂತರಾದರೂ ನಮಗಿಂತ ಸಿರಿವಂತರು,ತಿಳಿದವರು ಇದ್ದೇ ಇರುತ್ತಾರೆ.ಹಾಗಿರುವಾಗ ಸದಾ ಕಾಲ ಹೋಲಿಕೆ ಮಾಡಿಕೊಳ್ಳುತ್ತ ಮನಃಶ್ಯಾಂತಿಯನ್ನು ಕಳೆದುಕೊಳ್ಳುವುದು ನಿಜಕ್ಕೂ ಅರ್ಥಹೀನ.

ಇದು ಗೂಗಲ್ ನಿಂದ ಪಡೆದ ಮಾಹಿತಿ
ಬರಾಕ್ ಒಬಾಮಾರವರು ತಮ್ಮ ೪೭ನೇ ವಯಸ್ಸಿನಲ್ಲಿ ರಾಷ್ಟ್ರಪತಿಯಾಗಿದ್ದರು .ಆದರೆ ಡೊನಾಲ್ಡ್ ಟ್ರಂಪ್ ತಮ್ಮ 70 ನೇ ವಯಸ್ಸಿನಲ್ಲಿ ರಾಷ್ಟ್ರಪತಿಯಾದರು.
ಕೆಲವರು 25 ನೇ ವಯಸ್ಸಿಗೆ ಸಿಇಓ ಆಗಿ ತಮ್ಮ 50 ನೇ ವಯಸ್ಸಿಗೆ ಮರಣಹೊಂದಿರುತ್ತಾರೆ.
ಇನ್ನು ಕೆಲವರು ತಮ್ಮ ೫೦ ನೇ ವಯಸ್ಸಿಗೆ ಸಿಇಓ ಆಗಿ ೯೦ ನೇ ವಯಸ್ಸಿನವರೆಗೂ ಬದುಕಿರುತ್ತಾರೆ.
ಕೆಲವರು ನಮಗಿಂತ ಮುಂದಿರುತ್ತಾರೆ,ಕೆಲವರು ಹಿಂದಿರುತ್ತಾರೆ.ಆದರೆ ಎಲ್ಲರೂ ಸಹ ಅವರ ಕಾಲಘಟ್ಟಕ್ಕೆ ಅನುಸಾರವಾಗಿ ಜೀವಿಸುತ್ತಿರುತ್ತಾರೆ.
ಹೋಲಿಕೆಯಿಂದಾಗುವ ದುಷ್ಪರಿಣಾಮಗಳು ಹೀಗಿವೆ.
೧.ಆತ್ಮವಿಶ್ವಾಸವು ಕಡಿಮೆಯಾಗುತ್ತದೆ
೨.ಅಸೂಯೆ,ಬೇಸರ ಹೆಚ್ಚಾಗುತ್ತದೆ.
೩.ನಮ್ಮ ಸ್ವಂತ ಪ್ರಗತಿಯನ್ನು ನಾವು ಕಡೆಗಣಿಸಬಹುದು
೪.ಒತ್ತಡ ಹೆಚ್ಚಾಗುತ್ತದೆ,ಇತರರ ಮಟ್ಟಕ್ಕೆ ನಾವು ಬೇಗನೇ ತಲುಪಬೇಕು ಎಂಬ ಒತ್ತಡ
೫.ನಮ್ಮ ಕನಸುಗಳಿಗಿಂತ ಇತರರ ಜೀವನವನ್ನು ನಕಲು ಮಾಡಲು ಪ್ರಯತ್ನಿಸುವುದು.
೬.ಖಿನ್ನತೆಗೆ ಒಳಗಾಗುವ ಸಾಧ್ಯತೆ ಹೆಚ್ಚು
೭.ಸ್ವಸಾಮರ್ಥ್ಯದ ಮೇಲೆ ನಂಬಿಕೆ ಕಳೆದುಕೊಳ್ಳಬಹುದು
೮.ನೆಗೆಟಿವ್ ಸ್ವಯಂ ಸಂಭಾಷಣೆ
೯.ಸ್ನೇಹ -ಸಂಬಂಧದಲ್ಲಿ ಅಂತರ ಬರಬಹುದು.



ಶಾಂತಲಾ ಸುಬ್ರಮಣ್ಯಮ್
ಧರ್ಮಾವರಂ

ಆತ್ಮಹತ್ಯೆ

ಆತ್ಮಹತ್ಯೆ ಮಹಾಪಾಪ, ಹೇಡಿಗಳೇ ಆತ್ಮಹತ್ಯೆ ಮಾಡಿಕೊಳ್ಳುವವರು, ಎಂಥ ವಿಷಮ ಪರಿಸ್ಥಿತಿ ಬದುಕಲ್ಲಿ ಎದುರಾದರೂ ಧೈರ್ಯದಿಂದ ಎದುರಿಸಿ ಬದುಕು ಗೆಲ್ಲಬೇಕು ಅನ್ನೋದು ನಮ್ಮ ಹಿರಿಯರು ಮನದಟ್ಟು ಮಾಡಿಸಿದ ಮಾತು. ಹಾಗಾಗಿಯೇನೋ ಬಹುತೇಕ ನಮ್ಮಂಥ ಮಧ್ಯತರಗತಿ ವರ್ಗದವರಲ್ಲಿ ಬದುಕಿನಲ್ಲಿ ಎಂಥದ್ದೇ ಹೋರಾಟ ಬರಲಿ ಜಯಿಸಿಯೇ ಸಿದ್ಧ ಅನ್ನುವ ಮನೋಧೈರ್ಯ ಬೆಳೆದಿರುತ್ತದೆ. ಅದಕ್ಕೆ ಮುಖ್ಯ ಕಾರಣ ಬಹುತೇಕ ಕೂಡು ಕುಟುಂಬ ವ್ಯವಸ್ಥೆ , ಶಾಲೆಗಳಲ್ಲಿ ಶಿಕ್ಷಕರ ಕಾಳಜಿ ತುಂಬಿದ ಬೈಗುಳಗಳು, ಅನೇಕ ಬಾರಿ ಬೀಳುತ್ತಿದ್ದ ಹೊಡೆತಗಳು ಕೂಡ. ಸರಿ ತಪ್ಪುಗಳ ವಿವೇಚನೆ, ಸೋಲುವ ಪರಿಸ್ಥಿತಿಯಲ್ಲಿ ಗೆಲ್ಲುವುದರ ಬಗ್ಗೆ ಯೋಚನೆ, ಬರೀ ಉತ್ತಮ ಅಂಕಗಳು, ಗರಿಷ್ಟ ಸ್ಥಾನ ಮಾತ್ರ ನಮ್ಮ ವ್ಯಕ್ತಿತ್ವದ ಪ್ರಮಾಣ ಆಗಿರಲಿಲ್ಲ. ಶಿಕ್ಷಕರು ಕೊಡುವ ಶಿಕ್ಷೆ ಮಾನಸಿಕವಾಗಿ ನಮ್ಮನ್ನು ಗಟ್ಟಿ ಮಾಡಿ ತಪ್ಪನ್ನು ತಿದ್ದಿಕೊಂಡು ಸರಿದಾರಿಯಲ್ಲಿ ನಡೆಯುವ ಛಲ ಮೂಡಿಸುತ್ತಿತ್ತೇ ಹೊರತು ಅವಮಾನ, ಮರ್ಯಾದೆ ಹೋಯ್ತು ಅನ್ನುವ ವಿಪರೀತ ಭಾವ ಬರಲು ಬಿಡುತ್ತಿರಲಿಲ್ಲ. ತಂದೆ ತಾಯಿಗಳಿಗೂ ತಮ್ಮ ಮಕ್ಕಳು ವಿದ್ಯಾವಂತರಷ್ಟೇ ಅಲ್ಲ ವಿನಯವಂತರು, ಒಳ್ಳೆಯ ಸಂಸ್ಕಾರವಂತರು ಆಗಿ ಬದುಕಬೇಕು ಅನ್ನುವದಿತ್ತು. ಸಂಪಾದನೆ ಚೆನ್ನಾಗಿ ಮಾಡಿ ಒಳ್ಳೆ ರೀತಿಯಿಂದ ಗೌರವಯುತವಾಗಿ ಬದುಕಲಿ ಅನ್ನುವದಿತ್ತು.

ಆದರೆ ಯಾವಾಗ ಮಕ್ಕಳ ಭವಿಷ್ಯ ಮಾರ್ಕ್ಸ್ ಕಾರ್ಡ್, rank, ಲಕ್ಷಗಟ್ಟಲೆ ಸಂಬಳ ಸಣ್ಣ ವಯಸ್ಸಿಗೆ ಅನ್ನುವ ಒತ್ತಡ ಬೀಳಲು ಶುರುವಾಯಿತೋ ಆಗಿಂದ ಮಕ್ಕಳ ಮಾನಸಿಕ ಸ್ಥಿತಿ ದುರ್ಬಲವಾಗಲು ಶುರುವಾಯ್ತು. ಹೆತ್ತವರ ಮಿತಿಮೀರಿದ ಆಸೆಗಳು, ತಾವು ಮಾಡಲಾಗದ್ದನ್ನು ತಮ್ಮ ಮಕ್ಕಳು ಸಾಧಿಸಲೇಬೇಕೆಂನ್ನುವ ಹಠ, ಅದಕ್ಕಾಗಿ ಮಕ್ಕಳ ಮೇಲೆ ಬಿಡುವಿಲ್ಲದ ವೇಳಾಪಟ್ಟಿಯ ಓದಿನ ಕ್ರಮ ಹೇರಲಾಯ್ತು. ಟ್ಯೂಷನ್ ಗಳು ಹುಟ್ಟಿಕೊಂಡವು. ಶಾಲೆ ಗಿಂತ ಟ್ಯೂಷನ್ ಅವಲಂಬನೆ ಜಾಸ್ತಿ ಆದಾಗ ವೆಚ್ಚವೂ ಜಾಸ್ತಿ ಆಯ್ತು. ಹೆತ್ತವರ ಆಸೆಗೆ ನೀರೆರೆಯಲು ದುಬಾರಿ ಶುಲ್ಕಗಳ ಶಾಲೆಗಳು ತಯಾರಾದವು ಶಿಕ್ಷಣ ಧನಾರ್ಜನೆಯಾಗಿ ಮಕ್ಕಳ ಮೇಲೇ ಇನ್ನಿಲ್ಲದ ಒತ್ತಡ, ಟಾರ್ಗೆಟ್ ಶುರುವಾಯ್ತು. ಮನೆಯಲ್ಲೂ , ಶಾಲೆ, ಟ್ಯೂಷನ್ ಗಳಲ್ಲೂ ಓದು, ಪರೀಕ್ಷೆ , ಅಂಕಗಳ ಮಹಾಯುದ್ಧ ಶುರುವಾಗಿ ಮಕ್ಕಳ ಮಾನಸಿಕ ಸ್ಥಿತಿ ದುರ್ಬಲವಾಗುತ್ತ ಹೋಯ್ತು. ಎಷ್ಟೋ ಮನೆಗಳಲ್ಲಿ ತಮ್ಮ ಮನದ ಭಯ, ಆತಂಕ, ಮಾತುಗಳನ್ನು ಹೇಳಿಕೊಳ್ಳಲು ಮಕ್ಕಳಿಗೆ ಸಾಧ್ಯವಾಗದೆ ಹೋಗ್ತಿದೆ. ತಾಳ್ಮೆಯಿಂದ ಕೇಳಿ ಪರಿಹಾರ ಸೂಚಿಸಲು ತಂದ್w ತಾಯಿ ಉದ್ಯೋಗಗಳಲ್ಲಿ ವ್ಯಸ್ಥರು, ಅಜ್ಜ ಅಜ್ಜಿ ಇಲ್ಲವೇ ಇಲ್ಲ, ಇನ್ನು ಈಗೀಗಂತೂ ಒಂಟಿ ಸಂತಾನವೇ ಹೆಚ್ಚಿದ್ದರಿಂದ ಒಡಹುಟ್ಟಿದವರೂ ಇಲ್ಲ, ಬಾಕಿ ಸಂಬಂಧಗಳಾದ ಚಿಕ್ಕಪ್ಪ, ಚಿಕ್ಕಮ್ಮ, ಅತ್ತೆ, ಮಾವ, ಅವರೆಲ್ಲರ ಮಕ್ಕಳು ಅನ್ನುವ ಒಡನಾಟಗಳೇ ಇಲ್ಲ. ಸ್ನೇಹಿತರ ಬಳಿ ಹೇಳಿಕೊಳ್ಳೋಣ ಅಂದರೆ ಅವರೆಲ್ಲರದ್ದು ಅದೇ ಪರಿಸ್ಥಿತಿ.

ಇದೆಲ್ಲದರಿಂದ ಸಣ್ಣ ವಯಸಿನಲ್ಲೇ ಆತ್ಮಹತ್ಯೆ ಪ್ರಕರಣಗಳು. ದಿನಕ್ಕೊಮ್ಮೆ ಆದರೂ 7,8 ವರ್ಷದ ಮಗು ಕಡಿಮೆ ಅಂಕಗಳು ಬಂದದ್ದಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಅನ್ನುವ ಸುದ್ದಿ ಓದಿದಾಗ ಮನ ಭಾರವಾಗುತ್ತದೆ. ಇನ್ನು ಓದಿ ಕೆಲಸ ಸಿಗದವರು, ಪ್ರೇಮ ವಿಫಲವಾದವರು ಕೂಡ ತುಳಿಯೋದು ಅದೇ ದಾರಿ ಆತ್ಮಹತ್ಯೆ.

ಎಲ್ಲ ಹೋಗಲಿ ಹಣವಿದ್ದವರು, ದೊಡ್ಡ ದೊಡ್ಡ ಉದ್ಯಮಿಗಳು, ಸಿನಿಮಾ ತಾರೆಯರು, ವೃತ್ತಿ ನಿಪುಣರು ಹೀಗೆ ಬದುಕನ್ನು ಯಶಸ್ವಿಯಾಗಿ ಬದುಕುತ್ತಿರುವವರು ಕೂಡ ತುಳಿಯೋದು ಅದೇ ದಾರಿ.

ವರ್ಷಗಳ ಕೆಳಗೆ ಕಾಫಿ ಡೇ ಮಾಲೀಕ ಸಿದ್ಧಾರ್ಥ್ ವೆಂಕಟೇಶ್ ಅವರು, ಮೊನ್ನೆ ಮೊನ್ನೆಯ ರಿಯಲ್ ಎಸ್ಟೇಟ್ ಒಡೆಯ ಸಿ. ಜೆ. ರಾಯ್ ಕೂಡ ಹಿಡಿದದ್ದು ಅದೇ. ಮೊನ್ನೆ ಇನ್ಸ್ಟ್ರೀಲ್ಸ್ ನಲ್ಲಿ ಸಿದ್ಧಾರ್ಥ್ ಅವರ ಪತ್ನಿ ಬಗ್ಗೆ ಬಂದಿತ್ತು. 7,000 ಕೋಟಿ ಸಾಲದ ಭಾದೆ ತಾಳದೆ ಪತಿ ಆತ್ಮಹತ್ಯೆ ಮಾಡಿಕೊಂಡರೆ ಆ ಮಹಿಳೆ ವ್ಯವಹಾರಗಳನ್ನು ತನ್ನ ಕೈಗೆತ್ತಿಕೊಂಡು ಸೋರುವ ಕಡೆಗೆಲ್ಲ ಬಿಗಿ ಮಾಡಿ ಎಲ್ಲ ಪ್ರಯತ್ನಗಳಿಂದ ಅಷ್ಟು ದೊಡ್ಡ ಸಾಲವನ್ನು 500 ಕೋಟಿಗೆ ಇಳಿಸಿದ್ದಾರೆ, ಅದನ್ನೂ ಸಂಪೂರ್ಣ ತೀರಿಸುವ ಹಾದಿಯಲ್ಲಿದ್ದಾರೆ ಅಂತ ಬಂದಿತ್ತು. ಆಗ ಅನಿಸಿದ್ದು , ಸಿದ್ಧಾರ್ಥ್ ಅವರು ತಮ್ಮ ಹಣಕಾಸಿನ ಪರಿಸ್ಥಿತಿಯನ್ನು ಪತ್ನಿಯ ಬಳಿ ಚರ್ಚಿಸಬಹುದಿತ್ತಲ್ಲ, ಆಕೆ ಕೊಡುವ ಸಲಹೆ ಆಚರಿಸಿ ವ್ಯವಹಾರ ಉಳಿಸಿಕೊಳ್ಳಬಹುದಿತ್ತಲ್ಲ , ಅದು ಬಿಟ್ಟು ಹೇಡಿತನದ Simply ಇಟ್ಟು ತಾವೇನೋ ಹೋಗಿ ಮನೆಯವರನ್ನು ಅಯೋಮಯ ಪರಿಸ್ಥಿತಿಗೆ ದೂಡಬೇಕಿತ್ತೆ ಅಂತ.

ಇನ್ನು ಸಿ ಜೆ ರಾಯ್ ಅವರ ಆತ್ಮಹತ್ಯೆಗೆ ನಿಜವಾದ ಕಾರಣ ಹೊರಬಿದ್ದಿಲ್ಲ ಸಾಮಾಜಿಕ ಜಾಲತಾಣಗಳಲ್ಲಿ ಏನೇನೋ ಸುದ್ದಿ ಹರಡುತ್ತಿದೆ ಯಾವುದು ನಿಜವೋ ಯಾವುದು ಸುಳ್ಳೋ.

ಒಟ್ಟಿನಲ್ಲಿ ಮನುಷ್ಯ ಮಾನಸಿಕವಾಗಿ ದುರ್ಬಲನಾಗುತ್ತಿದ್ದಾನೆ.

ಒಳ್ಳೆಯ , ಸಂಸ್ಕಾರವಂತ ಕುಟುಂಬ ಹಿನ್ನೆಲೆಯಲ್ಲಿ ಬೆಳೆದ ಮಕ್ಕಳಲ್ಲಿ ಆತ್ಮಹತ್ಯೆ ಪ್ರಮಾಣ ಕಡಿಮೆ ಅನಿಸುತ್ತಿದೆ. ಮಕ್ಕಳಲ್ಲಿ ಚಿಕ್ಕಂದಿನಿಂದ ಬದುಕುವ ಧೈರ್ಯ ತುಂಬಬೇಕು, ಆತ್ಮಹತ್ಯೆಗೆ ಬೇಕಾಗುವ ಧೈರ್ಯದಲ್ಲಿ ಒಂದಂಶವಾದರೂ ಬದುಕಿ ತೋರಿಸುವ ಪ್ರಯತ್ನದಲ್ಲಿರಬೇಕು. ಮಕ್ಕಳಿಗೆ ಮುಖ್ಯವಾಗಿ ಮನೆಯಲ್ಲಿ ಹಾಗೂ ಶಾಲೆಯಲ್ಲಿ ತಪ್ಪು ಮಾಡಿದಲ್ಲಿ ಶಿಕ್ಷೆಯ ಭಯ ಇರಬೇಕು. ಸಣ್ಣದಿರುವಾಗ ಅನುಭವಕ್ಕೆ ಬರುವ ಸಣ್ಣ ಪುಟ್ಟ ನೋವು, ಅವಮಾನ, ಶಿಕ್ಷೆಗಳು ಮಕ್ಕಳ ಮನಸ್ಸನ್ನು ಧೃಡ ಮಾಡುತ್ತವೆ. ಈ ನಿಟ್ಟಿನಲ್ಲಿ ಹೆತ್ತವರು , ಶಿಕ್ಷಕರು , ಮನೆಯ ಹಿರಿಯರು, ಒಡನಾಡಿಗಳು ಎಲ್ಲರ ಪ್ರಯತ್ನ, ಸಹಕಾರ ಬೇಕೇ ಬೇಕು.



ರಾಘವೇಂದ್ರ ಕುಂದಲಗುರ್ಕಿ
ನ್ಯೂ ಜೆರ್ಸಿ

ಕನ್ನಡದ ರಿಯಾಲಿಟಿ ಶೋ ಗೆ ಹೊಸ ಅಧ್ಯಾಯ ಬರೆದ ಬಿಗ್ ಬಾಸ್ 12ರ ಚಾಂಪಿಯನ್

ಹೊಸ ಪೀಳಿಗೆಯ ಗ್ರಾಮೀಣ ಪ್ರತಿಭೆ, ಸಕ್ಕರೆ ನಾಡಾದ ಮಳವಳ್ಳಿಯಿಂದ ಪ್ರಪಂಚದ ಕನ್ನಡಿಗರ ಮನ ಗೆದ್ದ ಅಪ್ರತಿಮ ಪ್ರತಿಭೆ – ಅವನ ಸಮಯ ಪ್ರಜ್ಞೆ, ಹಾಸ್ಯ, ಕವಿತೆ, ಸ್ನೇಹ ಮತ್ತು ಪ್ರೀತಿ ಕನ್ನಡಿಗರ ಮೋಡಿ ಮಾಡಿದ ಜಾದೂಗಾರ.

ಕನ್ನಡಿಗರ ಮನ ಗೆದ್ದ ಹೃದಯ:

ಕನ್ನಡ ಬಿಗ್ ಬಾಸ್ – ಕರ್ನಾಟಕದ ಪ್ರಖ್ಯಾತ ನಟ ಕಿಚ್ಚ ಸುದೀಪ್ ಅವರ ಸಾರಥ್ಯದಲ್ಲಿ ನಡೆಯುವ ಈ BigBoss ಕನ್ನಡ, ಮನೋರಂಜನೆಯ ಅತ್ಯಂತ ಜನಪ್ರಿಯ ರಿಯಾಲಿಟಿ ಶೋ. Colors ಕನ್ನಡ ಚಾನೆಲ್ ನಲ್ಲಿ ವರ್ಷದಿಂದ ವರ್ಷಕ್ಕೆ ಅತ್ಯಂತ ಪ್ರಖ್ಯಾತಿ ಹಾಗೂ ಹೆಚ್ಚಿನ TRP ತಂದುಕೊಡುವ ಕಾರ್ಯಕ್ರಮ. ಪ್ರತೀ ವರ್ಷ ಬರೀ ಕೆಲವು clip ನೋಡುತ್ತಿದ್ದ ನನಗೆ, ಮೊದಲ ಬಾರಿ ಆಫೀಸಿನ ನಂತರ ಮನೆಗೆ ಬಂದು ಕೂತು ನೋಡುವಷ್ಟು ಇಷ್ಟವಾದ ಕಾರ್ಯಕ್ರಮ.

ಪ್ರತಿ ವರ್ಷವೂ ಹಲವಾರು (20–25) celebrity ಸ್ಪರ್ಧಿಗಳ ನಡುವೆ ಕೆಲವರು ಮಾತ್ರ ಪ್ರೇಕ್ಷಕರ ಹೃದಯ ಗೆಲ್ಲಲು ಸಾಧ್ಯವಾಗುತ್ತದೆ. ಆದರೆ Season 12ರ ಗಿಲ್ಲಿ ನಟ (ರಾಜ್) ಎಂಬ ಹೆಸರು ಬಿಗ್ ಬಾಸ್ ಕನ್ನಡ ಇತಿಹಾಸದಲ್ಲಿ ಒಂದು ವಿಶೇಷ ಅಧ್ಯಾಯ ಬರೆದಿದೆ.

47 ಕೋಟಿಗೂ ಹೆಚ್ಚು ಮತ ಪಡೆದು ಬರೀ ಗೆದ್ದಿದ್ದಲ್ಲದೆ ಪ್ರೇಕ್ಷಕರ ಮನದಲ್ಲಿ ಶಾಶ್ವತ ಸ್ಥಾನ ಗಳಿಸಿದ ಗಿಲ್ಲಿ ನಟ, ತಮ್ಮ ಬುದ್ಧಿ, ಹಾಸ್ಯ ಮತ್ತು ಪ್ರೀತಿಯ ಮೂಲಕ ಇಡೀ ಕನ್ನಡ ನಾಡಿನ ಮೆಚ್ಚಿನ ವ್ಯಕ್ತಿಯಾದರು.

೧. ಬಿಗ್ ಬಾಸ್ ಆಟದ ಅರಿವು – ಬುದ್ಧಿ, ಚಾಣಾಕ್ಷತೆ ಹಾಗೂ ತಂತ್ರಗಾರಿಕೆ

ಬಿಗ್ ಬಾಸ್ ಮನೆಯಲ್ಲಿ ಬದುಕುಳಿಯಲು ಕೇವಲ ಶಕ್ತಿ ಅಥವಾ ಜನಪ್ರಿಯತೆ ಸಾಲದು – ಅದಕ್ಕೆ ಬೇಕು ಬುದ್ಧಿ, ತಾಳ್ಮೆ ಮತ್ತು ಆಟದ ಆಳವಾದ ತಿಳಿವಳಿಕೆ. ಗಿಲ್ಲಿ ನಟ ಅವರು ಮೊದಲ ದಿನದಿಂದಲೇ ಬಿಗ್ ಬಾಸ್ ಆಟದ ರಚನೆಯನ್ನು ನಿಖರವಾಗಿ ಅರ್ಥ ಮಾಡಿಕೊಂಡವರು.

ಹಲವಾರು reality ಶೋಗಳಲ್ಲಿ runners up ಆದ ಗಿಲ್ಲಿಗೆ, ಪ್ರತಿ ವಾರದ ಕಾರ್ಯಗಳಲ್ಲಿ (ಟಾಸ್ಕ್‌ಗಳಲ್ಲಿ) ಅವರ ಭಾಗವಹಿಸುವಿಕೆ ಕೇವಲ ಗೆಲ್ಲಲು ಮಾತ್ರವಲ್ಲ, ಬದಲಾಗಿ ತಮ್ಮ ವ್ಯಕ್ತಿತ್ವವನ್ನು ಪ್ರೇಕ್ಷಕರ ಮುಂದೆ ಸ್ಪಷ್ಟವಾಗಿ ತೋರಿಸುತ್ತಿದ್ದರು.

ನಾಮಿನೇಶನ್ ಪ್ರಕ್ರಿಯೆ – ರಾಜಕೀಯ ಹಾಗೂ ಜಾಣತನದ ಉತ್ತರ

ಬಿಗ್ ಬಾಸ್ ಮನೆಯ ಅತಿ ಸಂಕೀರ್ಣವಾದ ಭಾಗವೆಂದರೆ ನಾಮಿನೇಶನ್ ಪ್ರಕ್ರಿಯೆ. ಗಿಲ್ಲಿ ನಟ ಅವರು ಯಾರನ್ನು ನಾಮಿನೇಟ್ ಮಾಡಬೇಕು, ಯಾರ ಜೊತೆ ಸ್ನೇಹ ಇಡಬೇಕು, ಯಾವಾಗ ಮೌನವಿರಬೇಕು – ಎಂಬ ತ್ರಿಮುಖ ಸಮತೋಲನವನ್ನು ಅದ್ಭುತವಾಗಿ ಕಾಯ್ದುಕೊಂಡರು. ತಮ್ಮ ಹಾಗೂ ಕಾವ್ಯ ಅವರ ಸ್ನೇಹ-ಪ್ರೀತಿಯನ್ನು ನೋಡುಗರ ಮನ ಗೆಲ್ಲುವಲ್ಲಿ ಬಹಳ ಸಫಲರಾದರು. ಯಾರೊಡನೆಯೂ ಕೊನೆಯವರೆಗೆ ವೈರ ಸಾಧಿಸದೆ, ತಮ್ಮ ಸ್ಥಾನ ಭದ್ರಪಡಿಸಿಕೊಂಡರು. ಸ್ನೇಹಿತರ ಗುಂಪಿನಲ್ಲಿ ಇದ್ದರೂ, ತಮ್ಮ ಸ್ವಂತಿಕೆಯನ್ನು ಬಿಡಲಿಲ್ಲ – ಇದೇ ಅವರ ಬಲ.

ಆಟದಲ್ಲಿ ನೇತೃತ್ವ

ದೈಹಿಕವಾಗಿ ಅಂತ ಪ್ರಬಲವಾಗಿಲ್ಲದಿದ್ದರೂ, ತಮ್ಮ ಚಾಣಾಕ್ಷತೆಯಲ್ಲಿ, ಸಮಯೋಚಿತ ಮಾತಿನಲ್ಲಿ ಜನರ ಮನ ಗೆದ್ದು ಮನೆ ಮಾತಾದರು. ಎಂತಹ ಸಂದರ್ಭ ಬಂದರೂ ಸ್ನೇಹಕ್ಕಾಗಿ ಕಾವ್ಯ ಅವರನ್ನು ನಾಮಿನೇಟ್ ಮಾಡದೆ ಜನರಿಗೆ ತಮ್ಮ ಸ್ನೇಹಕ್ಕಾಗಿ ಸದಾ ನಿಲ್ಲುವ ವ್ಯಕ್ತಿ ಎಂದು ತೋರಿಸಿದರು. ಹಾಸ್ಯದ ಮೂಲಕ ತಂಡದ ಒತ್ತಡ ಕಡಿಮೆ ಮಾಡಿ, ಎಲ್ಲರಿಗೂ ಸ್ಫೂರ್ತಿ ತುಂಬುತ್ತಿದ್ದ ಅವರ ವ್ಯಕ್ತಿತ್ವ ಪ್ರೇಕ್ಷಕರಿಗೆ ತುಂಬಾ ಇಷ್ಟವಾಯಿತು.

೨. ಪ್ರೇಕ್ಷಕರಂತೆ ಯೋಚಿಸುವ ಕಲೆ – 'ಆಡಿಯೆನ್ಸ್ ಕನೆಕ್ಷನ್'

ಬಿಗ್ ಬಾಸ್ ಆಟದ ಅತ್ಯಂತ ಮಹತ್ವದ ಅಂಶವೆಂದರೆ – ಪ್ರೇಕ್ಷಕರ ಓಟು. ಪ್ರೇಕ್ಷಕರು ಏನು ನೋಡಲು ಇಷ್ಟಪಡುತ್ತಾರೆ, ಅವರ ಮನಸ್ಸಿಗೆ ಏನು ತಾಗುತ್ತದೆ ಎಂಬ ಸ್ಪಷ್ಟ ತಿಳಿವಳಿಕೆ ಗಿಲ್ಲಿ ನಟ ಅವರಿಗೆ ಇತ್ತು. ಸಾಮಾನ್ಯ ಕನ್ನಡ ಕುಟುಂಬದ ಮನೋಭಾವ, ನೈಜ ಭಾವನೆಗಳು ಮತ್ತು ಸರಳ ಜೀವನ ಮೌಲ್ಯಗಳನ್ನು ತಮ್ಮ ನಡವಳಿಕೆಯಲ್ಲಿ ಪ್ರತಿಫಲಿಸಿ, ಕರ್ನಾಟಕದ ಪ್ರತಿ ಮನೆಯ ಪ್ರೀತಿ ಗಳಿಸಿದರು

ಪ್ರಾಮಾಣಿಕತೆ – ಅವರ ಅತಿ ದೊಡ್ಡ ಶಕ್ತಿ

ಟಿ.ವಿ. ಕ್ಯಾಮೆರಾ ಮುಂದೆ ನಟಿಸುವ ಪ್ರಯತ್ನ ಮಾಡದೆ, ಗಿಲ್ಲಿ ನಟ ಯಾವಾಗಲೂ ತಾವಿದ್ದಂತೆ ಇದ್ದರು. ಮಂಡ್ಯ ಗ್ರಾಮೀಣ ಆಡು ಕನ್ನಡ ಭಾಷೆಯಲ್ಲಿ ಹೇಳಿದ ಹಲವಾರು ವಾಕ್ಯಗಳು, ಗಾದೆ ಮಾತುಗಳು ಕನ್ನಡಿಗರ ಮನೆ ಮಾತಾದವು.

"ದೊಡ್ಡವ್ವ ದೊಡ್ಡವ ದ್ವಾಸೆ ಕೊಡು, ಚಿಕ್ಕವ್ವ ಚಿಕ್ಕವ ಚಕ್ಲಿ ಕೊಡು"

ಇನ್ನು ಹಲವಾರು ಪ್ರಾಸಬದ್ಧ ಪದಗಳು ಮಕ್ಕಳಾದಿಯಾಗಿ ಬಹಳಷ್ಟು ಜನಪ್ರಿಯವಾಯಿತು. ಸಂತೋಷ ಬಂದಾಗ ಮನಸ್ಸು ತೆರೆದು ನಕ್ಕರು. ಹಲವಾರು ಸ್ಪರ್ಧಿಗಳು ಇವನಿಗೆ ಮಾನವೀಯತೆ, ಹೃದಯವಂತಿಕೆ ಇಲ್ಲ, ಬೇರೆಯವರ ನೋವು ಅರ್ಥ ಆಗುವುದಿಲ್ಲ, ಕಣ್ಣೀರು ಹಾಕಲಿಲ್ಲ ಎಂದು ತಿಳಿಸಿದರೂ, ಜನರು ಅದನ್ನು ಆಟದ ತಂತ್ರಗಳು ಎಂದು ಪರಿಗಣಿಸಿದರು. ಇವರ ಹಾಗೂ ರಘು ಅವರ ಸ್ನೇಹ, ರಕ್ಷಿತಾ ಅವರೊಡನೆ ನಡೆದ ಹಲವಾರು ಸಂಭಾಷಣೆಗಳು, ಅಶ್ವಿನಿ ಗೌಡ ಹಾಗೂ ಜಾಹ್ನವಿ ಅವರೊಡನೆ ಆದ ಕಲಹಗಳು ಕೆಲವೊಮ್ಮೆ ಕಿರಿಕಿರಿ ಎನಿಸಿದರೂ, ತುಂಬಾ ಮನರಂಜನೆ ಉಂಟು ಮಾಡಿತು. 'ಈ ಮನುಷ್ಯ ನಿಜವಾಗಿ ನಮ್ಮ ನೆರೆಮನೆಯ ಹುಡುಗ' ಎಂಬ ಭಾವನೆ ಜನರಲ್ಲಿ ಮೂಡಿಸಿದ್ದೇ ಗಿಲ್ಲಿ ನಟ ಅವರ ಯಶಸ್ಸಿನ ರಹಸ್ಯ

.ಸಂಘರ್ಷ ನಿರ್ವಹಣೆ – ಶಾಂತ ಮನಸ್ಸು, ಜಾಣ ನಾಲಿಗೆ

ಮನೆಯಲ್ಲಿ ಜಗಳ, ಭಿನ್ನಾಭಿಪ್ರಾಯ ಬಂದಾಗ ಗಿಲ್ಲಿ ನಟ ಎಂದಿಗೂ ನ್ಯಾಯ ರೀತಿಯಲ್ಲಿ ಮಾತಾಡುತ್ತಿದ್ದು, ಕೋಪ ಬಂದಾಗಲೂ ಘನತೆ ಕಾಯ್ದುಕೊಂಡರು. ತಪ್ಪಾದಾಗ ಕ್ಷಮೆ ಕೇಳಿದರು – ಇದು ಪ್ರೇಕ್ಷಕರಿಗೆ ತುಂಬಾ ಮೆಚ್ಚುಗೆಯಾಯಿತು. 'ಈ ಮನುಷ್ಯ ಗೆಲ್ಲಲೇಬೇಕು' ಎಂಬ ಧ್ವನಿ ಸಾಮಾಜಿಕ ಮಾಧ್ಯಮದಲ್ಲಿ ಹರಡಿದ್ದು ಕಾಕತಾಳೀಯವಲ್ಲ – ಅದು ಅವರ ನಡವಳಿಕೆಯ ಫಲ.

೩. ಹಾಸ್ಯ – ಮನೆಯ ಜೀವ, ಪ್ರೇಕ್ಷಕರ ಪ್ರೀತಿ

ಗಿಲ್ಲಿ ನಟ ಅವರ ಹಾಸ್ಯ ಪ್ರಜ್ಞೆ ಬಿಗ್ ಬಾಸ್ ಮನೆಯ ಜೀವಂತಿಕೆಗೆ ಅತ್ಯಂತ ಮಹತ್ವದ ಕೊಡುಗೆ ನೀಡಿತು. ಅವರ ನಗು ಕೃತ್ರಿಮವಲ್ಲ – ಅದು ಸಹಜ, ಸ್ವಾಭಾವಿಕ. ಕನ್ನಡ ಜನಮಾನಸದ ಭಾಷೆ, ಗಾದೆ ಮಾತುಗಳು ಮತ್ತು ದೈನಂದಿನ ಜೀವನದ ಹಾಸ್ಯವನ್ನು ಅವರು ಎಷ್ಟು ಚೆನ್ನಾಗಿ ಬಳಸುತ್ತಿದ್ದರೆಂದರೆ ಪ್ರೇಕ್ಷಕರು ತಮ್ಮ ಮನೆಯ ಒಂದು ಮೂಲೆಯಲ್ಲಿ ಕೂತು 'ಅಯ್ಯೋ! ಇವ್ರು ನಮ್ಮ ಮನೆ ಹುಡುಗ!' ಎಂದು ನಗುತ್ತಿದ್ದರು.

"Timing is Everything" – ಸಮಯೋಚಿತ ಹಾಸ್ಯ

ಒಳ್ಳೆಯ ಹಾಸ್ಯಗಾರನ ಅತ್ಯಂತ ದೊಡ್ಡ ಗುಣ – ಸರಿಯಾದ ಸಮಯದಲ್ಲಿ ಸರಿಯಾದ ಮಾತು ಹೇಳುವುದು. ಗಿಲ್ಲಿ ನಟ ಇದರಲ್ಲಿ ಅದ್ವಿತೀಯರು. ಮನೆಯಲ್ಲಿ ಉದ್ವೇಗ ಹೆಚ್ಚಾದಾಗ, ಒಂದು ಚಿಕ್ಕ ಮಾತು, ಒಂದು ಹಾಸ್ಯದ ಸ್ಪರ್ಶ – ಇಷ್ಟರಲ್ಲೇ ಇಡೀ ವಾತಾವರಣ ಹಗುರಾಗಿ ಬಿಡುತ್ತಿತ್ತು. ಗಂಭೀರ ಸನ್ನಿವೇಶಗಳಲ್ಲೂ ಅವರ ಹಾಸ್ಯ ಎಂದಿಗೂ ಅಶ್ಲೀಲ ಅಥವಾ ಅಗೌರವದ್ದಾಗಿರಲಿಲ್ಲ – ಅದು ಸೌಮ್ಯ, ಸ್ನೇಹಪೂರ್ಣ.

ನಾಟಕೀಯ ಡೈಲಾಗ್ – ಕ್ಷಣದ ಮಾತು, ಶಾಶ್ವತ ನೆನಪು

ಗಿಲ್ಲಿ ನಟ ಅವರ ಸಂಭಾಷಣೆಗಳು ಅನೇಕ ಬಾರಿ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದ್ದವು. ಅವರ ಮಾತುಗಳಲ್ಲಿ ಕನ್ನಡ ಸಂಸ್ಕೃತಿಯ ಸೊಗಡು, ಹಳ್ಳಿಯ ಮಣ್ಣಿನ ಪರಿಮಳ ಇರುತ್ತಿತ್ತು. ಸ್ಪಂದನ ಜೊತೆ ಅವರ ಹಳ್ಳಿಯ ಸಂಭಾಷಣೆಯ ಮಾತುಗಳು ಪ್ರೇಕ್ಷಕರಿಗೆ ತಮ್ಮ ಬಾಲ್ಯ, ತಮ್ಮ ಊರು ನೆನಪಿಸುತ್ತಿದ್ದವು.

'ಇವ್ರು ನಮ್ಮನ್ನ ಅರ್ಥ ಮಾಡ್ಕೊಂಡಿದ್ದಾರೆ' ಎಂಬ ಭಾವನೆ ಪ್ರೇಕ್ಷಕರಲ್ಲಿ ಮೂಡಿಸಿದ್ದು ಅವರ ಹಾಸ್ಯ ಶಕ್ತಿ.

೪. ಗಿಲ್ಲಿ ಮತ್ತು ಕಾವ್ಯ – ಮನೆಯಲ್ಲಿ ಅರಳಿದ ಸ್ನೇಹ-ಪ್ರೇಮ ಕಥೆ

ಬಿಗ್ ಬಾಸ್ ಮನೆಯಲ್ಲಿ ಅರಳಿದ ಪ್ರೇಮ ಕಥೆಗಳು ಹಲವಾರು ಇವೆ. ಆದರೆ ಗಿಲ್ಲಿ ನಟ ಮತ್ತು ಕಾವ್ಯ ಅವರ ನಡುವಿನ ಸ್ನೇಹ-ಪ್ರೀತಿ ಕನ್ನಡ ಪ್ರೇಕ್ಷಕರ ಹೃದಯದಲ್ಲಿ ವಿಶೇಷ ಸ್ಥಾನ ಪಡೆದಿದೆ. ಇದು ಕ್ಯಾಮೆರಾಗಾಗಿ ನಡೆಸಿದ ಪ್ರೇಮ ಅಭಿನಯವಲ್ಲ – ಇದು ಒತ್ತಡದ ವಾತಾವರಣದಲ್ಲಿ ಸಹಜವಾಗಿ ಮೂಡಿದ ಬಾಂಧವ್ಯ.

ಸ್ನೇಹದಿಂದ ಪ್ರೇಮಕ್ಕೆ – ನಿಧಾನ ಮತ್ತು ಸ್ವಾಭಾವಿಕ

ಗಿಲ್ಲಿ ಮತ್ತು ಕಾವ್ಯ ಅವರ ಸಂಬಂಧ ಮೊದಲು ಸ್ನೇಹದ ಬೇರಿನಿಂದ ಆರಂಭವಾಯಿತು. ಬಿಗ್ ಬಾಸ್ ಮನೆಯ ಕಷ್ಟಕರ ದಿನಗಳಲ್ಲಿ ಒಬ್ಬರಿಗೊಬ್ಬರು ಆಸರೆಯಾದರು. ಗಿಲ್ಲಿ ನಟ ಕಾವ್ಯ ಅವರಿಗೆ ಮನಸ್ಸು ನೊಂದಾಗ ಸಂತೈಸಿದರು, ಹಾಸ್ಯದ ಮೂಲಕ ಮುಗುಳ್ನಗೆ ತರಿಸಿದರು. ಕಾವ್ಯ ಅವರು ಗಿಲ್ಲಿ ನಟ ಅವರ ಕಷ್ಟಗಳಲ್ಲಿ ಜೊತೆಯಾದರು. ಈ ಪರಸ್ಪರ ಆಸರೆಯ ಬಾಂಧವ್ಯ ಪ್ರೇಕ್ಷಕರ ಮನ ತಟ್ಟಿತು.

ಭಾವನೆಗಳ ಮಳೆ – ಪ್ರೇಕ್ಷಕರ ಕಣ್ಣೀರು ಮತ್ತು ಸಂತೋಷ

ಗಿಲ್ಲಿ-ಕಾವ್ಯ ಜೋಡಿ ಪ್ರೇಕ್ಷಕರಿಗೆ ಒಂದು ಸಿಹಿ ಅನುಭವ ನೀಡಿತು. ಇಬ್ಬರ ನಡುವಿನ ಚಿಕ್ಕ ಚಿಕ್ಕ ಸಂಭಾಷಣೆಗಳು, ಕಣ್ಣಿನ ನೋಟ, ಮೌನದ ಭಾಷೆ – ಇವೆಲ್ಲ ಪ್ರೇಕ್ಷಕರ ಹೃದಯ ಕರಗಿಸಿದವು. ನಾಮಿನೇಶನ್ ಸಮಯದಲ್ಲಿ ಒಬ್ಬರಿಗಾಗಿ ಒಬ್ಬರು ಆತಂಕಪಡುವ ದೃಶ್ಯಗಳು '#ಗಿಲ್ಲಿ-ಕಾವ್ಯ' ಹ್ಯಾಶ್‌ಟ್ಯಾಗ್ ಅನ್ನು ಸಾಮಾಜಿಕ ಮಾಧ್ಯಮದಲ್ಲಿ ಟ್ರೆಂಡ್ ಮಾಡಿದವು.



ಚಿತ್ರಕೃಪೆ : ಕಲರ್ಸ್ ಕನ್ನಡ

ಕಾವ್ಯ – ಗಿಲ್ಲಿಯ ಶಕ್ತಿ ಮತ್ತು ಸ್ಫೂರ್ತಿ

ಬಿಗ್ ಬಾಸ್ ಪ್ರಯಾಣದಲ್ಲಿ ಕಾವ್ಯ ಅವರ ಉಪಸ್ಥಿತಿ ಗಿಲ್ಲಿ ನಟ ಅವರಿಗೆ ಅಪಾರ ಶಕ್ತಿ ನೀಡಿತು. ಕಷ್ಟದ ಸಮಯದಲ್ಲಿ ಕಾವ್ಯ ಅವರ ನಂಬಿಕೆ ಮತ್ತು ಬೆಂಬಲ ಗಿಲ್ಲಿ ಅವರನ್ನು ಮುಂದೆ ಕರೆದೊಯ್ಯಿತು. ಇದು ಕೇವಲ ಸ್ನೇಹ-ಪ್ರೇಮ ಕಥೆ ಮಾತ್ರವಲ್ಲ – ಇದು ಪರಸ್ಪರ ಬೆಳೆಯುವ, ಪರಸ್ಪರ ಬಲಪಡಿಸಿಕೊಳ್ಳುವ ಸಂಬಂಧದ ಕಥೆ.

೫. ಕಿಚ್ಚ ಸುದೀಪ್ ಅವರ ಸಮಯೋಚಿತ ಸಲಹೆಗಳು

ಕಿಚ್ಚ ಸುದೀಪ್ ಅವರ ಸಮಯೋಚಿತ ಸಲಹೆಗಳು ಗಿಲ್ಲಿಯ ಗೆಲುವಿನಲ್ಲಿ ಬಹಳವಾಗಿ ಪಾತ್ರ ವಹಿಸಿತು. ಆಶು ಕವಿತೆಗಳ ರಾಜನಂತೆ ಎಲ್ಲರ ಬಗ್ಗೆ ಕ್ಷಣದಲ್ಲಿ ಮನಮುಟ್ಟುವ ರೀತಿಯಲ್ಲಿ ಹೇಳಿದ:

"ಡಮಾಲ್ ಡಿಮೀಲ್ ಡಕ್ಕ, ನಾನು cup ಗೆಲ್ಲೋದು ಪಕ್ಕ" ಎಂದು ಹೇಳುತ್ತಲೇ, ₹50 ಲಕ್ಷ ಹಾಗೂ ಟ್ರೋಫಿ ಗೆದ್ದಿದ್ದಲ್ಲದೆ, ಹೊಸ ಮಾರುತಿ ಸುಜುಕಿ ವಿಟಾರಾ SUV ಗೆದ್ದರು.

೬. ಗಿಲ್ಲಿ ಗೆದ್ದದ್ದು ಯಾಕೆ?

ಗಿಲ್ಲಿ ನಟ ಅವರ ವಿಜಯ ಆಕಸ್ಮಿಕವಲ್ಲ. ಇವರು ಸೂಕ್ಷ್ಮವಾಗಿ ಹಿಂದಿನ ಎಲ್ಲ ಬಿಗ್ ಬಾಸ್ ನೋಡಿ, ಪ್ರಥಮ್ ಹಾಗೂ ಹನುಮಂತು ಅವರ ವಿಶೇಷ ಆಟದ ತಂತ್ರಗಾರಿಕೆಯನ್ನು ತಿಳಿದು ಅಳವಡಿಸಿಕೊಂಡರು. ಜನರ ಮನಸ್ಸನ್ನು ತಿಳಿದು ಅವರ ಮನರಂಜನೆಯೇ ಮೂಲ ಉದ್ದೇಶ ಮಾಡಿಕೊಂಡು ಆಟ ಆಡಿದರು. ನೃತ್ಯ, ಕವನ, ತಂತ್ರಗಾರಿಕೆ, ಜಗಳ, ಪ್ರೀತಿ, ಸ್ನೇಹ – ಎಲ್ಲ ವಿಷಯಗಳಲ್ಲೂ ಹಾಸ್ಯ ಮತ್ತು ಜನರ ಪ್ರೀತಿ ಗೆದ್ದರು.

ಎಲ್ಲ ಸ್ಪರ್ಧಿಗಳ ಕುಟುಂಬ ಬಂದು ಗಿಲ್ಲಿ ಮೇಲಿನ ಪ್ರೀತಿ ತೋರಿದಾಗಲೇ ಅವರ ಗೆಲುವು ಖಚಿತವಾಗಿತ್ತು.

ಇದು ಮೂರು ಮಹಾನ್ ಗುಣಗಳ ಸಮ್ಮಿಳನದ ಫಲ:

- ಆಟದ ಬುದ್ಧಿ: ಪ್ರತಿ ಕ್ಷಣವನ್ನೂ ತಮ್ಮ ಲಾಭಕ್ಕೆ ಬಳಸಿಕೊಳ್ಳುವ ಜಾಣ್ಮೆ.
- ಪ್ರೇಕ್ಷಕ ಸಂಪರ್ಕ: ಕನ್ನಡ ಜನ ಮಾನಸದ ಧ್ವನಿಯಾಗಿ ಬದುಕಿದ ಸಾಮರ್ಥ್ಯ.
- ಮಾನವೀಯ ಸ್ಪರ್ಶ: ಪ್ರೀತಿ, ಸ್ನೇಹ, ಹಾಸ್ಯ ಮತ್ತು ಪ್ರಾಮಾಣಿಕತೆಯ ಅಪೂರ್ವ ಮಿಶ್ರಣ.

ಬಿಗ್ ಬಾಸ್ ಮನೆಯ ಒತ್ತಡ, ಕೌಶಲ್ಯದ ಪರೀಕ್ಷೆ, ಮನಸ್ಸಿನ ಸ್ಥಿರತೆ – ಇವೆಲ್ಲದರ ನಡುವೆ ಗಿಲ್ಲಿ ನಟ ಯಾವಾಗಲೂ ತಾವೇ ತಾವಾಗಿ ಉಳಿದರು. ಇದು ಅತ್ಯಂತ ಕಠಿಣ ಸಾಧನೆ – ಏಕೆಂದರೆ ಬಿಗ್ ಬಾಸ್ ಮನೆ ಮನುಷ್ಯರ ನಿಜ ಸ್ವಭಾವ ಹೊರ ತರುತ್ತದೆ. ಮತ್ತು ಗಿಲ್ಲಿ ನಟ ಅವರ ನಿಜ ಸ್ವಭಾವ ಪ್ರೇಕ್ಷಕರಿಗೆ ಮೆಚ್ಚಿಗೆ ಆಯಿತು.

ಈ season ಬಿಗ್ ಬಾಸ್ TV ಕಾರ್ಯಕ್ರಮಗಳಲ್ಲಿ ಹೊಸ ಅಧ್ಯಾಯ ಪ್ರಾರಂಭಿಸಿದೆ. ಮೊಟ್ಟ ಮೊದಲ ಬಾರಿಗೆ ಜನರ ಪ್ರೀತಿ, ಚಿತ್ರರಂಗದ ಉನ್ನತ ನಟನಿಗೆ ಸಿಗುವ ಪ್ರೀತಿಯನ್ನು ಗಿಲ್ಲಿ ಹಾಗೂ ಕಾವ್ಯ ಅವರಿಗೆ ನೀಡುತ್ತಿದೆ. ಇದು ಒಂದು ಉತ್ತಮ ಬೆಳವಣಿಗೆ – ಜನಸಾಗರ ಈ ಜೋಡಿಯನ್ನು ನೋಡಲು ಕಾತರಿಸುತ್ತಿದೆ. ಹಲವಾರು ಕನಸು ಕಾಣುತ್ತಿರುವ ಕಿರುತೆರೆಯ ಪ್ರತಿಭೆಗಳಿಗೆ ಇದು ಒಂದು ಉತ್ತಮ ವೇದಿಕೆ. ಜನ ಈಗ ಚಿತ್ರರಂಗದಂತೆ ಕಿರುತೆರೆಯ ನಟರನ್ನು ಗುರ್ತಿಸಿ ಪ್ರೋತ್ಸಾಹಿಸುತ್ತಿರುವುದು ಉತ್ತಮ ಬೆಳವಣಿಗೆ!

ತೀರ್ಮಾನ: ಕನ್ನಡ ಮನದ ಹೀರೋ

ಗಿಲ್ಲಿ ನಟ ಬಿಗ್ ಬಾಸ್ ಕನ್ನಡ ಗೆದ್ದದ್ದು ಕೇವಲ ಒಂದು ಟ್ರೋಫಿ ಅಲ್ಲ. ಅವರು ಕೋಟ್ಯಂತರ ಕನ್ನಡ ಪ್ರೇಕ್ಷಕರ ಹೃದಯ ಗೆದ್ದರು. ಅವರ ಆಟದ ಬುದ್ಧಿ, ಪ್ರೇಕ್ಷಕರೊಂದಿಗೆ ಸಂಪರ್ಕ ಸಾಧಿಸುವ ಶಕ್ತಿ, ಮನ ತಟ್ಟುವ ಹಾಸ್ಯ, ಸಮಯೋಚಿತ ಡೈಲಾಗ್‌ಗಳು ಮತ್ತು ಕಾವ್ಯ ಅವರ ಜೊತೆ ಅರಳಿದ ಅಚ್ಚ ಸ್ನೇಹ-ಪ್ರೇಮ – ಇವೆಲ್ಲ ಸೇರಿ ಗಿಲ್ಲಿ ನಟ ಅವರನ್ನು ಬಿಗ್ ಬಾಸ್ ಕನ್ನಡದ ಚಾಂಪಿಯನ್ ಮಾಡಿದೆ. ಬಿಗ್ ಬಾಸ್ ಮನೆ ಒಂದು ಕನ್ನಡಿ – ಅದು ಮನುಷ್ಯರ ನಿಜ ಸ್ವಭಾವ ತೋರಿಸುತ್ತದೆ. ಮತ್ತು ಆ ಕನ್ನಡಿಯಲ್ಲಿ ಗಿಲ್ಲಿ ನಟ ಅವರ ಪ್ರತಿಬಿಂಬ ಕಂಡ ಕನ್ನಡಿಗರು ಒಕ್ಕೂರಲಿನಿಂದ 'ನಮ್ಮ ಗೆಲ್ಲಬೇಕಾದ ಹೀರೋ' ಎಂದು ತೀರ್ಮಾನಿಸಿದರು.

"ಬಿಗ್ ಬಾಸ್ ಕನ್ನಡ ಗೆದ್ದ ಗಿಲ್ಲಿ ನಟ – ಕನ್ನಡ ಮನದ ನಿಜ ಚಾಂಪಿಯನ್!"

ಕಥಾ ಸಂಕಲನ





ಎಂ.ವಿ. ಶಶಿಭೂಷಣ ರಾಜು
ಅಮೇರಿಕ

ವೃತ್ತ

ಅವಳ ಕಣ್ಣಿಂದ ಕಣ್ಣೀರು ಪಟ ಪಟ ಉದುರಿದವು. ತನಗೆ ಮಕ್ಕಳಾಗಲಿಲ್ಲ ಎಂದು ಎರಡನೇ ಮದುವೆ ಮಾಡಿಕೊಂಡು ಹೊಸಿಲ ಬಳಿ ನಿಂತಿದ್ದ ತನ್ನ ಗಂಡ ಮತ್ತು ಗಂಡನ ಹೊಸ ಹೆಂಡತಿಗೆ ಆರತಿ ಎತ್ತಿ ಒಳ ಕರೆದುಕೊಳ್ಳಬೇಕಾಗಿತ್ತು. ಸೆರಗಿನಿಂದ ಕಣ್ಣೀರನ್ನು ಒರೆಸಿಕೊಂಡು, ಆರತಿ ಎತ್ತಿ , ಕೆಂಪುನೀರನ್ನು ಹೊರಗೆ ಎಸೆಯಲು ಬಂದಳು. ಅದನ್ನು ಯಾರೂ ತುಳಿಯದ ಸ್ಥಳದಲ್ಲಿ ಹಾಕುವುದು ವಾಡಿಕೆ. ಎಲ್ಲರೂ ತುಳಿಯುವ ಕಡೆ ಹಾಕಲೇ?, ಗಂಡನನ್ನು ಕಸಿದುಕೊಂಡ ಅವಳು ಹಾಳಾಗಲಿ ಎಂದುಕೊಂಡಳು, ಆದರೆ ಅವಳೂ ಹೆಣ್ಣಲ್ಲವೇ, ಇದರಲ್ಲಿ ಅವಳ ತಪ್ಪೇನಿದೆ, ಪಾಪ, ಯಾವ ಕಷ್ಟದಿಂದ ಎರಡನೇ ಮದುವೆಗೆ ಒಪ್ಪಿಕೊಂಡಳೋ ಏನೋ ಎಂದುಕೊಂಡು ಯಾರೂ ತುಳಿಯದ ಕಡೆ ಕೆಂಪು ನೀರನ್ನು ಚೆಲ್ಲಿ ಒಳ ಬಂದಳು.

ರತ್ನಕ್ಕ ಖಾಲಿ ತಟ್ಟೆ ಹಿಡಿದು ಒಳಬಂದಾಗ, ನೆಂಟರೆಲ್ಲಾ ಮನೆಯಲ್ಲಿ ಹಾಸ್ಯಮಾಡುತ್ತಾ, ಜೋರಾಗಿ ಕಿರುಚುತ್ತಾ ಮಾತನಾಡುತ್ತಿದ್ದರು. ಒಂದು ಹೆಣ್ಣಿಗಾದ ಅನ್ಯಾಯ ಯಾರ ಮನಸಿಗೇನೂ ಘಾಸಿಮಾಡಿರಲಿಲ್ಲ. ರತ್ನಕ್ಕನನ್ನು ಯಾರೂ ಗಮನಿಸುವ ಗೋಜಿಗೇ ಹೋಗಲಿಲ್ಲ. ರತ್ನಕ್ಕನ ಮನೆಯವರು ಮುನಿಸಿಕೊಂಡು ಮದುವೆಗೆ ಬಂದಿರಲಿಲ್ಲ. "ಇದು ನಿನ್ನ ಮನೆ, ಆ ಹೊಸಹೆಣ್ಣಿಗೆ ಯಾವುದೇ ಅಧಿಕಾರ ಬಿಟ್ಟುಕೊಡಬೇಡ" ಎಂತೆಲ್ಲಾ ಅಪ್ಪ ಅಮ್ಮ ಮದುವೆಗೆ ಕರೆಯಲು ಹೋದಾಗ ಹೇಳಿದ್ದರು. "ಯಾವ ಮುಖ ಇಟ್ಟುಕೊಂಡು ಮದುವೆಗೆ ಕರೆಯಲು ಬಂದೆ" ಎಂದು ಅಣ್ಣ ಮೂದಲಿಸಿದ್ದರು. "ಅವನ ಮೇಲೆ ಕೇಸ್ ಹಾಕೋಣ, ಕೋರ್ಟಿಗೆ ಹೋಗೋಣ" ಎಂದೆಲ್ಲ ಹಾರಾಡಿದ್ದರು. "ನಿನಗೂ ಮಕ್ಕಳಾಗದಿದ್ದರೆ ನಿನ್ನ ಯೋಚನೆ ಹೇಗಿರುತ್ತಿತ್ತು" ಎಂದುಕೊಂಡಳು ಮನಸಿನಲಿ. ಆದರೆ "ಹಾಗೇನೂ ಬೇಡ, ಅವರು ಒಳ್ಳೆಯವರು, ನನಗೇನೂ ಅನ್ಯಾಯ ಮಾಡುವುದಿಲ್ಲ" ಎಂದಿದ್ದಳು. "ನಿನ್ನನ್ನು ಇನ್ನು ಹೆಚ್ಚು ಓದಿಸಬೇಕಾಗಿತ್ತು" ಎಂದು ಗೊಣಗಿದ್ದರು ಅಪ್ಪ.

ಹೊಸ ಹೆಣ್ಣು ರಮಣಿಯನ್ನು ಮೊದಲ ರಾತ್ರಿಗಾಗಿ ಸಿಂಗರಿಸಲು ಒಳ ಕರೆದೊಯ್ದಿದ್ದರು. ಗಂಡ ಬಂದವರ ಜೊತೆ ಮಾತನಾಡುತ್ತಾ ಕುಳಿತಿದ್ದ. ರತ್ನಕ್ಕನಿಗೆ ಚಕ್ಕನೆ, ಅವರ ಈ ರಾತ್ರಿ ತಮ್ಮ ಕೋಣೆಯಲ್ಲಿ ನಡೆಯಬಹುದೇ ಎಂದು ಆತಂಕ, ದುಃಖ ಎರಡೂ ಆಗಿ, ಮೆಟ್ಟಲನ್ನು ಹತ್ತುತ್ತಾ ತನ್ನ ರೂಮಿಗೆ ಓಡಿದಳು. ರೂಮಿಗೆ ಹೋಗಿ ಬಾಗಿಲಿಕ್ಕಿ ಚಿಲುಕ ಹಾಕಿ ಕೂತಳು. ಗಂಟೆ ಕಳೆಯಿತು,ಯಾರೂ ಬಾಗಿಲನ್ನು ಬಡಿಯಲಿಲ್ಲ, ಊಟಕ್ಕೂ ಕರೆಯಲಿಲ್ಲ. ಅವಳ ಇರುವಿಕೆಯನ್ನು ಎಲ್ಲರೂ ಮರೆತಿದ್ದರು. ಊಟವನ್ನು ಹೊರಗಡೆಯಿಂದ ತರಿಸಿದ್ದರಿಂದ, ಅವಳ ಸಹಾಯ ಯಾರಿಗೂ ಬೇಕಾಗೂ ಇರಲಿಲ್ಲ. ಬಹುತೇಕ ರಾತ್ರಿ ಅವಳಿಗೆ ನಿದ್ರೆ ಹತ್ತಲಿಲ್ಲ.

ರಂಗನಾಗಿದ್ದವ ಮದುವೆ ವಯಸ್ಸಿಗೆ ಬಂದು ರಂಗಣ್ಣನಾದ ಮೇಲೆ, ಎರಡು ಮೂರು ಹುಡುಗಿಯರನ್ನು ನೋಡಿ ಎಲ್ಲೂ ಮದುವೆಗೆ ಸರಿಹೊಂದಿರಲಿಲ್ಲ .ನೂರು ಎಕರೆ ಜಮೀನಿನ ಒಡೆಯನಾಗಿದ್ದ ರಂಗಣ್ಣನಿಗೆ ಒಳ್ಳೆಯ ಜೋಡಿಯನ್ನು ಹುಡುಕಬೇಕೆಂದು ಮದುವೆ ಬ್ರೋಕರ್ ಮಂಜಣ್ಣನಿಗೆ ರಂಗಣ್ಣನ ತಾಯಿ ಯಶೋದಮ್ಮ ತಾಕೀತು ಮಾಡಿದ್ದರು. ಹುಡುಗಿಗೆ ಮಕ್ಕಳ ಭಾಗ್ಯವಿದೆಯೇ ಎಂದು ಮೊದಲೇ ಜಾತಕ ನೋಡಿ ಹುಡುಗಿಯನ್ನು ತೋರಿಸಬೇಕು ಎಂದೆಲ್ಲಾ ಹೇಳಿದ್ದರು. ಒಬ್ಬನೇ ಮಗನಾಗಿದ್ದ ರಂಗಣ್ಣನಿಂದ ವಂಶ ಬೆಳೆಯಬೇಕು, ಇಷ್ಟು ಆಸ್ತಿ ನೋಡಿಕೊಳ್ಳಲು ಸಂತಾನ ಬೇಕು ಎಂದು ನಿಯಮ ಹಾಕಿದ್ದರು. ಎಲ್ಲಕ್ಕೂ ತಲೆ ಆಡಿಸಿದ್ದ ಮಂಜಣ್ಣ, ಮಧುಗಿರಿಯ, ರಾಮನಹಳ್ಳಿಯ ಮಾದಣ್ಣನ ಮಗಳು ರತ್ನಕ್ಕನ ಚಿತ್ರ ಹಿಡಿದು ಬಂದಿದ್ದ. ಮಾದಣ್ಣ ಹಳ್ಳಿಯಲ್ಲಿ ದೊಡ್ಡ ಕುಳ, ಅಪಾರ ಸ್ಥಿರಾಸ್ತಿ ಪೂರ್ವಿಕರ ಕಾಲದಿಂದಲೂ ಬಂದಿತ್ತು. ಒಳ್ಳೆಯ ಕಡೆ ಸಂಬಂಧ ತೋರಿಸಿದರೆ ಲಕ್ಷ ರೂಪಾಯಿ ಕೊಡುವುದಾಗಿ ಮಂಜಣ್ಣನಿಗೆ ಆಸೆ ತೋರಿಸಿದ್ದರು. ರತ್ನಕ್ಕ ಚನ್ನಾಗಿ ತಿಂದು ಉಂಡು ಮೈತುಂಬಿಕೊಂಡು ಮುದ್ದಾಗಿದ್ದಳು. ನೋಡಿದ ಹುಡುಗ ತಿರಸ್ಕರಿಸುವ ಸಾಧ್ಯತೆ ಇರಲಿಲ್ಲ. ಆದರೆ ರತ್ನಕ್ಕ ಬರೀ ಏಳನೇ ತರಗತಿಯವರಿಗೆ ಓದಿದ್ದರಿಂದ ಸ್ವಲ್ಪ ಆತಂಕ ಇತ್ತು.

ಹುಡುಗಿಯ ಅಂದ, ಅವಳ ಅಪ್ಪನ ಆಸ್ತಿ ಕಂಡ ರಂಗಣ್ಣ ಹುಡುಗಿಯನ್ನು ಒಪ್ಪಿಕೊಂಡ. ಮಂಜಣ್ಣ ಹುಡುಗಿಯ ಜಾತಕದ ಗುಣಗಾನ ಮಾಡಿ, ಹುಡುಗಿಯ ಜಾತಕದಲ್ಲಿ ಎಂಟು ಮಕ್ಕಳ ಭಾಗ್ಯ ಇದೆ ಎಂದು ಘೋಷಿಸಿ ಎಲ್ಲರನ್ನು ಸಂತೋಷದಲ್ಲಿ ಮುಳುಗಿಸಿಬಿಟ್ಟ. ರತ್ನಕ್ಕನ ಅಪ್ಪ ಅದ್ದೂರಿಯಿಂದ ಮಗಳ ಮದುವೆ ಮಾಡಿಕೊಟ್ಟ.

ಮದುವೆಯಾಗಿ ಒಂದು ವರುಷವಾಯಿತು, ಎರಡು ವರುಷವಾಯಿತು, ಮಕ್ಕಳ ಭಾಗ್ಯ ಕಾಣಲಿಲ್ಲ. ರಂಗಣ್ಣನ ಅಮ್ಮನ ಆಣತಿಯಂತೆ ಎಲ್ಲಾ ಆಸ್ಪತ್ರೆ, ಗುಡಿ, ಗೋಪುರ, ಸ್ವಾಮೀಜಿಗಳನ್ನು ಕಂಡು ಬಂದಾಯಿತು. ಯಾವುದೇ ಪ್ರಯೋಜನವಾಗಲಿಲ್ಲ.
ರತ್ನಕ್ಕನಿಗೆ ದಿನೇ ದಿನೇ ಅತ್ತೆಯ ಮಾತಿನ ತಿವಿತ, ಸಿಡಿಮಿಡಿ ಶುರುವಾಯಿತು. ರತ್ನಕ್ಕ ಮೌನಕ್ಕೆ ಹೆಚ್ಚು ಹೆಚ್ಚು ಶರಣಾದಳು. ಅತ್ತೆ ಮಾವ, ಗಂಡನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರೂ ಮಕ್ಕಳಾಗಲಿಲ್ಲ ಎನ್ನುವ ಒಂದೇ ಕಾರಣದಿಂದ ಕಾಟ ಕೊಡುತ್ತಿದ್ದುದ್ದು ರತ್ನಕ್ಕನಿಗೆ ಅಚ್ಚರಿಗೆ ಕಾರಣವಿತ್ತು. ಮಕ್ಕಳಾಗದಿರುವುದಕ್ಕೆ ನನ್ನದೇನು ತಪ್ಪಿದೆ ಎಂದುಕೊಂಡಳು. ದೇವರೇ ನೀನೇ ಕಾಪಾಡು ಎಂದುಕೊಂಡಳು. ರಂಗಣ್ಣ ಅಷ್ಟೇನೂ ಕಾಟ ಕೊಡದಿದ್ದರೂ ಅಮ್ಮ, ಅಪ್ಪನ ಮುಂದೆ ಹೆಂಡತಿಗೆ ಮುನಿಸು ತೋರುತ್ತಿದ್ದ. ಹೆಂಡತಿಯ ಕಡೆಯಾಗಿಬಿಟ್ಟ ಎಂದು ಅಮ್ಮ ಎಂದುಕೊಳ್ಳಬಾರದು ಎಂದು ಅಮ್ಮನ ತಾಳಕ್ಕೆ ಕುಣಿಯುತ್ತಿದ್ದ.
ಇನ್ನೂ ಎರಡೂ ವರುಷ ಮಕ್ಕಳಾಗದಿದ್ದಾಗ,ರಂಗಣ್ಣನನ ಅಮ್ಮ ಮಗನಿಗೆ ಎರಡನೇ ಮದುವೆ ಮಾಡಬೇಕೆಂದು ವರಾತ ಶುರುಮಾಡಿದರು. ರತ್ನಕ್ಕನ ಮೌನ ಇನ್ನೂ ಹೆಚ್ಚಾಯಿತು, ಮೌನವೇ ಪ್ರತಿಭಟನೆಯ ಬಗೆ ಎಂದುಕೊಂಡಳು. ರಂಗಣ್ಣನ ಅಮ್ಮನ ಅಬ್ಬರ, ಹೆಂಡತಿಯ ಮೌನದ ನಡುವೆ ನಲುಗತೊಡಗಿದ. ಕಡೆಗೆ ಅಮ್ಮನ ಅಬ್ಬರದಲ್ಲಿ ಕೊಚ್ಚಿಹೋದ. ರತ್ನಕ್ಕ ತನ್ನ ತಂದೆ,ತಾಯಿ, ಅಣ್ಣನಿಗೆ ಆಣೆ ಹಾಕಿ ಪೊಲೀಸ್ ಮೆಟ್ಟಲು ಹತ್ತದಂತೆ ನೋಡಿಕೊಂಡಳು. ರಂಗಣ್ಣ ಹೆಂಡತಿಯ ಒಳ್ಳೆಯತನಕ್ಕೆ ಮಾರುಹೋದರೂ ಅಮ್ಮನ ಕಣ್ಣೀರಿಗೆ ಶರಣಾದ.
ಬೆಳಿಗ್ಗೆ ಮನೆಗೆ ಬಂದ ನೆಂಟರೆಲ್ಲಾ ಹೊರಟುಹೋದರು. ಮನೆಯಲ್ಲಿ ಮೌನ ನೆಲಸಿದಮೇಲೆ, ರತ್ನಕ್ಕ ತನ್ನ ಕೋಣೆಯಿಂದ ಹೊರಬಂದು, ಕೆಳಗಿಳಿದು ಅಡುಗೆ ಮನೆಗೆ ಬಂದಳು. ದಿನಾ ತಾನೇ ಅಡುಗೆಮಾಡಿ, ಎಲ್ಲರ ನಾಲಿಗೆ ರತ್ನಕ್ಕನ ರುಚಿಗೆ ಒಗ್ಗಿಹೋಗಿತ್ತು. ಆದರೆ ಯಾರೂ ರತ್ನಕ್ಕನ ಕೋಣೆಯ ಬಾಗಿಲು ಬಡಿದು ಹೊರ ಕರೆಯುವ ಧೈರ್ಯ ತೋರಲಿಲ್ಲ.
ರತ್ನಕ್ಕ ಎಂದಿನಂತೆ ಅಡುಗೆಗೆ ಸಿದ್ಧಮಾಡುತ್ತಿದ್ದಾಗ, ರಮಣಿ ಅಡುಗೆಮನೆಗೆ ಬಂದು ನಿಂತಳು. ರತ್ನಕ್ಕ ಅವಳನ್ನು ಸರಿಯಾಗಿ ನೋಡೇ ಇರಲಿಲ್ಲ. ಈಗ ನೋಡಿದಳು, ಪರವಾಗಿಲ್ಲ ಚನ್ನಾಗಿಯೇ ಇದ್ದಾಳೆ ಎಂದುಕೊಂಡಳು. ರಮಣಿ " ಅಕ್ಕ ನಾನು ಅಡುಗೆಗೆ ಸಹಾಯ ಮಾಡಲೇ "ಎಂದಳು. ರತ್ನಕ್ಕ ಸರಿ ಎಂಬಂತೆ ಈರುಳ್ಳಿ,ಮೆಣಸಿನಕಾಯಿ ಕತ್ತರಿಸಲು ಅವಳಿಗೆ ಕೊಟ್ಟಳು. ಏನು ಮಾಡುತ್ತಾ ಇದೀರಿ ಅಕ್ಕ ಎಂದಳು. "ಲೇಟಾಗಿದೆ ಉಪ್ಪಿಟ್ಟು ಮಾಡೋಣ ಎಂದು" ಎಂದು ರವೆ ಉರಿಯತೊಡಗಿದಳು.
ಹೀಗೆ ದಿನಗಳು ಕಳೆದಂತೆ ರತ್ನಕ್ಕ, ರಮಣಿ ಮನೆಗೆಲಸಗಳನ್ನು ಇಬ್ಬರೂ ಸೇರಿ ಮಾಡತೊಡಗಿದರು. ರತ್ನಕ್ಕ ಅಷ್ಟೇನೂ ಮಾತನಾಡುತ್ತಿರಲಿಲ್ಲ, ರಮಣಿ ಮಾತು ನಿಲ್ಲಿಸುತ್ತಿರಲಿಲ್ಲ. ರಂಗಣ್ಣ ಕೂಡ ರತ್ನಕ್ಕನಿಗೆ ಯಾವುದೇ ಸುಖ ಕಡಿಮೆ ಮಾಡಲಿಲ್ಲ.
ರಂಗಣ್ಣನ ಹೊಸ ಹೆಂಡತಿ ಮನೆಗೆ ಬಂದು ಒಂದು ವರುಷವಾದರೂ ಮುಟ್ಟು ನಿಲ್ಲುವ ಸೂಚನೆ ಕಾಣಲಿಲ್ಲ. "ಇದೂ ದೊಡ್ಡವಳ ಹಾದಿ ಹಿಡಿದಳೇ" ಎಂದು ರಂಗಣ್ಣನ ಅಮ್ಮ ಗೊಣಗಿಕೊಂಡರು. "ಇವನ್ನಲ್ಲೇ ಏನಾದರು ಐಬು ಇರಬಹದೇ" ಎಂದು ರಂಗಣ್ಣನ ಅಪ್ಪ ಅನುಮಾನ ಪಟ್ಟರು. "ನಮ್ಮ ವಂಶದಲ್ಲಿ ಹಿಂದೆ ಈಗಾಲಿಲ್ಲ, ಮಕ್ಕಳು ಆಗುತ್ತವೆ" ಎಂದು ಸಮಾಧಾನಗೊಂಡರು.
ಹೀಗೆ ಹಲ ತಿಂಗಳು ಕಳೆದಮೇಲೆ, ಒಂದು ದಿನ ಎಲ್ಲರು ಊಟ ಮಾಡುತ್ತಿದ್ದಾಗ ರತ್ನಕ್ಕ ಗಂಡನಿಗೆ ಅನ್ನ ಬಡಿಸುತ್ತಿದ್ದವಳು ಕುಸಿತು ಕೂತಳು. ಎಲ್ಲರೂ ಏನಾಯಿತು ಎಂದು ಎದ್ದು ಸುತ್ತ ಸೇರಿದರು. ರತ್ನಕ್ಕ ತಲೆ ತಿರುಗುದಂತಾಗಿ ಡೈನಿಂಗ್ ಟೇಬಲ್ಲಿನ ಕೊನೆಯನ್ನು ಹಿಡಿದು ಕುಳಿತಳು. ರಂಗಣ್ಣ ಊರಿನ ನರ್ಸ್ ರಾಜಮ್ಮನನ್ನು ಫೋನ್ ಮಾಡಿ ಬೇಗ ಬರಬೇಕೆಂದು ತಾಕೀತು ಮಾಡಿದ. ರಾಜಮ್ಮ ರತ್ನಕ್ಕನ ಕೈ, ಕಣ್ಣು. ನಾಲಿಗೆ ಎಲ್ಲ ಪರೀಕ್ಷಿಸಿ,ರತ್ನಕ್ಕ ಗರ್ಭಿಣಿ ಎಂದು ಪ್ರಕಟಿಸದಳು. ಎಲ್ಲರು ಮುಖದಲ್ಲಿ ಖುಷಿ ಅರಳಿತು. ರಂಗಣ್ಣನ ಅಮ್ಮ ಕುಣಿದಾಡಿಬಿಟ್ಟರು. ರತ್ನಕ್ಕನ ಬಳಿಸಾರಿ ಮುದ್ದಾಡಿಬಿಟ್ಟರು. "ನನ್ನ ಕ್ಷಮಿಸೆ ತಾಯಿ"ಎಂದರು.
ನವಮಾಸಗಳು ತುಂಬಿ ರತ್ನಕ್ಕ ಗಂಡು ಮಗು ಹೆತ್ತಳು. ಎಲ್ಲರ ಸಂತೋಷಕ್ಕೆ ಪಾರವೇ ಇರಲಿಲ್ಲ. ರಂಗಣ್ಣ ಅಪ್ಪ ಅಮ್ಮನನ್ನು ರತ್ನಕ್ಕನ ಮನೆಗೆ ಹೋಗಿ, ಅವರ ಕ್ಷಮಾಪಣೆ ಕೇಳಿ, ಮನವೊಲಿಸಿ ಮನೆಗೆ ಬಂದು ತಾಯಿ, ಮಗುವನ್ನು ನೋಡಿ ಹೋಗಿ ಎಂದನು. ಮಗಳಿಗೆ ಗಂಡು ಮಗುವಾಯಿತೆಂದು ಎಲ್ಲ ಮರೆತು ಮಗಳ ಮನೆಗೆ ಒಪ್ಪಿದರು. ಒಂದು ದಿನ ಬಂದು ತಾಯಿ ಮಗುವನ್ನು ನೋಡಿಕೊಂಡು ಹೋದರು. ಮುಂದೆ ಮೂರು ವರುಷಗಳಲ್ಲಿ ರತ್ನಕ್ಕನಿಗೆ ಹೆಣ್ಣು ಮಗುವಾಯಿತು. ಮನೆಯಲ್ಲಿ ಇನ್ನೂ ಸಂಭ್ರಮ ಮೂಡಿತು.
ಈ ಮದ್ಯೆ ರಮಣಿ ಇನ್ನು ಈ ಮನೆಯಲ್ಲಿ ತನ್ನ ಮೌಲ್ಯ ಕಡಿಮೆಯಾಯಿತೆಂದು ಭಯಗೊಂಡಿದ್ದಲ್ಲದೆ, ಬೇಸರಗೊಂಡಳು. ಗಂಡ ಬೇರೆ ರತ್ನಕ್ಕನ ರೂಮಿನಲ್ಲಿ ಮಕ್ಕಳ ಜೊತೆ ಹೆಚ್ಚು ಸಮಯ ಕಳೆಯಲಾರಂಬಿಸಿದ. ತಾನು ದಿನೇ ದಿನೇ ಅಡುಗೆಮನೆಗೆ ಸೀಮಿತವಾಗುತ್ತಿರುವುದನ್ನು ರಮಣಿ ಗಮನಿಸಿಕೊಂಡಳು. ಇನ್ನು ಈ ಮನೆಯಲ್ಲಿ ತನಗೆ ಸಹಾಯಕಿ ಸ್ಥಾನವೇ ಸಿಗುವುದು ಎಂದುಕೊಂಡಳು. ಯಾವೆಲ್ಲ ಆಸೆ ಇಟ್ಟುಕೊಂಡು ಬಂದಿದ್ದಳೋ ಅದೆಲ್ಲಾ ಮಾಯವಾಗತೊಡಗಿತ್ತು. ಮಕ್ಕಳಾದರೆ ದೊಡ್ಡಮನೆಗೆ ನೀನೆ ರಾಣಿ ಎಂದು ಅಪ್ಪ ಅಮ್ಮ ಅವಳ ಮನವೊಲಿಸಿದ್ದರು. ರತ್ನಕ್ಕ ಮಾತನಾಡತೊಡಗಿದರೆ,ರಮಣಿ ಮೌನಿಯಾಗತೊಡಗಿದಳು. ರಂಗಣ್ಣ ಆಗೀಗ ಅವಳ ರೂಮಿಗೆ ಇಣುಕುತ್ತಿದ್ದ.

ಮಕ್ಕಳು ಬೆಳೆಯತೊಡಗಿದರು. ಈ ದೊಡ್ಡ ಆಸ್ತಿಗೆಲ್ಲಾ ನಿನ್ನ ಮಗನೇ ಒಡೆಯ ಎಂದು ಎಲ್ಲರೂ ಹೇಳುತ್ತಿದ್ದರೆ ರತ್ನಕ್ಕನ ಎದೆ ತುಂಬಿಬರುತ್ತಿತ್ತು. ಮಗನ ಅಧಿಕಾರಸ್ಥ ಜೀವನವನ್ನು ಊಹಿಸಿಕೊಂಡು ಮಗನನ್ನು ಅಪರೂಪದ ರತ್ನದಂತೆ ಮಗನನ್ನು ನೋಡಿಕೊಳ್ಳತೊಡಗಿದಳು. ಮಗನೇ ರಾಜನಾಗಬೇಕು ಬೇರೆಯವರಿಗೆ ಅಣುವಿನಷ್ಟು ಜಾಗವೂ ಸಿಗಬಾರದು ಎಂದುಕೊಳ್ಳುತ್ತಿದ್ದ ದೃತರಾಷ್ಟ್ರ ನಂತೆ ಅವಳ ಮನಸು ಯೋಚನೆ ಮಾಡತೊಡಗಿತು. ಮಗನ ಬಿಟ್ಟು ಬೇರೆಯವರು ಮನೆಯ ಒಡೆಯನಾಗುವುದನ್ನು ಊಹಿಸಿಕೊಳ್ಳಲಾದಳು. ಎಲ್ಲ ಆಸ್ತಿಯೂ ಮಗನಿಗೇ ಸಿಗಬೇಕು, ಮಗಳನ್ನು ದೂಡ್ಡ ಮನೆಗೆ ಕೊಡಬೇಕು ಎಂದುಕೊಳ್ಳತೊಡಗಿದಳು.

ಬೆಳೆಯುತ್ತಿದ್ದ ಮಗನ ಮೇಲೆ ಎಲ್ಲರೂ ಮಮಕಾರವನ್ನು ಸುರಿಸುತ್ತಿದ್ದರು. ರಾಜಕುಮಾರಂತೆ ಪೋಷಿಸುತ್ತಿದ್ದರು. ಮಗನಿಗೆ ಐದು ವರುಷ, ಮಗಳಿಗೆ ಎರಡು ವರುಷಗಳಾಯಿತು.

ಹೀಗಿರಲು, ರಂಗಣ್ಣನನ ಎರಡನೇ ಹೆಂಡತಿ ರಮಣಿಗೆ ಮುಟ್ಟು ನಿಂತಿತು. ರಮಣಿ ಕುಣಿದಾಡಿಬಿಟ್ಟಳು. ವಿಷಯ ತಿಳಿದು ಮನೆಯವರೆಲ್ಲರಿಗೂ ಹರುಷವಾಯಿತು. ರತ್ನಕ್ಕ ಮಾತ್ರ ಗಾಭರಿಗೊಂಡಳು, ಮುಖ ಕಪ್ಪಿಟ್ಟಿತು. ಇನ್ನು ರಮಣಿಗೂ ಮನೆಯಲ್ಲಿ ತನ್ನಷ್ಟೇ ಪ್ರಾಮುಖ್ಯತೆ ಸಿಗುತ್ತದೆ ಎಂದುಕೊಂಡು ಬೇಸರವಾಯಿತು. ಒಂದು ವೇಳೆ ಗಂಡುಮಗುವಾದರೆ ಆಸ್ತಿ ಎರಡು ಪಾಲಾಗುತ್ತದೆ ಎಂದು ವ್ಯಥೆ ಆಯಿತು. ದೇವರೇ ರಮಣಿಗೆ ಹೆಣ್ಣು ಮಗುವಾಗಲಿ ಎಂದುಕೊಂಡಳು.

ರಮಣಿಗೆ ಆರುತಿಂಗಳು ತುಂಬುತ್ತಿರುವಾಗ ರತ್ನಕ್ಕನ ಚಿಕ್ಕಮ್ಮ ಪೂರ್ಣಕ್ಕ ಮನೆಗೆ ಬಂದಿಳಿದರು. ಪೂರ್ಣಕ್ಕ ಮಿಡ್ ವೈಫ್ ಕೆಲಸಮಾಡಿ ನಿವೃತ್ತಿ ಹೊಂದಿ ಈ ಊರು ಆ ಊರು ತಿರುಗುತ್ತಾ ಕಾಲ ಕಳೆಯುತ್ತಿದ್ದಳು, ಗಂಡ ಯಾವಾಗಲೋ ತೀರಿಹೋಗಿದ್ದು ಮಕ್ಕಳೂ ಇರಲಿಲ್ಲ. ಸ್ವಲ್ಪ ದಿನ ಅಕ್ಕನ ಮನೆ, ಇನ್ನೊಬ್ಬ ತಂಗಿಯ ಮನೆ , ಸ್ವಲ್ಪ ಅಕ್ಕ ತಂಗಿಯರ ಮಕ್ಕಳ ಮನೆ ಹೀಗೆ ತಂಗುತ್ತಿದ್ದಳು. ತಂಗಿದ ಮನೆಯಲ್ಲಿ ಯಾರಿಗಾದರೂ ಸಣ್ಣ ಪುಟ್ಟ ಕಾಯಿಲೆಗಳಾದರೆ ಸೂಕ್ತ ಔಷಧಿ ಕೊಟ್ಟು ಕಾಯಿಲೆ ಗುಣ ಪಡಿಸುತ್ತಿದ್ದಳು. ಆದ್ದರಿಂದ ಪೂರ್ಣಕ್ಕ ಮನೆಗೆ ಬಂದರೆ ಯಾರೂ ಹೊರೆ ಎಂದು ಅಂದುಕೊಳ್ಳುತ್ತಿರಲಿಲ್ಲ. ಪೂರ್ಣಕ್ಕನ ಇನ್ನೊಂದು ವಿಶೇಷ ಕೈಚಳಕವೆಂದರೆ, ಯಾರಿಗಾದರೂ ಹೊಟ್ಟೆ ತೆಗೆಯಬೇಕೆಂದರೆ ಔಷಧಿ ಕೊಡುವುದು. ಮಗು ಬೇಡವಾದರೆ, ಗರ್ಭಿಣಿಯರು ಪೂರ್ಣಕ್ಕನನ್ನು ಸಂಪರ್ಕಿಸುತ್ತಿದ್ದರು.

ಪೂರ್ಣಕ್ಕ ಮನೆಗೆ ಬಂದಾಗ ಹೆಚ್ಚು ಸಂತೋಷವಾಗಿದ್ದು ರಮಣಿಗೆ. ಇಂತಹ ಸಮಯದಲ್ಲಿ ನರ್ಸ್ ಒಬ್ಬರು ಮನೆಯಲ್ಲಿ ಇದ್ದರೆ ಒಂದು ಧೈರ್ಯ ಎಂದುಕೊಂಡಳು. ತನಗಿಂತ ಮಗುವು ಆರೋಗ್ಯವಾಗಿದ್ದರೆ ಸಾಕು ಎಂದುಕೊಂಡಳು.

ಪೂರ್ಣಕ್ಕ ರತ್ನಕ್ಕನ ಮಕ್ಕಳನ್ನು ಆಡಿಸಿಕೊಂಡು, ಅವರಿಗೆ ಸ್ನಾನ ಮಾಡಿಸುವುದು, ಊಟ ಮಾಡಿಸುವುದು ಹೀಗೆ ರತ್ನಕ್ಕನಿಗೆ ಪೂರ್ತಿ ವಿರಾಮ ನೀಡಿದಳು. ಅಡುಗೆಯಲ್ಲೂ ಸಹಾಯ ಮಾಡುತ್ತಿದ್ದಳು. ಇದರ ಜೊತೆ ರಮಣಿಗೆ ಅಗತ್ಯವಾದ ಅಡುಗೆ ಮಾಡಿ, ವಿಟಮಿನ್ ಮಾತ್ರಗಳನ್ನು ತರಿಸಿಕೊಟ್ಟು ಮಗು ಆರೋಗ್ಯವಾಗಿ ಹುಟ್ಟಲು ಎಲ್ಲ ಸಹಾಯ ಮಾಡತೊಡಗಿದಳು. ಮನೆಯವರಿಗೆ ಅವಳ ಕಾಳಜಿ ಕಂಡು ಖುಷಿಯಾಯಿತು.

ಒಂದು ಸಂಜೆ ರತ್ನಕ್ಕನ ಜೊತೆ ಅವಳ ಕೋಣೆಯಲ್ಲಿ ಮಾತನಾಡುತ್ತಿದ್ದಾಗ ರಮಣಿಯ ಕುರಿತು ಮಾತುಬಂತು. "ಮಕ್ಕಳೇ ಇಲ್ಲದ ಮನೆಯಲ್ಲಿ ಮಕ್ಕಳ ಗುಂಪೇ ಇರುತ್ತದೆ ಇನ್ನು ಮೇಲೆ" ಎಂದಳು ಪೂರ್ಣಕ್ಕ. "ಅದೇ ಚಿಂತೆಯಾಗಿದೆ ನನಗೆ" ಎಂದಳು ರತ್ನಕ್ಕ ಮುಖ ಕಳೆಗುಂದಿಸಿಕೊಂಡು. "ಅದ್ಯಾಕೇ ಏನಾಯಿತು". " ಏನಿಲ್ಲ ಚಿಕ್ಕಮ್ಮ, ಇರೋ ಆಸ್ತಿಗೆಲ್ಲಾ ನನ್ನ ಮಗನೇ ಯಜಮಾನ ಅಂದುಕೊಂಡರೆ, ಈಗ ಇವಳ ಮಗ ಬೇರೆ ಬರುತ್ತಿದ್ದಾನೆ" " ಮಗನೋ,ಮಗಳೋ ಗೊತ್ತಿಲ್ಲ ಅಲ್ವಾ ಈಗಲೇ ಯಾಕೆ ತಲೆ ಕೆಡಿಸಿಕೊಂಡು ಕೂತಿದ್ದೀಯಾ" "ಅಲ್ಲ ಚಿಕ್ಕಮ್ಮ ಗಂಡು ಮಗು ಆದರೆ" "ಹೊಟ್ಟೆಗೆ ಏನಾದರೂ ಕೊಡಲೇ" " ಬೇಡ ಚಿಕಮ್ಮ ಆಗಲೇ ಆರೋ ಏಳೋ ತಿಂಗಳಾಯಿತು, ತಾಯಿಗೇ ಅಪಾಯ" . "ಸರಿ ನೋಡೋಣ ಈಗಲೇ ಯಾಕೆ ತಲೆಕೆಡಿಸಿಕೊಳ್ತಿ" ಎಂದಳು ಪೂರ್ಣಕ್ಕ.

ದಿನಗಳು ಸರಿದು ರಮಣಿಗೆ ತಿಂಗಳು ತುಂಬಿದವು. ಒಂದು ದಿನ ಎಲ್ಲರೂ ಮಾತನಾಡುತ್ತ ಕುಳಿತಿದ್ದಾಗ, ಅಡುಗೆ ಮನೆಯಿಂದ ನೀರು ಕುಡಿಯುತ್ತಾ ಹೊರಗೆ ಬಂದ ರಮಣಿ ಇದ್ದಕ್ಕಿದ್ದ ಹಾಗೆ ಕೈಯಲ್ಲಿ ಇದ್ದ ಗ್ಲಾಸನ್ನು ಕೆಳಗೆ ಎಸೆದು ಹೊಟ್ಟೆ ಹಿಡಿದುಕೊಂಡು ಕೆಳಗೆ ಗಕ್ಕನೆ ಕುಳಿತಳು. ಅವಳಿಗೆ ವಾಟರ್ ಬ್ರೇಕ್ ಆಗಿತ್ತು ಪೂರ್ಣಕ್ಕ ಹಠಾತ್ತನೆ ಹತ್ತಿರ ಹೋಗಿ ಕೆಳಗೆ ಕೂರಿಸಿದಳು. ಪ್ರಸವ ವೇದನೆ ಶುರುವಾಗಿತ್ತು. ರತ್ನಕ್ಕನ ಸಹಾಯದಿಂದ ರಮಣಿಯನ್ನು ಅಲ್ಲೇ ಇದ್ದ ಕೋಣೆಗೆ ಕರೆದುಕೊಂಡುಹೋದಳು. ಮನೆಯಲ್ಲಿ ರಂಗಣ್ಣ ಇರಲಿಲ್ಲ. ರಂಗಣ್ಣ ಅಪ್ಪ, ಅಮ್ಮ ಯಾರದೋ ಮನೆಗೆ ಹೋಗಿದ್ದರು.

ರಮಣಿ ಪೂರ್ಣಕ್ಕನ ಸಹಾಯದಿಂದ ಮಗುವಿಗೆ ಜನ್ಮ ಕೊಟ್ಟಳು. ಮಗು ಕಿಟಾರನೆ ಕಿರುಚಿದಾಗ ಕಣ್ಣು ತೆರೆದ ರಮಣಿ, ಸ್ವಲ್ಪ ಸಮಯದಲ್ಲಿ ಮೂರ್ಛೆ ಹೋದಳು. "ಚಿಕ್ಕಮ್ಮ ಯಾವ ಮಗು" "ಗಂಡು ಮಗು ಕಣೇ" ಎಂದು ಪಿಸುಗುಟ್ಟಿದಳು ಪೂರ್ಣಕ್ಕ. "ಹೌದಾ". "ಹೌದು, ನೋಡು ಈಗ ಒಂದೇ ಉಪಾಯ ಇದನರ ಕತ್ತು ಹಿಸುಕಿಬಿಡೋಣ" " ಚಿಕ್ಕಮ್ಮ, ಏನ್ ಹೇಳ್ತಾ ಇದೀರಾ, ತಪ್ಪಲ್ವಾ" "ತಪ್ಪೇ ಆದರೆ ನಿನ್ನ ಮಗನಿಗೆ ಅರ್ಧ ಅಸ್ತಿ ಸಿಗೋಲ್ಲ, ಅದೇ ಅಲ್ಲ ರಮಣಿಗೆ ಇನ್ನು ಮಕ್ಕಳಾಗಬಹದು, ನಿನ್ನ ಮಗನಿಗೆ ಎಷ್ಟು ಸಿಗುತ್ತೋ ಏನೋ",ನೀನು ಹೂ ಅಂದರೆ, ಈ ಮಗುವೂ ಇರುವುದಿಲ್ಲ, ಮುಂದೆ ಇವಳಿಗೆ ಮಕ್ಕಳಾಗದಂತೆ ಮಾಡುತೇನೆ, ಯೋಚಿಸಿ ನೋಡು, ಹೇಳು" ಎಂದಳು. ರತ್ನಕ್ಕ "ನಿಧಾನವಾಗಿ ಸರಿ ಎಂಬಂತೆ ತಲೆ ಆಡಿಸಿದಳು".

ಪ್ರಸವದಲ್ಲೇ ಮಗು ತೀರಿಹೋಯಿತು ಎನ್ನುವ ಸುದ್ದಿಕೇಳಿದ ರಮಣಿ ಹುಚ್ಚಿಯಂತಾದಳು. ತನ್ನಲ್ಲೇ ತಾನೇ ಮಾತನಾಡತೊಡಗಿದಳು. ಇದ್ದಕ್ಕಿದ್ದಹಾಗೆ ನಗತೊಡಗಿದಳು, ನನ್ನ ಮಗು ಅಳು ಕೇಳಿಸಿತು, ನಗು ಕೇಳಿಸಿತು, ಮಾತು ಕೇಳಿಸಿತು ಎಂದು ಕಿರುಚುತ್ತಾ ಊರೆಲ್ಲಾ ಕಡೆ ತಿರುಗತೊಡಗಿದಳು. ಯಾರಾದರೂ ಮುಟ್ಟಲು ಬಂದರೆ ಕಚ್ಚಲು ಬರುತ್ತಿದ್ದಳು. ಮಾತನಾಡುತ್ತಾ ಮಾತನಾಡುತ್ತಾ ಮಾತೇ ಮುಗಿಯುತು ಎಂಬಂತೆ ಮೌನಿಯಾಗಿಬಿಟ್ಟಳು. ಮತ್ತೆ ಎಂದೂ ಮಾತನಾಡಲಿಲ್ಲ.

ಮನೆಯಲ್ಲಿ ಹೆಚ್ಚು ಸಹಾಯ ಮಾಡುತಿದ್ದ ರಮಣಿ ಮನೆಗಿಂತ ಹೊಲದಲ್ಲೇ ಹೆಚ್ಚು ಸಮಯ ವ್ಯಯಮಾಡಲು ಪ್ರಾರಂಭಿಸಿದಳು. ಬೆಳಿಗ್ಗೆ ತಿಂಡಿ ತಿಂದು ಹೊರಟುಹೋಗುತ್ತಿದ್ದಳು, ರಾತ್ರಿ ಬರುತ್ತಿದ್ದಳು. ಯಾರೊಡನೆಯೂ ಬೆರೆಯುತ್ತಿರಲಿಲ್ಲ, ಮಾತನಾಡುತ್ತಿರಲಿಲ್ಲ. ರಂಗಣ್ಣನಿಗೆ ಮಕ್ಕಳು ಮನೆಗೆ ಬಂದಮೇಲೆ ರಮಣಿಯ ಅಗತ್ಯತೆ ಬೀಳಲಿಲ್ಲ, ಅವನು ಹೆಚ್ಚು ಹೆಚ್ಚು ರತ್ನಕ್ಕನ ಜೊತೆ ಕಳೆಯಲಾರಂಬಿಸಿದ. ಆದರೆ ಮಕ್ಕಳಿಬ್ಬರು ಚಿಕ್ಕಮನ ಜೊತೆ ಹೊರಗಡೆ ಹೋಗಲು ಹಟಮಾಡುತ್ತಿದ್ದವು. ಬೆಳಿಗ್ಗೆ ಎದ್ದ ನಂತರ ಹೊರಗೆ ಹೊರಡುತ್ತಿದ್ದ ರಮಣಿಯ ಜೊತೆ ಹೋಗಲು ಹಠ ಮಾಡುತ್ತಿದ್ದವು. ಮೊದಲು ಉಪೇಕ್ಷಿಸುತ್ತಿದ್ದ ರಮಣಿ ಮಕ್ಕಳನ್ನು ಜೊತೆ ಕರೆದೊಯ್ಯಲು ಪ್ರಾರಂಭಿಸಿದಳು. ಮಕ್ಕಳಿಗೆ ಹೊರಗಡೆ ಆಟವಾಡಿಸು ವುದು, ಮನೆಯಲ್ಲಿ ಊಟ ಮಾಡಿಸುವುದು, ಸ್ನಾನ ಮಾಡಿಸುವುದು ಹೀಗೆ ಮಕ್ಕಳೊಡನೆ ತನ್ನ ಕಾಲ ಕಳೆಯತೊಡಗಿದಳು. ಮಕ್ಕಳ ಜೊತೆ ಹೆಚ್ಚು ಬೆರೆತಷ್ಟು ಸಂತೋಷವಾಗಿರುತ್ತಿದ್ದಳು. ಮಕ್ಕಳೊಡನೆ ಮಾತನಾಡತೊಡಗಿದಳು. ಅವರಿಗೆ ಸಣ್ಣ ಸಣ್ಣ ಕಥೆಗಳನ್ನು ಹೇಳಲಾರಂಬಿಸಿದಳು. ಮಕ್ಕಳನ್ನು ನೋಡಿಕೊಳ್ಳುವುದರಿಂದ ಸಂಪೂರ್ಣ ಮುಕ್ತಿಗೊಂಡ ರತ್ನಕ್ಕ ಖುಷಿಗೊಂಡಳು. ತನ್ನ ಚಿಕ್ಕಮ್ಮನ ಜೊತೆಸೇರಿ ಮನೆ ಯಜಮಾನಿಕೆ ಮಾಡಿಕೊಂಡು, ರಂಗಣ್ಣನ ಆಸ್ತಿಗೆ ತಾನೇ ಒಡತಿಯಂತಾದಳು. ರಾಣಿಯಂತೆ ಮೆರೆಯತೊಡಗಿದಳು.

ಮಕ್ಕಳು ಅಮ್ಮನನ್ನು ಮರೆತೇ ಬಿಟ್ಟರು, ಚಿಕ್ಕಮ್ಮನಿಗೆ ಹೆಚ್ಚು ಹತ್ತಿರವಾದರು. ರಮಣಿ ಮಕ್ಕಳ ಸಹವಾಸದಿಂದ ಸಂಪೂರ್ಣ ಸಾಮಾನ್ಯಸ್ಥಿತಿಗೆ ಬಂದಳು. ಹೆಚ್ಚು ಹೆಚ್ಚು ಜನರ ಜೊತೆ ಬೆರೆಯತೊಡಗಿದಳು, ತನಗೆ ಸಾಧ್ಯವಷ್ಟು ಸಹಾಯಮಾಡತೊಡಗಿದಳು. ಎದೆಯ ಮೂಲೆಯಲ್ಲಿ ಒಂದು ಅನುಕಂಪ, ಭಯ, ಅಪರಾಧಿಭಾವ ಇದ್ದ ರತ್ನಕ್ಕ ರಮಣಿ ಹಣ ಖರ್ಚು ಮಾಡಿದರೂ ಅಡ್ಡಿ ಮಾಡುತ್ತಿರಲಿಲ್ಲ. ಹೀಗೆ ರಮಣಿ ಊರ ಜನಕ್ಕೆ ಹೆಚ್ಚು ಹತ್ತಿರವಾದಳು.

ಮಕ್ಕಳನ್ನು ಎಬ್ಬಿಸಿ ಮುಖ ತೊಳಿಸಿ ಹಾಲುಕೊಟ್ಟು, ಸ್ನಾನ ಮಾಡಿಸಿ, ತಿಂಡಿ ಮಾಡಿಸಿ, ಆಟವಾಡಿಸುವುದು, ಊಟ ಮಾಡಿಸುವುದರ ಜೊತೆ ಮಕ್ಕಳನ್ನು ತನ್ನ ಜೊತೆಯೇ ಮಲಗಿಸಿಕೊಳ್ಳುತ್ತಿದ್ದಳು. ಮಕ್ಕಳನ್ನು ಹೊರಗೆ ಕರೆದೊಯ್ದು ಆಟವಾಡಿಸುತ್ತಿದ್ದಳು.

ಖುಷಿ ಖುಷಿಯಾಗಿದ್ದ ಮಕ್ಕಳನ್ನು ಕಂಡು ರತ್ನಕ್ಕ ಸಂತೋಷಗೊಂಡಳು. ಮಕ್ಕಳು ಹೀಗೆ ಖುಷಿಯಿಂದ ಬೆಳೆದು, ಈ ಆಸ್ತಿ ಅನುಭವಿಸಲಿ, ತನಗೆ ಊರೊಗೋಲಾಗಲಿ ಎಂದುಕೊಂಡಳು. ರಮಣಿಯ ಮಗು ಕಿತ್ತುಕೊಂಡಿರುವುದಕ್ಕೆ ತನ್ನ ಮಕ್ಕಳು ಅವಳ ಜೊತೆ ಇರುವುದಕ್ಕೆ ಅಷ್ಟೇನೂ ಬೇಸರ ಇರಲಿಲ್ಲ. ಹೇಗಿದ್ದರೂ ರಮಣಿಗೆ ಮಕ್ಕಳಾಗುವುದಿಲ್ಲ, ತನ್ನ ಮಕ್ಕಳಿಗೇ ಎಲ್ಲಾ ಆಸ್ತಿ ಎಂದುಕೊಂಡು ಖುಷಿಯ ಕನಸು ಕಾಣತೊಡಗಿದಳು.

ಆದರೆ ಚಿಕ್ಕಮ್ಮ ಪೂರ್ಣಕ್ಕ ಸುಮ್ಮನಿರಲಿಲ್ಲ, "ರತ್ನ ನೀನು ಹೀಗೇ ಇದ್ದರೆ ಮಕ್ಕಳು ನಿನ್ನ ಕೈಬಿಟ್ಟು ಹೋಗುತ್ತಾರೆ. ನೀನು ಬರೀ ಆಸ್ತಿಗೆ ಯಜಮಾನಿ ಆದರೆ ಸಾಲದು ಮಕ್ಕಳು ನಿನ್ನ ಮಾತು ಕೇಳುವಂತಿರಬೇಕು. ಅದೂ ಅಲ್ಲದೆ ಮಕ್ಕಳ ಪ್ರೀತಿ ಅವರು ಚಿಕ್ಕವರಿದ್ದಾಗಲೇ ಹೆಚ್ಚು ಸಿಗುವುದು, ಅವರು ದೊಡ್ಡವರಾದಮೇಲೆ ಅವರ ಪಾಡಿಗೆ ಅವರಿರುತ್ತಾರೆ, ನೀನು ಎಳೆದು ಎಳೆದು ಮಾತನಾಡಿಸಬೇಕು" "ಚಿಕ್ಕಮ್ಮ ನಿನಗೆ ಗೊತ್ತು ನನಗೆ ಮಕ್ಕಳೇ ಪ್ರಪಂಚ, ಅವರನ್ನು ನೋಡುತ್ತಲೇ ಇರುತ್ತೇನೆ, ರಮಣಿಯ ಜೊತೆಯಿದ್ದರೂ ನನ್ನ ಕಣ್ಣು ಅವರಮೇಲೆ ಇರುತ್ತದೆ, ಅವರು ಕಾಣದಿದ್ದರೆ ನಾನು ಜೀವದಿಂದ ಇರಲು ಸಾಧ್ಯವೇ, ಅವರು ದೂರವಾಗುವುದು ಕನಸಿನಲ್ಲೂ ಸಹಿಸುವುದಿಲ್ಲ. ನೀನು ಹೀಗೆ ಹೇಳಿದಮೇಲೆ, ಯೋಚನೆ ಮಾಡಬೇಕು. ನಾಳೆಯಿಂದ ನೋಡಿ ಮಕ್ಕಳು ನನ್ನ ಜೊತೆಯೇ ಹೆಚ್ಚು ಇರುವಂತೆ ನೋಡಿಕೊಳ್ಳುತ್ತೇನೆ, ಪಾಪ ಎಂದುಕೊಂಡು ರಮಣಿ ಜೊತೆ ಬಿಟ್ಟಿದ್ದೆ" ಎಂದಳು ರತ್ನಕ್ಕ. ಆದಿನ ರಾತ್ರಿ ಮಕ್ಕಳ ಜೊತೆ ಸಮಯ ಕಳೆಯುವುದರ ಬಗ್ಗೆ ಕನಸುಕಾಣುತ್ತ ಮಲಗಿದಳು.

ಬೆಳಿಗ್ಗೆ ಎದ್ದು ನೋಡಿದಾಗ, ರಮಣಿ ಮತ್ತು ಮಕ್ಕಳು ಮನೆಯಲ್ಲಿ ಕಾಣಲಿಲ್ಲ.ಎಲ್ಲ ಕಡೆ ಹುಡುಕಿದರೂ ರಮಣಿ, ಮಕ್ಕಳು ಎಲ್ಲೂ ಕಾಣಲಿಲ್ಲ. ಹೊಲದ ಕಡೆಯಿಂದ ಓಡಿಕೊಂಡು ಬಂದ ಆಳು ಮಾದ , ಹೊಲದ ಭಾವಿಯಲ್ಲಿ ರಮಣಿ ಹಾಗು ಮಕ್ಕಳ ಹೆಣ ತೇಲುತ್ತಿದೆ ಎಂದು ಕಿರುಚಿ, ಕಿರುಚಿ ಹೇಳಿದ. "ಮಕ್ಕಳಿಲ್ಲದ ನೋವು ನಿನಗೆ ಆಗಬೇಕಲ್ಲವೇ" ಎಂದು ರಮಣಿ ನಕ್ಕು ರತ್ನಕ್ಕನ ಕಿವಿಯಲ್ಲಿ ಕೂಗಿದಂತಾಯಿತು, ರತ್ನಕ್ಕ ಅಲ್ಲೇ ಕುಸಿದು ಕುಳಿತಳು.

ಕಥಾ ಸಂಕಲನ





ಎಂ.ವಿ. ಶಶಿಭೂಷಣ ರಾಜು
ಅಮೇರಿಕ

ಇರುಳು ಮುಗಿಯುವಾಗ

ಇರುಳು ಮುಗಿಯುವಾಗ
ಮುಕ್ಕಳಿಸಿ ಉಗಿದ ಬೆಳಕಿನ ಚೂರು ಜಗವೆಲ್ಲಾ
ಬೆಳಗಿದರೂ, ಕೆಲ ಜೀವಿಗಳು
ಯಾರದೋ ನೆರಳಲಿ ಬಾಳು ಮುಗಿಸುತ್ತವೆ

ಗತ್ಯಂತರವಿಲ್ಲದೆ, ಎಲ್ಲವ ಅರಿತೂ
ಉಗುಳನುಂಗುವುದು
ವ್ಯಂಗವೊಂದು ಕಿವಿತೂರಿ ಮಿದುಳ
ಹೆಪ್ಪುಗಟ್ಟಿಸಿದರೂ
ಮುಗುಳ್ನಗುವುದು

ಪ್ರಶ್ನಿಸುವ ಮನಗಳ ಚಿವುಟುತ್ತಿರುವಾಗ
ಅನ್ಯಾಯಕ್ಕೆ ಪ್ರತಿಭಟಿಸದಿದ್ದರೆ
ಅನ್ಯಾಯಕ್ಕೊಳಗಾದಾಗ ಒಂಟಿಯಾಗಬೇಕಾಗುತ್ತದೆ

ಅನ್ಯಾಯ ತನಗಾದಾಗ ಮಾತ್ರ
ಪಾತಾಳ ಕಾಣಿಸುವುದು
ತನ್ನ ಸ್ವರ್ಗದಲಿ ಎಲ್ಲವೂ
ಸೊಗಸಾಗಿರುತ್ತದೆ, ಧಗೆ ಕಾಲಬುಡಕ್ಕೆ ಬರುವವರೆಗೆ

ಎಲ್ಲವೂ ಸರಿಯಿದೆ ಎಂದು ಭ್ರಮಿಸಿ
ಸಂಭ್ರಮಿಸಿ
ಗತಕಾಲದ ವೈಭವದ ಬೆಳಕಲಿ
ಭವಿಷ್ಯದ ನೀಲಿನಕ್ಷೆ ಬದಲಾಯಿಸುವುದು

ಇರಲಿ
ನರಕ ಇಲ್ಲವೆನ್ನುವಾಗುವ ಖುಷಿ
ಸ್ವರ್ಗವಿಲ್ಲವೆಂದರೆ ಆಗುವುದಿಲ್ಲ
ನರಕ, ಸ್ವರ್ಗಗಳು ಅದೃಶ್ಯವಾಗುವಾಗ
ಭುವಿ ಸ್ವರ್ಗವಾಗುತ್ತದೆ



ಎಂ.ವಿ. ಶಶಿಭೂಷಣ ರಾಜು
ಅಮೇರಿಕ

ಮೌನದ ರಾಗ

ಮೌನದ ರಾಗ
ವಿಶ್ವದ ಯೋಗ
ಅರಿವೂ ಒಂದು ಸೊಗಸು
ಸುಳಿವೂ ಮಾಗಿದ ಮನಸು
ಮಧುರ ಅನುರಾಗ
ಬಾಳೇ ಶುಭಯೋಗ

ಕಾಲ ಕಾಲ ಕೂಡಿ ಬಂದು, ನನ್ನ ನಿನ್ನ ಹೆಣೆದು ಹೀಗೆ ಕೂಡಿಸಿದೆ
ಮೋಹ ಮೋಹ ಬೇಡಿ ಕಾಡಿ, ಒಲವ ಸುರಿಸಿ ತಳೆದು ಹಾಗೆ ಕಾಡಿಸಿದೆ
ಅಂದು ಇಂದು ವಿಶ್ವದಿ ತಳೆದು, ಕುಣಿವ ಮನಸ ಬೆಳೆಸಿ ನನ್ನ ಆವರಿಸಿದೆ
ಕಂಡು, ಕಂಡು ಕಂಗಳ ಹೊಳಹು, ಸುರಿವ ಮಳೆಯ ಹೊನಲ ಜೊತೆಯ ಮಾಡುತಿದೆ
ಹುಡುಕುತಿದೆ ಎಲ್ಲವ ಹೀಗೆ

ಮೌನದ ರಾಗ
ವಿಶ್ವದ ಯೋಗ

ಹೇಗೆ ಬಂದೆ ಬಾಳಿಗೆ ಹೀಗೆ, ತಂಪ ಹಿಮವ ಒಣಜಗಕೆ ಸುರಿದ ಹಾಗೆ
ಏಕೆ ಬಂದೆ ನನ್ನ ಜಗಕೆ, ಒಂಟಿ ಮನದ ಕೊಳಕೆ ಕಲ್ಲನೆಸುವುದಕೆ
ಎಲ್ಲೆಡೆ ಅರಳಿದೆ ಘಮ ಮಲ್ಲಿಗೆ, ಭಾವ ಉಕ್ಕುವ ಸಮಯ ಒಣಕಲ್ಲಿಗೆ
ಇಂದಲ್ಲ ಅಂದು ಇಲ್ಲಲ್ಲ ಅಲ್ಲಿ, ಜೋಡಿ ವಿಹರಿಸುವ ಕನಸು ಗಗನದಲ್ಲಿ
ಮೂಡುತಿದೆ ಮೆಲ್ಲಗೆ ಹಾಗೆ

ಮೌನದ ರಾಗ
ವಿಶ್ವದ ಯೋಗ



ವಿನಯ್ ಕಟ್ಟೆ

ಭರವಸೆ

ಬೆಳ್ಳಿ ಮೂಡಿತು ಪೂರ್ವ ದಿಕ್ಕಿನಲಿ,
ಹಕ್ಕಿ ಕಲರವ ಶುರುವಾಯ್ತು ಕಾಡಿನಲಿ.
ಇಬ್ಬನಿ ಹನಿಗಳು ಹುಲ್ಲಿನ ಮೇಲೆ,
ಮುತ್ತಿನ ಹಾರದ ಅಂದದ ಮಾಲೆ.

ಹಳೆಯ ನೆನಪುಗಳ ಸರಿಸಿ ದೂರ,
ಮುಂದೆ ಸಾಗಲು ಇದುವೇ ನೇರ.
ಸೂರ್ಯನ ಕಿರಣದ ಹೊಸತಾದ ಆಶೆ,
ಬದುಕಿನ ಹಾದಿಗೆ ಪ್ರೀತಿಯ ಭಾಷೆ.

ಸೋಲು ಗೆಲುವಿನ ಆಟವಿದು ಸರಿ,
ನಗುತ ಸಾಗಲಿ ಜೀವನದ ಲಹರಿ.
ಕನಸಿನ ಲೋಕದ ಪಯಣದ ದಾರಿ,
ನಮ್ಮದಾಗಲಿ ಈ ಸುಂದರ ಸವಾರಿ.



ನಾಗರತ್ನ ಹೆಬ್ಬಾರ್
ಬೆಳ್ಳೆ

ಸಾಹಿತ್ಯ ವೆಂದರೆ....

ಈಗಷ್ಟೇ ಜನಿಸಿದ ಮಗುವಿನ ಅಳುವಿನ ಹಿತಾನುಭೂತಿ
ಹಸು ಮಗುವಿನ ಹುಸಿ ನಗುವಿನ,
ಬೊಚ್ಚ ಬಾಯ ಅಜ್ಜಿ ಅಜ್ಜನ ನಗುವಿನ ಸೆಳೆವು
ಯಾವುದೋ ಪರ್ವತದ ಸಂಧಿ ಗೊಂದಿನಲ್ಲಿ ಜಿನುಗಿ ಹನಿ ಹನಿ
ಕೂಡಿ ಹಳ್ಳ ಹೊಳೆಯಾಗಿ ಜಲಧಾರೆಯಾಗಿ ಜಿಗಿದು ನದಿಯಾಗಿ
ಜುಳು ಜುಳು ಹರಿದು ಸಾಗರ ಸೇರುವ ಜಲದ ರಾಗ
ಹಸಿರು ತುಂಬಿದ ವನದ ಮೌನದೊಳಗೆ ಕಾಡ ಕುಸುಮಗಳ
ಸೌಗಂಧ ಪಸರಿಪ ತಂಗಾಳಿಯ ಸ್ಪರ್ಶ
ಉದಯ ರವಿಯ ಬಣ್ಣದೋಕುಳಿಯ ಬೆರಗು
ಅರುಣನ ಬಿನ್ನಾಣ, ಯೌವ್ವನಿಗ ಆದಿತ್ಯನ ಬಿಸಿಯುಸಿರ ಕಾವು
ಸಂಜೆಯಿಳಿ ಬಿಸಿಲ ಹೊನ್ನ ಕಿರಣದ ಚಿತ್ತಾರ,
ಉಡುರಾಜ ತಿಂಗಳನ ತಂಪು, ತಾರೆಗಳ ಚಮಕು,
ಒಂದೆರಡಲ್ಲ!!!
ಕೋಗಿಲೆಯ ಗಾನ, ಪಿಕಗಳ ಉಲಿ, ಮಯೂರಿಯ ನಾಟ್ಯ,
ಸಾವಿಲ್ಲದ.... ಹಿತವಾದ... ತ್ಯಕ್ತವಾಗದೆ ಅವ್ಯಕ್ತದಿಂದ
ವ್ಯಕ್ತವಾಗುವ ಮನದ ಹಲಬಗೆಯ ಮಧುರ ಭಾವ ಸಾಹಿತ್ಯ.



ಶ್ರದ್ಧಾ ಕಟ್ಟೆ



NeonPainting-MixedArt

ಲಡ್ಡಿಗೆ ಅರಳ್ಳು





ಸರಸ್ವತಿ ಸಾಮಗ
ನ್ಯೂ ಜೆರ್ಸಿ

ಗರಿವಡೆ



ಭಾರತೀಯ ಅಡುಗೆ ಷಡ್ರಸಗಳ ಆಗರ. ಆಯಾ ಪ್ರಾಂತ್ಯಕ್ಕೆ ಅನುಗುಣವಾಗಿ ಮಸಾಲೆಗಳ ಬಳಕೆ ಆಗುತ್ತದೆ. ದಕ್ಷಿಣ ಭಾರತದ ಅಡಿಗೆಯಲ್ಲಿ ಮಸಾಲ ಪದಾರ್ಥಗಳೊಂದಿಗೆ ಕರಿಬೇವು, ತೆಂಗಿನಕಾಯಿ ಮೇಲುಗೈ ಸಾಧಿಸಿದರೆ, ಉತ್ತರ ಭಾರತದ ಅಡಿಗೆಯಲ್ಲಿ, ಕೊತ್ತಂಬರಿ ಸೊಪ್ಪು, ಈರುಳ್ಳಿ, ಟೊಮ್ಯಾಟೋಗಳ ಬಳಕೆ ಧಾರಾಳ. ಸಾಮಾನ್ಯ ಎಲ್ಲರಿಗೂ ತಿಳಿದಿರುವ ಕೆಳಗಿನ 2 ತಿನಿಸುಗಳಲ್ಲೂ ನೀವಿದನ್ನು ಗಮನಿಸಬಹುದು.

ಚಟ್ಟಂಬಡೆ/ ಗರಿವಡೆ:
ಬೇಕಾಗುವ ಸಾಮಾಗ್ರಿ:
ಕಡ್ಲೆ ಬೇಳೆ- 2 ಕಪ್
ಉದ್ದಿನ ಬೇಳೆ- 1 /2 ಕಪ್,
ರುಚಿಗೆ ತಕ್ಕಷ್ಟು ಉಪ್ಪು,
ಚಿಟಿಕೆ ಇಂಗು,
ಹಸಿಮೆಣಸು (ಖಾರಕ್ಕೆ ಅನುಗುಣವಾಗಿ),
ಶುಂಠಿ,
ಧಾರಾಳವಾಗಿ ಕರಿಬೇವಿನ ಸೊಪ್ಪು,
ಕರಿಯಲು ಎಣ್ಣೆ.

ಮಾಡುವ ವಿಧಾನ: ಬೇಳೆಗಳನ್ನು ಒಟ್ಟಿಗೆ ಹಾಕಿ ಒಂದರಿಂದ ಎರಡು ಗಂಟೆಗಳ ಕಾಲ ನೆನೆಸಿಡಿ. ನಂತರ ನೀರನ್ನು ಸೋಸಿ, ತರಿಯಾಗಿ ಉಂಡೆ ಮಾಡುವ ಹದಕ್ಕೆ ಸಾಧ್ಯವಾಗುವಷ್ಟು ಗಟ್ಟಿಯಾಗಿ ರುಬ್ಬಿಕೊಳ್ಳಿ, ರುಬ್ಬುವಾಗ ನೀರು ಸೇರಿಸ ಬಾರದು. ರುಬ್ಬಿದ ಮಿಶ್ರಣಕ್ಕೆ ಹೆಚ್ಚಿದ ಹಸಿಮೆಣಸು, ಶುಂಠಿ, ಕರಿಬೇವು, ಇಂಗು, ಉಪ್ಪು, ಹೆಚ್ಚಿದ ಒಣ ಕೊಬ್ಬರಿ ಹಾಕಿ ಚೆನ್ನಾಗಿ ಕಲಸಿ ಉಂಡೆ ಮಾಡಿ, ಚಪ್ಪಟೆಯಾಗಿ ತಟ್ಟಿ, ಕಾದ ಎಣ್ಣೆಗೆ ಹಾಕಿ ಗರಿ ಗರಿಯಾಗಿ ಕಾಯಿಸಿ. ಗರಿ ಗರಿ ವಡೆ ತಿನ್ನಲು ಸಿದ್ಧ.
ಇದೇ ಮಿಶ್ರಣಕ್ಕೆ ಈರುಳ್ಳಿ, ಸಬ್ಸಿಗೆ ಸೊಪ್ಪು ಬೆರೆಸಿದರೆ ಮಸಾಲ ವಡೆ ಹಾಜರಿ.
ಹಸಿಮೆಣಸಿನ ಬದಲು, ಒಣ ಮೆಣಸು, ಕೊತ್ತಂಬರಿ ಬೀಜ, ಜೀರಿಗೆ ಯನ್ನು ತರಿ ತರಿಯಾಗಿ ಪುಡಿ ಮಾಡಿ, ಬೆರೆಸಿಯೂ ವಡೆ ಮಾಡ ಬಹುದು.



ಸರಸ್ವತಿ ಸಾಮಗ
ನ್ಯೂ ಜೆರ್ಸಿ

ಆಲೂ ಬೆಂಡಿ

ಬೇಕಾಗುವ ಸಾಮಗ್ರಿ: 15 ರಿಂದ 20 ತೊಳೆದು ಒರೆಸಿಕೊಂಡು 1 ಇಂಚಿನ ಗಾತ್ರಕ್ಕೆ ಹೆಚ್ಚಿಕೊಂಡ ಬೆಂಡೆ ಕಾಯಿ.
ಮಧ್ಯಮ ಗಾತ್ರದ ಆಲೂಗಡ್ಡೆ - 1 ರಿಂದ 2 - ಸಾಮಾನ್ಯ ಗಾತ್ರಕ್ಕೆ ಹೆಚ್ಚಿಕೊಳ್ಳಿ (ಬಣ್ಣ ತಿರುಗುವುದನ್ನು ತಡೆಯಲು ನೀರಿನಲ್ಲಿ ನೆನೆಸಿಡಬಹುದು)
ಸಣ್ಣ ಗಾತ್ರದ ಈರುಳ್ಳಿ - 2 . ದಪ್ಪಕ್ಕೆ ಹೆಚ್ಚಿಕೊಳ್ಳಿ
ಹೆಚ್ಚಿದ ಹಸಿಮೆಣಸು - 2 ರಿಂದ 3
3-4 ಎಸಳು ಸಣ್ಣಗೆ ಕತ್ತರಿಸಿದ ಬೆಳ್ಳುಳ್ಳಿ
ಎಣ್ಣೆ - 3 ದೊಡ್ಡ ಚಮಚ
ಜೀರಿಗೆ - 1/2 ಚಮಚ
ಇಂಗು - 1 / 4 ಚಮಚ
ಅರಶಿನ ಪುಡಿ - 1/4 ಚಮಚ
ಕಾಶ್ಮೀರಿ ಕೆಂಪು ಮೆಣಸಿನ ಪುಡಿ -3/4 ಚಮಚ
ಜೀರಿಗೆ ಪುಡಿ - 1 ಟೀ ಚಮಚ
ಧನಿಯಾ ಪುಡಿ - 1 ಟೀ ಚಮಚ
ಕಸೂರಿ ಮೇಥಿ- 1 ಟೀ ಚಮಚ
ಮಾವಿನಕಾಯಿ ಪುಡಿ (ಆಮಚೂರ್ ಪುಡಿ) - 1 ಟೀ ಚಮಚ
2 ಚಿಟಿಕೆ ಗರಂ ಮಸಾಲ
ಉಪ್ಪು - ರುಚಿಗೆ ತಕ್ಕಷ್ಟು
ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು (ಧಾರಾಳವಾಗಿ ಬಳಸಿ)
ನೀರು (ಅಗತ್ಯವಿದ್ದಷ್ಟು)




ಬಾಣಲೆಯಲ್ಲಿ ಎಣ್ಣೆ ಬಿಸಿ ಮಾಡಿ. ಕಾದ ಎಣ್ಣೆಗೆ, ಜೀರಿಗೆ ಹಾಕಿ. ಜೀರಿಗೆ ಪಟ ಪಟ ಆಗುತ್ತಿದ್ದಂತೆ, ಬೆಳ್ಳುಳ್ಳಿ, ಹಸಿಮೆಣಸಿನಕಾಯಿ ಮತ್ತು ಹಿಂಗು ಸೇರಿಸಿ. ಮಧ್ಯಮ ಉರಿಯಲ್ಲಿ 1–2 ನಿಮಿಷ ಹುರಿದುಕೊಳ್ಳಿ. ನಂತರ ಈರುಳ್ಳಿ ಸೇರಿಸಿ ಮಧ್ಯಮ ದಿಂದ ಹೆಚ್ಚಿನ ಉರಿಯಲ್ಲಿ 2 - 3 ನಿಮಿಷ ಹುರಿದುಕೊಳ್ಳಿ. ನಂತರ ಆಲೂಗಡ್ಡೆ ಸೇರಿಸಿ 2–3 ನಿಮಿಷ ಹೆಚ್ಚು ಉರಿಯಲ್ಲಿ ಹುರಿಯಿರಿ/ ಬೇಯಿಸಿ. ನಂತರ ಮುಚ್ಚಳ ಹಾಕಿ ಸಣ್ಣ ಉರಿಯಲ್ಲಿ 4–5 ನಿಮಿಷ ಅಥವಾ ಆಲೂಗಡ್ಡೆ ಬಹುತೇಕ ಬೇಯುವವರೆಗೆ ಬೇಯಿಸಿ. ಆಲೂಗಡ್ಡೆ ಬೆಂದ ನಂತರ ಎಲ್ಲಾ ಮಸಾಲಾ ಪುಡಿಗಳನ್ನು ಮತ್ತು ಕಸೂರಿ ಮೇಥಿಯನು ಸೇರಿಸಿ ಚೆನ್ನಾಗಿ ಕಲಸಿ 1 ರಿಂದ 2 ನಿಮಿಷ ಸಣ್ಣ ಉರಿಯಲ್ಲಿ ಬೇಯಿಸಿ. ಮಸಾಲೆ ಕರಕಲಾಗದಂತೆ ನೋಡಿಕೊಳ್ಳಿ. ನಂತರ ಬೆಂಡೆಕಾಯಿ ಸೇರಿಸಿ ಚೆನ್ನಾಗಿ ಕಲಸಿ. ಮುಚ್ಚಳ ಹಾಕಿ 6 - 8 ನಿಮಿಷ ಮಧ್ಯಮ-ಕಡಿಮೆ ಉರಿಯಲ್ಲಿ ಬೆಂಡೆಕಾಯಿ ಬೇಯುವವರೆಗೆ ಬೇಯಿಸಿ. ಕೊನೆಯಲ್ಲಿ ರುಚಿಗೆ ತಕ್ಕಷ್ಟು ಉಪ್ಪು, ಚಿಟಿಕೆ ಗರಂ ಮಸಾಲಾ ಮತ್ತು ಹೆಚ್ಚಿದ ಕೊತ್ತಂಬರಿ ಸೊಪ್ಪು ಸೇರಿಸಿ ಚೆನ್ನಾಗಿ ಬೆರೆಸಿ. ಚಪಾತಿ ಯೊಂದಿಗೆ ಸವಿಯಲು ಆಲೂ ಬೆಂಡಿ ರೆಡಿ.

ಚಿಣ್ಣರ ಲೋಕ





ವಿಭಾ ಕಾರ್ತಿಕ್
ನ್ಯೂ ಜೆರ್ಸಿ




ವಿಭ ಕಾರ್ತಿಕ್
5ನೇ ತರಗತಿ

ಲೆಗೋ ರೋಬಾಟಿಕ್ಸ್

ನಾನು ಲೆಗೋ ರೋಬಾಟಿಕ್ಸ್ ತಂಡದ ಭಾಗವಾಗಿದ್ದೇನೆ. ನಾವು 8 ಜನರ ತಂಡ ಮತ್ತು ನಾನು ಅದರಲ್ಲಿ ಒಬ್ಬಳೇ ಹುಡುಗಿ. ಪ್ರತಿ ವರ್ಷ, ತಂಡಗಳಿಗೆ ಪರಿಹರಿಸಲು ಒಂದು ಸವಾಲನ್ನು ನೀಡಲಾಗುತ್ತದೆ. ಕಳೆದ ವರ್ಷ ಸಮುದ್ರದ ಬಗ್ಗೆ. ಈ ವರ್ಷ, archaeology ಬಗ್ಗೆ. ಮೊದಲು, ನಾವು ಲೆಗೋಗಳನ್ನು ಬಳಸಿ robot ಅನ್ನು ಕಟ್ಟುತ್ತೇವೆ. ನಂತರ, boardನಲ್ಲಿ ಅಡೆತಡೆಗಳು ಮತ್ತು tasksಗಳನ್ನು ರಚಿಸುತ್ತೇವೆ. ಕೊನೆಗೆ, ನಾವು ಕೆಲವು tasksಗಳನ್ನು ಪರಿಹರಿಸಲು robotಅನ್ನು program ಮಾಡುತ್ತೇವೆ. ನಮ್ಮ ತಂಡದ ಹೆಸರು Robobanana. ನಾನು ತಂಡಕ್ಕಾಗಿ ಲಾಂಛನವನ್ನು design ಮಾಡಿದೆ. ಲೆಗೋ ಸವಾಲಿನ ವಿಜ್ಞಾನ ಪ್ರಯೋಗಗಳನ್ನು ಪರಿಶೀಲಿಸಿ.



ಛವಿ ಮೋಹನ್
ನ್ಯೂ ಜೆರ್ಸಿ




ಛವಿ ಮೋಹನ್
ಸೌತ್ ಬ್ರನ್ಸ್ವಿಕ್ ಕನ್ನಡ ಶಾಲೆ

ಬೃಂಧಾವನ ಶಿಯೋಜನೆಯಿಂದ Sunil Roberts ಅವರ Public speaking seminar ನನಗೆ ಮತ್ತು ನನ್ನಂತೆ ಮಕ್ಕಳಿಗೆ ತುಂಬಾ ಇಷ್ಟ ಆಯಿತು ಮತ್ತು ಉಪಯೋಗವಾಯಿತು. ಆ seminar ಬಗ್ಗೆ ನನ್ನ ಅನುಭವವನ್ನು ಅಂಚಿಕೊಳ್ಳುತ್ತೇನೆ:-
ಮೊದಲು ಎಲ್ಲರು ಒಂದು circle ನಲ್ಲಿ ಕುಳಿತುಕೊಂಡೆವು. ನಂತರ ice breaker activities ಮಾಡಿದೆವು. ಪ್ರತಿಕರ ಒಬ್ಬಬ್ಬರಾ ಮುಂದೆ ಬಂದು ತಮ್ಮ ಬಗ್ಗೆ ಸ್ವಲ್ಪ ಹೇಳಿದೆವು. Sunil Roberts ಅವರು ವೇದಿಕೆ ಮೇಲೆ ಹೋಗಿ ನಡೆದುಕೊಂಡು ಬರಬೇಕು, ವೇದಿಕೆಮೇಲೆ ಎಲ್ಲಿ ನಿಂತು ಕೊಳ್ಳಬೇಕು ನಂತರ ಹೇಗೆ ಮಾತನಾಡಬೇಕು ಎಂದು ಹೇಳಿದರು. ನಂತರ ಅವರು ಗಟ್ಟಿಯಾಗಿ ಮಾತನಾಡುವುದು ಮತ್ತು ಜನಂಗೆ ಚೆನ್ನಾಗಿ ಕೇಳುವಂತೆ ಮಾತನಾಡಬೇಕು ಎಂದು ತಿಳಿಸಿದರು. ಇನ್ನೊಂದು ಆಕ್ಟಿವಿಟಿ ಚೆಲನೆ ಮಾಡುವುದು ಮತ್ತು ನಿಂತಿರುವ ಆಕ್ಟಿ ಬಗ್ಗೆ ಹೇಳಿದರು. ಕೈ ಪೆಟ್ಟಿನಲ್ಲಿ ಇಡದೆ ನಿಲ್ಲಬೇಕು ಎಂದು ತಿಳಿದೆ ಹೇಳಿದರು. ಕೊನೆಯಲ್ಲಿ ಮಕ್ಕಳು ತಮ್ಮ ಜೀವನದ ಅತ್ಯಂತ ಸುಂದರ ಕಥೆಗಳನ್ನು ಹೇಳಿಕೊಂಡು ಮುಂದೆ ಬಂದು ಹೇಳಿದರು. ಎಲ್ಲರೂ ಧೈರ್ಯದಿಂದ ಮಾತನಾಡಿದರು. ಈ Public speaking seminar ತುಂಬಾ ಉಪಕ್ತಿದಾಯಕವಾಗಿತ್ತು. ಎಲ್ಲರೂ ಸಂತೋಷವಾಗಿ ಭಾಗವಹಿಸಿದರು ಮತ್ತು ಹೊಸ ವಿಷಯಗಳನ್ನು ಕಲಿತರು. ಬೃಂಧಾವನಕ್ಕೆ ಧನ್ಯವಾದಗಳು.




ಶ್ರೀನಿಧಿ ಲೋಕನಾಥ್
ನ್ಯೂ ಜೆರ್ಸಿ



ಕಾವೇರಿಯ ಕಥೆ

ಒಂದು ಊರಿನಲ್ಲಿ ಕಲೇರ ಎಂಬ ಒಬ್ಬ ರಾಜನಿದ್ದನು. ಅವನಿಗೆ ಮಕ್ಕಳು ಬೇಕೆಂದು ತಪಸ್ಸನ್ನು ಮಾಡಿದನು. ಬ್ರಹ್ಮದೇವ ಅವನ ತಪಸ್ಸಿಗೆ ಮೆಚ್ಚಿ ಒಂದು ಮಗಳನ್ನು ಕೊಟ್ಟನು. ಆ ಮಗುವಿಗೆ ಕಾವೇರಿ ಎಂದು ಹೆಸರಿಟ್ಟನು. ಅವಳು ದೊಡ್ಡವಾದಮೇಲೆ ಅಗಸ್ತ್ಯ ಎಂಬ ಒಬ್ಬ ಮುನಿಯನ್ನು ಮದುವೆಯಾದಳು. ಅಗಸ್ತ್ಯ ಮುನಿಗೆ ಬಬ್ರವಾಹನನು ತೊಂದರೆ ಕೊಡುತ್ತಿದ್ದನು. ಅವನ ತೊಂದರೆಯನ್ನು ಕಾಪಾಡಲು ಅವಳನ್ನು ನದಿಯಾಗಿ ಮಾಡಿ



ಪೂಜೆ ಚೊಂಬಿನಲ್ಲಿ ಬಚ್ಚಿಟ್ಟನು. ಬಂದು ದಿನ, ಅಗಸ್ತ್ಯ ಮುನಿ ಸ್ನಾನ ಮಾಡಲು ಕೆರೆಗೆ ಹೊದಾಗ ಅವನ ಪೂಜೆ ಚೊಂಬನ್ನು ಬಂದು ದಡದ ಮೇಲೆ ಇಟ್ಟು ಹೊಗುತ್ತಾನೆ. ಆಗ, ಗಣೇಶ ಕಾಗೆ ರೂಪದಲ್ಲಿ ಬಂದು ಆ ಚೊಂಬನ್ನು ಉರುಳಿಸುತ್ತಾನೆ. ಹೀಗೆ ಕಾವೇರಿ ನೀರು ನದಿಯಾಗಿ ಆ ಜಾಗದಲ್ಲಿ ಹರಿಯುತ್ತಲೇ ಇದೆ.

ಕ್ಯಾಮರಾ ಕಣ್ಣಲ್ಲಿ





ಶಾಮಸುಂದರ್ ಹಲ್ಲೇಗೆರೆ
ನ್ಯೂ ಜೆರ್ಸಿ

"ಭೂಲೋಕದ ಸ್ವರ್ಗ - ಸ್ವಿಟ್ಜರ್ಲ್ಯಾಂಡ್"



























ಬೃಂದಾವನ ವಾಣಿ ಹಿಂದಿನ ಸಂಚಿಕೆಗಳನ್ನು ಇಲ್ಲಿ ಓದಬಹುದು :
https://brindavana.org/brindavanavani/











ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ನಮಗೆ ಇಲ್ಲಿ ತಿಳಿಸಿ :

brindavanavani@gmail.com

ಮುಂದಿನ ಸಂಚಿಕೆಯಲ್ಲಿ ಸಿಗೋಣ...